ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)
ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 21
ಸಂಚಿಕೆ 42-43 ಅಕ್ಟೋಬರ್ 12-25, 1998 ರೂ. 4.00



ಕೋಮುವಾದದ ಬೃಹತ್ ಆಕ್ರಮಣಕ್ಕೆ ಪ್ರತಿ ಸವಾಲು




ಸಿ.ಪಿ.ಐ.(ಎಂ) ರಾಜ್ಯ ಕಾರ್ಯದರ್ಶಿಯಾಗಿ ಎಸ್. ಸೂರ್ಯನಾರಾಯಣ ರಾವ್ ಆಯ್ಕೆ

ರಾಜ್ಯದ ಹಿರಿಯ ಕಾರ್ಮಿಕ ಮುಂದಾಳು ಎಸ್. ಸೂರ್ಯನಾರಾಯಣ್‌ರಾವ್ ಸಿ.ಪಿ.ಐ.(ಎಂ)ನ ನೂತನ ರಾಜ್ಯ ಕಾರ್ಯದರ್ಶಿಯಾಗಿ ಆಯ್ಕೆಗೊಂಡಿದ್ದಾರೆ. ಅಕ್ಟೋಬರ್ 16ರಂದು ಬೆಂಗಳೂರಿನಲ್ಲಿ ಸಭೆ ಸೇರಿದ್ದ ಸಿ.ಪಿ.ಐ.(ಎಂ) ರಾಜ್ಯ ಸಮಿತಿ ಸರ್ವಾನುಮತದಿಂದ ಈ ಆಯ್ಕೆ ಮಾಡಿತು.

16ನೇ ರಾಜ್ಯ ಸಮ್ಮೇಳನದಲ್ಲಿ ಕಾರ್ಯದರ್ಶಿಯಾಗಿ ಆಯ್ಕೆಗೊಂಡ ಪಿ. ರಾಮಚಂದ್ರ ರಾವ್‌ರವರ ನಿಧನದಿಂದ ಈ ಸ್ಥಾನ ತೆರವಾಗಿತ್ತು.

'ಕಾಮ್ರೇಡ್ ಸೂರಿ'ಯೆಂದೇ ರಾಜ್ಯದ ಕಾರ್ಮಿಕ ಆಂದೋಲನದಲ್ಲಿ ಪ್ರಖ್ಯಾತರಾದ 75 ವರ್ಷದ ಎಸ್. ಸೂರ್ಯನಾರಾಯಣ ರಾವ್ ಕಳೆದ ಐದು ದಶಕಗಳಿಗೂ ಹೆಚ್ಚು ಕಾಲದಿಂದ ರಾಜ್ಯದ ಪ್ರಜಾಪ್ರಭುತ್ವ ಆಂದೋಲನದಲ್ಲಿ, ಕಮ್ಯುನಿಸ್ಟ್ ಆಂದೋಲನದಲ್ಲಿ ದುಡಿಯುತ್ತಿರುವವರು. 1942ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯ ಕಾಲದಲ್ಲಿ ವಿದ್ಯಾರ್ಥಿಯಾಗಿ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ ಜೈಲು ವಾಸ ಅನುಭವಿಸಿದ ಸೂರಿಯವರು 1946ರಲ್ಲಿ ಹೆಚ್.ಎ.ಎಲ್.ನಲ್ಲಿನ ಉದ್ಯೋಗವನ್ನು ಬಿಟ್ಟು, ತನ್ನ ಪೂರ್ಣಸಮಯವನ್ನು ರಾಜ್ಯದ ಪ್ರಜಾಪ್ರಭುತ್ವ ಆಂದೋಲನಕ್ಕೆ ಅರ್ಪಿಸಿದವರು. ನಂತರ 1948ರಲ್ಲಿ ಮೈಸೂರಿನಲ್ಲಿ ಜವಾಬ್ದಾರಿ ಸರಕಾರ ಸ್ಥಾಪನೆಯ ಚಳುವಳಿಯಲ್ಲಿ ಮತ್ತೆ ಜೈಲುವಾಸ ಅನುಭವಿಸಿದರು. 1948 ರಿಂದ 51ರವರೆಗೆ ಮೂರುವರ್ಷ ಭೂಗತ ಜೀವನವನ್ನೂ ನಡೆಸಬೇಕಾಯಿತು. ಮತ್ತೆ 1962 ಹಾಗೂ 1965ರಲ್ಲಿ ಸ್ವತಂತ್ರ ಭಾರತ ಆಳರಸರು ಅವರನ್ನು ಜೈಲಿಗಟ್ಟಿದ್ದರು. 1975ರಲ್ಲಿ ಕುಖ್ಯಾತ ತುರ್ತು ಪರಿಸ್ಥಿತಿಯಲ್ಲೂ ಅವರು ಜೈಲುವಾಸ ಅನುಭವಿಸಬೇಕಾಯಿತು.



ಅಕ್ಟೋಬರ್ 16ರಂದು ಸೇರಿದ ಸಿ.ಪಿ.ಐ.(ಎಂ) ರಾಜ್ಯ ಸಮಿತಿಯ ಈ ಸಭೆ, ಜಿ.ಎನ್. ನಾಗರಾಜ್‌ರವರನ್ನು 'ಐಕ್ಯರಂಗ' ಪತ್ರಿಕೆಯ ಸಂಪಾದಕರಾಗಿ ಸರ್ವಾನುಮತದಿಂದ ಆಯ್ಕೆ ಮಾಡಿತು.

ಅಲ್ಲದೆ ಈ ಸಭೆ ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯ ಹೋರಾಟದ ಕಾರ್ಯಾಚರಣೆಗಳಿಗೆ ಸೌಹಾರ್ದ ವ್ಯಕ್ತಪಡಿಸುತ್ತಾ ಇದರ ಭಾಗವಾಗಿ ಅಕ್ಟೋಬರ್ 21 ರಿಂದ ನವಂಬರ್ 7ರವರೆಗೆ ರಾಜ್ಯದೆಲ್ಲೆಡೆ ಸಂಚರಿಸುವ 9 ಜಾಥಾಗಳು ಹಾಗೂ ಡಿಸೆಂಬರ್ 11ರ ಸಾರ್ವತ್ರಿಕ ಮುಷ್ಕರ ಮತ್ತು ಹರತಾಳದ ಯಶಸ್ಸಿಗೆ ದುಡಿಯಬೇಕೆಂದು ತನ್ನ ಎಲ್ಲಾ ಸದಸ್ಯರಿಗೆ ಹಾಗೂ ಘಟಕಗಳಿಗೆ ಕರೆ ನೀಡಿದೆ.

ರಾಜ್ಯದ ಕೆಲವು ಜಿಲ್ಲೆಗಳಲ್ಲಿ ವಿಪರೀತ ಮಳೆಯಿಂದಾಗಿ ಉಂಟಾಗಿರುವ ಅಪಾರ ಜೀವ ಹಾನಿ, ಆಸ್ತಿ ನಷ್ಟಗಳ ಬಗ್ಗೆ ಆತಂಕ ವ್ಯಕ್ತಪಡಿಸುತ್ತಾ ರಾಜ್ಯ ಸಮಿತಿ ಅಂಗೀಕರಿಸಿದ ಒಂದು ನಿರ್ಣಯವು ರಾಜ್ಯ ಸರಕಾರ ಪರಿಹಾರ ಕ್ರಮಗಳನ್ನು ತೀವ್ರಗೊಳಿಸಬೇಕು ಎಂದು ಆಗ್ರಹಪಡಿಸಿದೆ. ಇಲ್ಲಿ ಕೇಂದ್ರ ಸರ್ಕಾರದ ಜವಾಬ್ದಾರಿಯೂ ಇದ್ದು ಈ ವಿಷಯದಲ್ಲಿ ಪಕ್ಷ ರಾಜಕೀಯದ ಆಟವಾಡದೆ ತಕ್ಷಣ ಒಂದು ಕೇಂದ್ರೀಯ ತಂಡವನ್ನು ಕಳಿಸಿ ನಷ್ಟದ ಸರ್ವೆ ನಡೆಸಬೇಕು ಹಾಗೂ ಇದನ್ನು ರಾಷ್ಟ್ರೀಯ ಅನಾಹುತ ಎಂದು ಪರಿಗಣಿಸಿ ತ್ವರಿತವಾಗಿ ಗರಿಷ್ಟ ಪರಿಹಾರ ಒದಗಿಸಬೇಕು ಎಂದು ರಾಜ್ಯ ಸಮಿತಿ ಒತ್ತಾಯಿಸಿದೆ.

ಅಸಹನೀಯ ಬೆಲೆಯೇರಿಕೆ ತಂದಿರುವ ಆರ್ಥಿಕ ಉದಾರೀಕರಣದ ನೀತಿಗಳ ವಿರುದ್ಧ ಬಲಿಷ್ಠ ಆಂದೋಲನ

ಮೂರನೇ ಪರ್ಯಾಯದ ರಚನೆ

ಇದು ಕಲ್ಕತ್ತೆಯಲ್ಲಿ ಅಕ್ಟೋಬರ್ 11 ರಂದು ಮುಕ್ತಾಯಗೊಂಡ ಸಿ.ಪಿ.ಐ.(ಎಂ)ನ ಐತಿಹಾಸಿಕ ಹದಿನಾರನೇ ಮಹಾಧಿವೇಶನದ ಸಂದೇಶ. ಮಹಾಧಿವೇಶನದ ಕೊನೆಯ ಬಹಿರಂಗ ಅಧಿವೇಶನದಲ್ಲಿ ಮಾತನಾಡುತ್ತಾ ಪುನರಾಯ್ಕೆಗೊಂಡ ಪ್ರಧಾನ ಕಾರ್ಯದರ್ಶಿ ಹರ್ಕಿಷನ್‌ಸಿಂಗ್ ಸುರ್ಜಿತ್‌ರವರು ಮಹಾಧಿವೇಶನದ ಕಲಾಪಗಳ ಸಾರವನ್ನು ಹೀಗೆ ಬಣ್ಣಿಸಿದರು.

ಕೋಮುವಾದಿ ಶಕ್ತಿಗಳು ಬೃಹತ್ ಪ್ರಮಾಣದಲ್ಲಿ ಆಕ್ರಮಣಗಳನ್ನು ಆರಂಭಿಸಿವೆ. ಇದು ಈಗಂತೂ ಎಲ್ಲರ ಗಮನಕ್ಕೂ ಬರುತ್ತಿದೆ. ದೇಶವನ್ನು, ಪ್ರಜಾಪ್ರಭುತ್ವವನ್ನು ಉಳಿಸಬೇಕಾದರೆ ಈ ಮಹಾ ಪಿಡುಗಿನ ಸವಾಲನ್ನು ಎದುರಿಸಲೇಬೇಕು. ಸಿ.ಪಿ.ಐ.(ಎಂ) ಈ ಸಮರದಲ್ಲಿ ಮುಂಚೂಣಿಯಲ್ಲಿರಬೇಕು.

1991ರಲ್ಲಿ ಆರಂಭವಾದ ಉದಾರೀಕರಣ, ಜಾಗತೀಕರಣದ ಆರ್ಥಿಕ ನೀತಿಗಳು ಬಹುಪಾಲು ಜನಗಳಿಗೆ ಕೊಟ್ಟದ್ದು ಸಂಕಟಗಳ ಸರಮಾಲೆಯನ್ನಷ್ಟೇ. ಐ.ಎಂ.ಎಫ್.-ವಿಶ್ವಬ್ಯಾಂಕ್ ಹೇರಿದ ಈ ನೀತಿಗಳು ಯಾವ ದೇಶದಲ್ಲೂ ಜನಗಳ ಸಮಸ್ಯೆಯನ್ನು ಬಗೆಹರಿಸಿಲ್ಲ. ಬದಲಿಗೆ ಉಲ್ಬಣಗೊಳಿಸಿದೆ. ಇದು ಕೂಡಾ ಈಗ ಎಲ್ಲರೂ ಒಪ್ಪಬೇಕಾಗಿ ಬಂದಿದೆ. ಈ ಜಾಗತಿಕ ಅನುಭವವಿದ್ದರೂ ಬಿ.ಜೆ.ಪಿ. ನೇತೃತ್ವದ ಸರಕಾರ 'ಸ್ವದೇಶಿ'ಯ ಮುಖವಾಡವನ್ನೆಲ್ಲಾ ಕಳಚಿ ಅವೇ ನೀತಿಗಳನ್ನು ಇನ್ನಷ್ಟು ರಭಸದಿಂದ ಮುಂದುವರೆಸುತ್ತಿದೆ. ಇದರ ದುಷ್ಫಲವೇ ಜನಗಳನ್ನು ಹಿಂಡಿ ಹಿಪ್ಪೆ ಮಾಡುತ್ತಿರುವ ಭಾರೀ ಬೆಲೆಯೇರಿಕೆ. ಇದರ ವಿರುದ್ಧ, ಇದನ್ನು ತಂದ ಉದಾರೀಕರಣ-ಜಾಗತೀಕರಣ-ಖಾಸಗೀಕರಣ ನೀತಿಗಳ ವಿರುದ್ಧ ಒಂದು ಬಲಿಷ್ಟ ಆಂದೋಲನವನ್ನು ಹರಿಯಬಿಡಬೇಕು.


ಕಾಂಗ್ರೆಸ್‌ನ 45 ವರ್ಷಗಳ ಆಡಳಿತ, ಅದರ ಆರ್ಥಿಕ ನೀತಿಗಳು, ತನ್ನ ಜಾತ್ಯಾತೀತ ನಿಲುವನ್ನು ಸಡಿಲಗೊಳಿಸಿ ಕೋಮುವಾದಿಗಳೊಂದಿಗೆ ಅದು ಮಾಡಿಕೊಂಡ ರಾಜಿಯಿಂದಾಗಿ ಜನಗಳಿಂದ ದೂರವಾಗಿ ಶಕ್ತಿಗುಂದಿದ್ದರೆ, ಬಿ.ಜೆ.ಪಿ.ಯ ಪರ್ಯಾಯವೆಂದರೆ ಫ್ಯಾಸಿಸ್ಟ್ ಮಾದರಿಯ ಹಿಂದುತ್ವವನ್ನಾಧರಿಸಿದ ಜನಗಳ ಐಕ್ಯತೆಯನ್ನು ಭಂಜಿಸುವ, ಅವರ ಬದುಕನ್ನು ಇನ್ನಷ್ಟು ದುರ್ಭರಗೊಳಿಸುವ ಅಪಾಯಕಾರಿ ಪರ್ಯಾಯ. ಇದೂ ಈಗಾಗಲೇ ಎಲ್ಲರ ಅನುಭವಕ್ಕೆ ಬರುತ್ತಿದೆ. ಇಂತಹ ಸನ್ನಿವೇಶದಲ್ಲಿ ಎಲ್ಲಾ ಎಡ, ಜಾತ್ಯಾತೀತ, ಪ್ರಜಾಪ್ರಭುತ್ವ ಶಕ್ತಿಗಳನ್ನು ಅಣಿನೆರೆಸಿ ಮೂರನೇ ಪರ್ಯಾಯವನ್ನು ಕಟ್ಟಬೇಕಾಗಿದೆ. ಇದು ನಮ್ಮ ಗುರಿಯಾದ ಎಡ ಪ್ರಜಾಪ್ರಭುತ್ವ ರಂಗದ ಸ್ಥಾಪನೆ ಹಾಗೂ ಆ ಮೂಲಕ ಜನತಾ ಪ್ರಜಾಪ್ರಭುತ್ವ ಕ್ರಾಂತಿಯತ್ತ ಸಾಗಲು ಅಗತ್ಯ ಎಂದರು ಸುರ್ಜಿತ್.

ಈ ಕರ್ತವ್ಯಗಳನ್ನು ನಾವು ಯಶಸ್ವಿಯಾಗಿ ನಿರ್ವಹಿಸಬೇಕಾದರೆ ನಮ್ಮ ದೌರ್ಬಲ್ಯಗಳನ್ನು, ಕೊರತೆಗಳನ್ನು ಮೀರಿ ನಿಲ್ಲಬೇಕಾಗಿದೆ. ಶತ್ರು ಬಲಿಶಾಲಿಯಾಗಿದ್ದಾನೆ. ಅವನನ್ನೆ ದುರಿಸಲು ನಮ್ಮ ಬಲವಷ್ಟೇ ಸಾಲದು. ಆದರೂ ನಮ್ಮದು ಸಮರಗಳಲ್ಲಿ ಪುಟಗೊಂಡ ಪಕ್ಷ, ನಾವು ಒಂದು ಧ್ಯೇಯ ಸಾಧನೆಗೆ ಬದ್ಧರಾದವರು, ಬೇರೆ ಯಾವ ಪಕ್ಷವೂ ಇದರಲ್ಲಿ ನಮ್ಮನ್ನು ಸರಿಗಟ್ಟಲಾರದು ಎಂಬುದನ್ನು ಮರೆಯಬಾರದು. ಕಮ್ಯುನಿಸ್ಟ್ ಪ್ರಣಾಳಿಕೆ ಪ್ರಕಟವಾದ ನಂತರದ 150 ವರ್ಷಗಳ ಅನುಭವಗಳ ಮಾರ್ಗದರ್ಶನವಿದೆ. ಬಂಡವಾಳಶಾಹಿಯೆಂಬುದು ಮಾನವ ಸಮಾಜದ ಕೊನೆಯ ಹಂತವಲ್ಲ ಎಂದು ಈಗ ಸ್ಪಷ್ಟವಾಗಿದೆ. ಮಾನವ ಸಮಾಜ ಸದಾ ಹೀಗೆಯೇ ಇರಲಿಲ್ಲ, ಹೀಗೆಯೇ ಇರುವುದಿಲ್ಲ ಕೂಡಾ. ಈ ಸಮಾಜವನ್ನು ಬದಲಿಸಿ, ಶೋಷಣೆಯಿಲ್ಲದ ಒಂದು ಹೊಸ ಸಾಮಾಜಿಕ ವ್ಯವಸ್ಥೆಯತ್ತ ಸಾಗುವ ಗುರಿಗೆ ಬದ್ಧರಾದ ನಾವು ಮಹಾಧಿವೇಶನದ ಈ ಸಂದೇಶವನ್ನು ಜನರ ನಡುವೆ ಕೊಂಡೊಯ್ಯೋಣ ಎಂದರು ಸುರ್ಜಿತ್‌ರವರು.

ನಂತರ ನಡೆದ ಬೃಹತ್ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಜ್ಯೋತಿ ಬಸು ಹಾಗೂ ಸುರ್ಜಿತ್‌ರವರು 16ನೇ ಮಹಾಧಿವೇಶನದ ಈ ಸಂದೇಶವನ್ನು ಅಲ್ಲಿ ನೆರೆದಿದ್ದ ಲಕ್ಷಾಂತರ ಜನರ ಮುಂದಿಟ್ಟರು. ಮತ-ಧರ್ಮದ ಆಧಾರದಲ್ಲಿ ದೇಶದ ಐಕ್ಯತೆ ಸಾಧ್ಯವಿಲ್ಲ ಎಂಬುದಕ್ಕೆ ನಮ್ಮ ನೆರೆದೇಶಗಳ ಅನುಭವವೇ ಸಾಕ್ಷಿ. ಜನಗಳನ್ನು ಮರೆತ ನೀತಿಗಳ ದುಷ್ಪರಿಣಾಮಗಳಿಗೆ ಕಾಂಗ್ರೆಸ್‌ನ ಆಳ್ವಿಕೆಯೇ ಸಾಕ್ಷಿ. ಒಂದು ಜನ-ಪರ ಪರ್ಯಾಯ ಏನು ಮಾಡಬಲ್ಲದು ಎಂದು ಪಶ್ಚಿಮ ಬಂಗಾಳದ ಎಡರಂಗದ ಎರಡು ದಶಕಗಳಿಗೂ ಮೀರಿದ ನಿರಂತರ ಆಳ್ವಿಕೆಯೇ ಸಾಕ್ಷಿ. ಆದರೂ ನಾವು ಆತ್ಮಸಂತೃಪ್ತಿಯಿಂದಿರಬಾರದು ಎಂದು ಜ್ಯೋತಿ ಬಸು ಎಚ್ಚರಿಸಿದರು. ○



ಅಕ್ಟೋಬರ್11 ರ ಕಲ್ಕತ್ತೆಯಲ್ಲಿ ಕೆಂಬಾವುಟಗಳ ಮಹಾಸಾಗರ



ಮಹಾಧಿವೇಶನದ ದಿನಚರಿಯಿಂದ...



ಕಲ್ಕತ್ತಾ ನಗರದಲ್ಲಿ ಸ್ವಾತಂತ್ರ್ಯ ಹೋರಾಟದ ಬಂಗಾಳದ ಕವಿ ನಜರುಲ್ ಇಸ್ಲಾಮ್ ನೆನಪಿನ ಕಲಾಕ್ಷೇತ್ರ ನಜರುಲ್ ಮಂಚ್ ಒಂದು ವಾರದ ಕಾಲ ಇ.ಎಂ.ಎಸ್. ನಗರವಾಗಿ ಇಡೀ ದೇಶದ ಗಮನ ಸೆಳೆದಿತ್ತು. ಈ ಒಂದು ವಾರದ ಕಲಾಪಗಳ ಒಂದು ಪಕ್ಷಿ ನೋಟ.

5.10.98

ದೇಶದ ಮೂಲೆ-ಮೂಲೆಗಳಿಂದ ಹಿಂದಿನ ದಿನ ಅಥವಾ ಅದೇ ದಿನ ಬೆಳಗ್ಗೆ ಬಂದಿಳಿದ ಸುಮಾರು 700 ಪ್ರತಿನಿಧಿಗಳು, ವೀಕ್ಷಕರು ಹಾಗೂ ಅತಿಥಿಗಳು, 21 ವಿದೇಶಿ ಪ್ರತಿನಿಧಿಗಳ ಸಮ್ಮುಖ ಬಂಗಾಳದ ಹಿರಿಯ ಕಮ್ಯುನಿಸ್ಟ್ ಮುಂದಾಳು ಕಾಮ್ರೇಡ್ ಬಿನೋಯ್ ಚೌಧುರಿ ಕೆಂಬಾವುಟ ವನ್ನೇರಿಸಿದಾಗ ನೆರೆದಿದ್ದ ಎಲ್ಲರೂ ಬಿಗಿಮುಷ್ಟಿ ಎತ್ತಿ ಹಿಡಿದು ಕೆಂಪುನಮನ ಮಾಡುತ್ತಿದ್ದಂತೆ ಬಂಗಾಳದ ಇಪ್ಟಾ ತಂಡದ 'ಹಾರುತಿದೆ ನೋಡಿ ಕೆಂಬಾವುಟ' ಎಂಬರ್ಥದ ಹಿಂದೀ ಹಾಡು. ಈ ಹಾಡಿನ ಸ್ಫೂರ್ತಿಯೊಂದಿಗೆ ಆರಂಭ. ಪಕ್ಕದಲ್ಲೇ ಕಲಾತ್ಮಕ ಹುತಾತ್ಮ ಸ್ತಂಭ ನಿರ್ಮಿಸಲಾಗಿತ್ತು. ಅದರ ಎದುರಲ್ಲೇ ನಿರ್ಮಿಸಿದ ವೇದಿಕೆಯಲ್ಲಿ ಪ್ರಧಾನ ಕಾರ್ಯದರ್ಶಿ ಸುರ್ಜಿತ್ ಮತ್ತು ಇತರ ಎಲ್ಲಾ ಪೊಲಿಟ್‌ಬ್ಯೂರೋ ಸದಸ್ಯರೂ ಆಸೀನರಾಗಿದ್ದರು. ಸುರ್ಜಿತ್, ಜ್ಯೋತಿ ಬಸುರವರ ಫೋಟೋ ಸೆರೆ ಹಿಡಿಯಲು ಪತ್ರಕರ್ತರ ನೂಕುನುಗ್ಗಲು. ಪ್ರಧಾನ ಕಾರ್ಯದರ್ಶಿ ಸುರ್ಜಿತ್‌ರವರಿಂದ ಹುತಾತ್ಮರ ನೆನಪಿಗೆ ಪುಷ್ಪಗಳನ್ನರ್ಪಿಸಿ ಲಾಲ್ ಸಲಾಂ. ಅವರ ಹಿಂದೆ ಜ್ಯೋತಿ ಬಸು, ಪೊಲಿಟ್ ಬ್ಯೂರೋದ ಇತರ ಸದಸ್ಯರು, ಕೇಂದ್ರ ಸಮಿತಿ ಸದಸ್ಯರು, ರಾಜ್ಯ ಸಮಿತಿಗಳ ಕಾರ್ಯದರ್ಶಿಗಳು, ವಿದೇಶಿ ಪ್ರತಿನಿಧಿಗಳು ಹಾಗೂ ಇತರ ಎಲ್ಲಾ ಪ್ರತಿನಿಧಿಗಳು, ವೀಕ್ಷಕರಿಂದ ಹೊಸದೊಂದು ಸಮಾಜದ ಕನಸು ಹೊತ್ತು ಅದಕ್ಕಾಗಿ ಪ್ರಾಣಾರ್ಪಣೆ ಮಾಡಿದ, ವರ್ಗಶತ್ರುಗಳ ಧಾಳಿಗಳಿಗೆ ಬಲಿಯಾದ ಸಂಗಾತಿಗಳ ನೆನಪಿಗೆ ಲಾಲ್ ಸಲಾಂ ಅರ್ಪಿಸಿ ಸಭಾಂಗಣ ಪ್ರವೇಶ.

• ಎಲ್ಲರೂ ಸಭಾಂಗಣ ಪ್ರವೇಶಿಸಿದ ಮೇಲೆ ಸುರ್ಜಿತ್ 16ನೇ ಮಹಾಧಿವೇಶನ ಆರಂಭವಾಗಿದೆ ಎಂದು ಘೋಷಿಸಿದರು. ಅಧ್ಯಕ್ಷ ಮಂಡಳಿಯ ಸದಸ್ಯರುಗಳ ಹೆಸರುಗಳನ್ನು ಸೂಚಿಸಿದರು - *ಜ್ಯೋತಿಬಸು, ಎಂ.ಹನು ಮಂತರಾವ್, ಸುಶೀಲಾಗೋಪಾಲನ್, ಮಹಮ್ಮದ್ ಅಮೀನ್, ಗಣೇಶ ಶಂಕರ ವಿದ್ಯಾರ್ಥಿ, ಬಾಜುಬನ್ ರಿಯಾಂಗ್ ಮತ್ತು ಕೆ.ವರದರಾಜನ್*. ಜ್ಯೋತಿ ಬಸು ಅಧ್ಯಕ್ಷರ ಮಂಡಳಿಯ ಸಂಚಾಲಕರು. ಸುರ್ಜಿತ್ ಸೂಚನೆಗೆ ಸಭೆಯ ಅಂಗೀಕಾರ.

• ಜ್ಯೋತಿಬಸುರವರಿಂದ ಸ್ವಾಗತ ಭಾಷಣ. ನಂತರ ಶ್ರದ್ಧಾಂಜಲಿ. ಅಧ್ಯಕ್ಷ ಮಂಡಳಿಯ ಎಂ.ಹನುಮಂತರಾವ್ ಹುತಾತ್ಮರಿಗೆ ಶ್ರದ್ಧಾಂಜಲಿ ಅರ್ಪಿಸಿದರು. ಇ.ಎಂ.ಎಸ್., ಸುನಿಲ್ ಮೈತ್ರ, ಕೇಂದ್ರ ಸಮಿತಿಯ ಸದಸ್ಯರುಗಳಾಗಿದ್ದ ಗೋದಾವರಿ ಪರುಳೇಕರ್, ಚಡಯನ್ ಗೋವಿಂದನ್, ಪಿ.ರಾಮಚಂದ್ರರಾವ್ ಮತ್ತಿತರ ಅಗಲಿದ ಮುಖಂಡರಿಗೆ ಪ್ರಾಣಾರ್ಪಣೆ ಮಾಡಿದ ಸಂಗಾತಿಗಳ ನೆನಪಿನಲ್ಲಿ ಸಭೆ ಎದ್ದು ನಿಂತು ಮೌನ ಅರ್ಪಣೆ. ಇ.ಎಂ.ಎಸ್. ರವರಿಗೆ ಶ್ರದ್ಧಾಂಜಲಿಯನ್ನು ಜ್ಯೋತಿ ಬಸುರವರು ಓದಿದರು. ನಂತರ ನಿರ್ವಾಹಕ ಸಮಿತಿ ಮತ್ತು ಅರ್ಹತಾ ಪರಿಶೀಲನಾ ಸಮಿತಿಗಳ ರಚನೆ. ಇಡೀ ಪೊಲಿಟ್‌ಬ್ಯೂರೋ ನಿರ್ವಾಹಕ ಸಮಿತಿಯಾಗಿ ಹಾಗೂ ಸುಕೋಮಲ್ ಸೆನ್(ಸಂಚಾಲಕರು) ಪಿ.ಮಧು ಹಾಗೂ ಮಹೇಂದ್ರಸಿಂಗ್ ರವರಿದ್ದ ಅರ್ಹತಾ ಪರಿಶೀಲನಾ ಸಮಿತಿಯನ್ನು ರಚಿಸಲಾಯಿತು.

• ಮುಂದಿನ ಕಾರ್ಯಕ್ರಮ - **ಮಹಾಧಿವೇಶನದ ಕರಡು ರಾಜಕೀಯ ನಿರ್ಣಯದ ಮಂಡನೆ** - ಪ್ರಧಾನ ಕಾರ್ಯದರ್ಶಿಯವರಿಂದ. ಮಧ್ಯಾಹ್ನ ಒಂದು ಗಂಟೆಗೆ ಮೊದಲ ಅಧಿವೇಶನ ಅಂತ್ಯ.

ಎರಡನೇ ಅಧಿವೇಶನ : ಸಂಜೆ 4 ಗಂಟೆಗೆ ಆರಂಭ. ನಾಲ್ಕು ಮೂಲಭೂತ ವೈರುಧ್ಯಗಳು ಮತ್ತು ಮೂರನೇ ಪರ್ಯಾಯದ ಬಗ್ಗೆ ಸುರ್ಜಿತ್‌ರವರಿಂದ ವಿವರಣೆ - ಮಹಾಧಿವೇಶನದ ಮೊದಲ ತಿದ್ದುಪಡಿಗಳ ಹಿನ್ನೆಲೆಯಲ್ಲಿ. ನಂತರ ಸೀತಾರಾಂ ಯೆಚೂರಿಯವರಿಂದ ಮಹಾಧಿವೇಶನದ ಮೊದಲು ದೇಶದೆಲ್ಲೆಡೆಯಿಂದ ರಾಜಕೀಯ ನಿರ್ಣಯದ ಮೇಲಿನ ತಿದ್ದುಪಡಿಗಳ ಬಗ್ಗೆ ಠರಾವಿನ ಮಂಡನೆ-ವಿವರಣೆ - ಅಂಗೀಕಾರ.

• ಕರಡು ರಾಜಕೀಯ ನಿರ್ಣಯದ ಮೇಲೆ ವಿವಿಧ ರಾಜ್ಯಗಳಿಗೆ ಹಾಗೂ ಕೇಂದ್ರ ಘಟಕಗಳಿಗೆ ಸಮಯಾವಧಿಯ ಪ್ರಕಟಣೆ.

• ಕ್ರಿಶ್ಚಿಯನ್ ಕೋಮಿನ ಜನಗಳ ಮೇಲೆ ಹೆಚ್ಚುತ್ತಿರುವ ಧಾಳಿಗಳ ಬಗ್ಗೆ ನಿರ್ಣಯ ಮಂಡನೆ - ಪ್ರಕಾಶ್ ಕಾರಟ್‌ರವರಿಂದ. ಎಂ.ಎ.ಬೇಬಿ ಯವರಿಂದ ಅನುಮೋದನೆ.

• ವಿದೇಶಿ ಪ್ರತಿನಿಧಿಗಳಿಂದ ಅಭಿನಂದನಾ ಭಾಷಣಗಳು - ಸೀತಾರಾಂ ಯೆಚೂರಿಯವರಿಂದ ಪರಿಚಯ ಹಾಗೂ ಕಮ್ಯುನಿಸ್ಟ್ ಹಾಗೂ ಕಾರ್ಮಿಕರ ಪಕ್ಷಗಳ ಪ್ರತಿನಿಧಿಗಳಿಂದ ಅಭಿನಂದನೆಗಳು. ಸಂಜೆ 6.30 ರಿಂದ 8.30 ರ ವರೆಗೆ ಈ ಕಾರ್ಯಕ್ರಮ ನಡೆಯಿತು.

6.10.98 -

'ಇಪ್ಟಾ' ತಂಡದವರಿಂದ ಬಂಗಾಳಿ ಕ್ರಾಂತಿಗೀತೆಗಳೊಂದಿಗೆ ಬೆಳಿಗ್ಗೆ 9 ಗಂಟೆಗೆ - ಮೂರನೇ ಅಧಿವೇಶನ ಆರಂಭ. ಕರಡು ರಾಜಕೀಯ ನಿರ್ಣಯದ ಮೇಲೆ ಚರ್ಚೆ ಆರಂಭ.

1 ಗಂಟೆಯ ವರೆಗೆ ನಡೆದ ಅಧಿವೇಶನದಲ್ಲಿ 13 ಪ್ರತಿನಿಧಿಗಳು ಮಾತನಾಡಿದರು.

• ಸಂಜೆ 4 ಗಂಟೆಗೆ ಆರಂಭವಾದ ನಾಲ್ಕನೇ ಅಧಿವೇಶನದಲ್ಲಿ ಇನ್ನೂ 13 ಪ್ರತಿನಿಧಿಗಳು ಭಾಗವಹಿಸಿದರು.

• ನಡುವೆ ಸುರ್ಜಿತ್ ತ್ರಿಪುರಾ ಪರಿಸ್ಥಿತಿ ಕುರಿತ ನಿರ್ಣಯ ಮಂಡಿಸಿದರು. ಬಿನೋಯ್ ಚೌಧರಿ ಅನುಮೋದಿಸುತ್ತಾ ತ್ರಿಪುರಾ ದಿನ ಆಚರಿಸಬೇಕೆಂದು ಸೂಚಿಸಿದರು.

• 8 ಗಂಟೆಯ ವರೆಗೆ ರಾಜಕೀಯ ನಿರ್ಣಯದ ಮೇಲಿನ ಚರ್ಚೆ ಮುಂದುವರೆಯಿತು.

7.10.98 :

ಖರನ್‌ಪುರದ ತಲಾ ತಂಡದಿಂದ ತೆಲುಗು ಕ್ರಾಂತಿಗೀತೆಗಳೊಂದಿಗೆ 5ನೇ ಅಧಿವೇಶನ ಬೆಳಿಗ್ಗೆ 9 ಗಂಟೆಗೆ ಆರಂಭ. ಮುಂದುವರಿದ ಕರಡು ರಾಜಕೀಯ ನಿರ್ಣಯ ಕುರಿತ ಚರ್ಚೆಯಲ್ಲಿ ಇನ್ನೂ 12 ಸಂಗಾತಿಗಳು ಭಾಗವಹಿಸಿದರು. ನಡುವೆ ಮೊದಲ ದಿನ ಬರಲಾಗದ ಫ್ರೆಂಚ್, ಗ್ರೀಸ್ ಹಾಗೂ ಸ್ಪೇನಿನ ಪ್ರತಿನಿಧಿಗಳ ಪರಿಚಯ.

• ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯ ಡಿಸೆಂಬರ್ 11 ರ ಕಾರ್ಯಾಚರಣೆಗೆ ಬೆಂಬಲವಾಗಿ ನಿರ್ಣಯದ ಮಂಡನೆ - ಎಂ.ಕೆ.ಫಂದೆಯವರಿಂದ - ಬಿನೋಯ್ ಕೊನಾರ್‌ರವರಿಂದ ಅನುಮೋದನೆ.

ಆರನೇ ಅಧಿವೇಶನ: ಸಂಜೆ 4 ಗಂಟೆಗೆ ಅಸ್ಸಾಮೀ ಕ್ರಾಂತಿಗೀತೆಗಳೊಂದಿಗೆ ಆರಂಭ. ಬೆಲೆಯೇರಿಕೆ ವಿರುದ್ಧ ನಿರ್ಣಯ ಮಂಡನೆ - ಎಸ್.ಆರ್.ಪಿಳ್ಳೆಯವರಿಂದ. ಮಹಮ್ಮದ್ ಸಲೀಂ ರವರಿಂದ ಅನುಮೋದನೆ.

ನಂತರ ಸುರ್ಜಿತ್‌ರವರಿಂದ ಕರಡು ರಾಜಕೀಯ ನಿರ್ಣಯದ ಮೇಲಿನ ಚರ್ಚೆಗಳಿಗೆ ಉತ್ತರ. ಮಹಾಧಿವೇಶನದಲ್ಲಿ ಪ್ರತಿನಿಧಿಗಳು ಸಲ್ಲಿಸಿದ ತಿದ್ದುಪಡಿಗಳ ಬಗ್ಗೆ ಸೀತಾರಾಂ ಯೆಚೂರಿಯವರಿಂದ ವರದಿ.

16ನೇ ಅಧಿವೇಶನದ ಕರಡು ರಾಜಕೀಯ ನಿರ್ಣಯ ಅವಿರೋಧವಾಗಿ ಅಂಗೀಕೃತ.

8.10.98

7ನೇ ಅಧಿವೇಶನ ಬೆಳಗ್ಗೆ 9 ಗಂಟೆಗೆ ತಮಿಳು ಮತ್ತು ಮಲೆಯಾಳಂ ಗೀತೆಗಳೊಂದಿಗೆ ಆರಂಭ.

• ಬೆಲೆಯೇರಿಕೆ ಕುರಿತ ನಿರ್ಣಯ ಕೆಲವು ತಿದ್ದುಪಡಿಗಳೊಂದಿಗೆ ಅಂಗೀಕೃತ.

• **ಸುರ್ಜಿತ್‌ರವರಿಂದ ರಾಜಕೀಯ-ಸಂಘಟನಾ ವರದಿಯ ಮಂಡನೆ.**

• ಈ ವರದಿಯ ಮೇಲೆ ಚರ್ಚೆಯ ವಿಧಾನ - ಸಂಯುಕ್ತ ರಂಗ ಸರಕಾರದಲ್ಲಿ ಪಾಲ್ಗೊಳ್ಳಬಾರದೆಂಬ ಕೇಂದ್ರ ಸಮಿತಿಯ ಮೇ 1996 ರ ನಿರ್ಣಯದ ಮೇಲೆ ಪ್ರತ್ಯೇಕವಾಗಿ ಚರ್ಚಿಸಲು ನಿರ್ಧಾರ.

ರಾಜಕೀಯ - ಸಂಘಟನಾ ವರದಿ ಹಾಗೂ ಸರಕಾರದಲ್ಲಿ ಪಾಲ್ಗೊಳ್ಳುವಿಕೆಯ ಕುರಿತ ಚರ್ಚೆಗಳಿಗೆ ಸಮಯ ವಿಂಗಡಣೆ.

• ರಾಜಕೀಯ-ಸಂಘಟನಾ ವರದಿಯ ಮೇಲೆ ಚರ್ಚೆ ಆರಂಭ.

• ಸಂಜೆ 4 ಗಂಟೆಗೆ ಆರಂಭವಾದ 8ನೇ **ಅಧಿ... ಕಮ್ಯುನಿಸ್ಟ್ ಮ್ಯಾನಿಫೆಸ್ಟೋದ 150ನೇ ವಾರ್ಷಿಕೋತ್ಸವ ಸಂಸ್ಮರಣಾರ್ಥ ಅಧಿವೇಶನವಾಗಿತ್ತು.** ಸೀತಾರಾಂ ಯೆಚೂರಿ ನಡೆಸಿಕೊಟ್ಟರು. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್ ಸೇರಿದಂತೆ 18 ಕಮ್ಯುನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳ ಮುಖಂಡರು ಮಾತನಾಡಿದರು. 'ಇಪ್ಟಾ' ದ ಹಾಡುಗಳೊಂದಿಗೆ ಆರಂಭವಾದ ಈ ಅಧಿವೇಶನ 'ಇಂಟರ್‌ನ್ಯಾಷನಲ್' ಹಾಡಿನೊಂದಿಗೆ ಮುಕ್ತಾಯಗೊಂಡಿತು.

9.10.98

ಮಣಿಪುರದ ತಂಡದ ಹಾಡುಗಳೊಂದಿಗೆ ಬೆಳಿಗ್ಗೆ 9 ಗಂಟೆಗೆ ಆರಂಭವಾದ 9ನೇ ಅಧಿವೇಶನದ ಕಲಾಪಗಳು ಹಿಂದಿನ ದಿನ ಅಕಸ್ಮಾತ್ ನಿಧನರಾದ ಸ್ವಯಂ ಸೇವಕ ಸಂಗಾತಿ ಆಲೋಕನಾ ರಾಯ್ ಚೌಧರಿಗೆ ಹಾಗೂ ತ್ರಿಪುರಾದಲ್ಲಿ ಉಗ್ರಗಾಮಿಗಳ ದಾಳಿಗೆ ಬಲಿಯಾದ ರಾಜ್ಯ ಸಮಿತಿ ಸದಸ್ಯ ಶಾಂತಿಕುಮಾರ್ ತ್ರಿಪುರಾರವರಿಗೆ ಶ್ರದ್ಧಾಂಜಲಿಯೊಂದಿಗೆ ಆರಂಭವಾದವು. ರಾಜಕೀಯ-ಸಂಘಟನಾ ವರದಿಯ ಮೇಲೆ ಚರ್ಚೆಗಳು ಮುಂದುವರೆದವು. 10ನೇ ಅಧಿವೇಶನದಲ್ಲೂ ಇದು ಮುಂದುವರೆಯಿತು. ಮೂರು ಅಧಿವೇಶನಗಳಲ್ಲಿ ಒಟ್ಟು 40 ಸಂಗಾತಿಗಳು ಮಾತನಾಡಿದರು.

10.10.98

ಮೇ 1996 ರ ಕೇಂದ್ರ ಸಮಿತಿಯ ನಿರ್ಣಯದ ಬಗ್ಗೆ ಚರ್ಚೆ ಆರಂಭ. ಸುರ್ಜಿತ್ ಮತ್ತು ಪ್ರಕಾಶ್ ಕಾರಟ್‌ರವರು ಮಾತನಾಡಿದ ನಂತರ ಪ್ರತಿನಿಧಿಗಳು ತಂತಮ್ಮ ಹಾಗೂ ತಂತಮ್ಮ ರಾಜ್ಯಗಳ ನಿಯೋಗಗಳ ಅಭಿಪ್ರಾಯಗಳನ್ನು ಮುಂದಿಟ್ಟರು. ಮಧ್ಯಾಹ್ನದ ಮೇಲಿನ ಅಧಿವೇಶನದಲ್ಲಿ ಚರ್ಚೆ ಮುಂದುವರಿಸಲಾಯಿತು. ಒಟ್ಟು 28 ಸಂಗಾತಿಗಳು ಭಾಗವಹಿಸಿದರು. **ಚರ್ಚೆಯ ನಂತರ ಪಕ್ಷದ ಮಹಾಧಿವೇಶನ ಸರಕಾರದಲ್ಲಿ ಭಾಗವಹಿಸದಿರುವ ಕೇಂದ್ರ ಸಮಿತಿಯ ನಿರ್ಣಯವನ್ನು ಅನುಮೋದಿಸುತ್ತದೆ' ಎಂಬ ತೀರ್ಮಾನವನ್ನು ಬಹುಮತದಿಂದ ಅಂಗೀಕರಿಸಲಾಯಿತು.** ನಂತರ ಪ್ರಧಾನ ಕಾರ್ಯದರ್ಶಿಗಳು ರಾಜಕೀಯ-ಸಂಘಟನಾ ವರದಿಯ ಮೇಲಿನ ಚರ್ಚೆಗೆ ಉತ್ತರ ನೀಡಿದರು. ವರದಿಗೆ ಪ್ರತಿನಿಧಿಗಳಿಂದ ಬಂದ ತಿದ್ದುಪಡಿಗಳ ವಿವರವನ್ನು ಮುಂದಿಡಲಾಯಿತು. ಅಂತಿಮವಾಗಿ **ರಾಜಕೀಯ-ಸಂಘಟನಾ ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.** ಅರ್ಹತಾ ಪರಿಶೀಲನಾ ಸಮಿತಿಯ ವರದಿಯನ್ನು ಸಮಿತಿಯ ಸಂಚಾಲಕ ಸುಕೋಮಲ್ ಸೆನ್ ಮಂಡಿಸಿದರು. ಮಹಾಧಿವೇಶನ ಅದನ್ನು ಅಂಗೀಕರಿಸಿತು.

11.10.98

ಮಹಾಧಿವೇಶನದ ಕೊನೆಯ ಅಧಿವೇಶನ ಬೆಳಿಗ್ಗೆ 11 ಗಂಟೆಗೆ ಆರಂಭವಾಯಿತು. ಅದರ ಮೊದಲು ಕೇಂದ್ರ ಸಮಿತಿಯ ಸಭೆ ನಡೆಯಿತು.

ಹೊಸ ಕೇಂದ್ರ ಸಮಿತಿಯ ಸಂಖ್ಯೆ 75 ಇರಬೇಕು ಎಂಬ ಪ್ರಧಾನ ಕಾರ್ಯದರ್ಶಿಗಳ ಸೂಚನೆಯನ್ನು ಒಪ್ಪಲಾಯಿತು. ಇದರಲ್ಲಿ ಹಳೆಯ ಕೇಂದ್ರ ಸಮಿತಿ ಸೂಚಿಸಿದ 66 ಹೆಸರುಗಳನ್ನು ಒಪ್ಪಲಾಯಿತು. ಇನ್ನುಳಿದ 9 ಸ್ಥಾನಗಳನ್ನು ಮುಂದೆ ತುಂಬಿಸಲು ಮಹಾಧಿವೇಶನದ ಒಪ್ಪಿಗೆ. **ಹೊಸ ಕೇಂದ್ರ ಸಮಿತಿಯ ಸದಸ್ಯರು ಸೇರಿ ಹರ್ಕಿಶನ್ ಸಿಂಗ್ ಸುರ್ಜಿತ್‌ರವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಆರಿಸಿದರು.** ಮುಂದಿನ ರಾಜ್ಯ ವಿಧಾನ ಸಭಾ ಚುನಾವಣೆಗಳ ನಂತರ ಮತ್ತೆ ಕೇಂದ್ರ ಸಮಿತಿ ಸಭೆ ಸೇರುವ ವರೆಗೆ ಹಳೆಯ ಪೊಲಿಟ್‌ಬ್ಯೂರೋವೇ ಮುಂದುವರೆದು, ಆ ಸಭೆಯಲ್ಲಿ ಹೊಸ ಪೊಲಿಟ್‌ಬ್ಯೂರೋವನ್ನು ಆರಿಸುವುದು ಎಂಬ ಸೂಚನೆಗೂ ಮಹಾಧಿವೇಶನ ಒಪ್ಪಿಗೆ ನೀಡಿತು.

• ಹೊಸ ಕೇಂದ್ರೀಯ ಹತೋಟಿ ಆಯೋಗದಲ್ಲಿ 5 ಸದಸ್ಯರಿರುತ್ತಾರೆ. ಅದರಲ್ಲಿ ನಾಲ್ಕು ಹೆಸರುಗಳನ್ನು ಸೂಚಿಸಿ ಇನ್ನೊಂದನ್ನು ಆಂಧ್ರಪ್ರದೇಶದಿಂದ ತೆಗೆದುಕೊಳ್ಳುವುದಾಗಿ ಸೂಚಿಸಲಾಯಿತು. ಈ ಸೂಚನೆಗೆ ಮಹಾಧಿವೇಶನದ ಅನುಮೋದನೆ ದೊರೆಯಿತು. ಹೊಸ ಹತೋಟಿ ಆಯೋಗದ ಸದಸ್ಯರು ಸಮಿರ್ ಮುಖರ್ಜಿಯವರನ್ನು ಆಯೋಗದ ಅಧ್ಯಕ್ಷರಾಗಿ ಆರಿಸಿದರು. ಇದನ್ನು ಮಹಾಧಿವೇಶನಕ್ಕೆ ತಿಳಿಸಿದ ಸುರ್ಜಿತ್‌ರವರು ಸಮರ್ ಮುಖರ್ಜಿಯವರು ಈ ಸ್ಥಾನದಿಂದಾಗಿ ಕೇಂದ್ರ ಸಮಿತಿಯ ಸದಸ್ಯರೂ ಆಗುತ್ತಾರೆ ಎಂದು ತಿಳಿಸಿದರು.

• ಮರು ಆಯ್ಕೆಗೊಂಡ ಪ್ರಧಾನ ಕಾರ್ಯದರ್ಶಿ ಸುರ್ಜಿತ್‌ರವರು 16ನೇ ಮಹಾಧಿವೇಶನದ ಕಲಾಪಗಳ, ನಿರ್ಣಯಗಳ ಸಾರಾಂಶವನ್ನು ನೆನಪಿಸುತ್ತಾ ಈ ಮಹಾಧಿವೇಶನ ಪಕ್ಷದ ಮುಂದಿಟ್ಟ ಕರ್ತವ್ಯಗಳನ್ನು ನೆನಪಿಸಿದರು.

• ಅಧ್ಯಕ್ಷ ಮಂಡಳಿಯ ಸಂಚಾಲಕ ಜ್ಯೋತಿಬಸು ಪ್ರತಿನಿಧಿಗಳಿಗೆ ಧನ್ಯವಾದ ಅರ್ಪಿಸಿದರು.

• ಸುರ್ಜಿತ್ ಪ್ರತಿನಿಧಿಗಳ ಪರವಾಗಿ ಮಹಾಧಿವೇಶನದ ಏರ್ಪಾಡು ಮಾಡಿದ ಪಶ್ಚಿಮಬಂಗಾಳ ರಾಜ್ಯ ಸಮಿತಿಗೆ ಧನ್ಯವಾದ ಅರ್ಪಿಸಿದರು.

• ಇಂಟರ್‌ನ್ಯಾಶನಲ್‌ನ ಸಾಮೂಹಿಕ

ಪುಟ 10 ಕ್ಕೆ

ವಿವಿಧ ಘೋಷಣೆಗಳನ್ನು ಹೊತ್ತ ಇಂತಹಾ ಕಟೌಟುಗಳು, ಕಲಾಕೃತಿಗಳು ಮಹಾಧಿವೇಶನದ ಆವರಣದ ಸುತ್ತಲೂ ಕಣ್ಸೆಳೆಯುತ್ತಿದ್ದವು. ಮಹಾಧಿವೇಶನದ ಸಭಾಂಗಣವಂತೂ ಕಲಾತ್ಮಕವಾಗಿ, ಅರ್ಥಪೂರ್ಣವಾಗಿ ಅಲಂಕೃತಗೊಂಡಿತ್ತು. ವೇದಿಕೆಯ ಹಿಂದೆ ಮಾರ್ಕ್ಸ್, ಎಂಗೆಲ್ಸ್, ಲೆನಿನ್, ಸ್ಟಾಲಿನ್, ಪಕ್ಕದಲ್ಲಿ ಮಾವೋ, ಹೋಚಿಮಿನ್‌ರ ಬೃಹತ್ ಭಾವಚಿತ್ರಗಳು, ವಿಶ್ವದ ವಿಮೋಚನೆಗೆ, ಮಾನವ ವಿಮೋಚನೆಗೆ ಕೈ ಚಾಚಿರುವ, ಕೈ ಎತ್ತಿರುವ ಕೈಗಳು, ಮುನ್ನಡೆಯುತ್ತಿರುವ ಜನ.





ಸುತ್ತಲೂ ಅಗಲಿದ ಪೊಲಿಟ್‌ಬ್ಯೂರೋ ಸದಸ್ಯರ ಭಾವಚಿತ್ರಗಳು, ಜತೆಗೆ ಮ್ಯಾನಿಫೆಸ್ಟೋದ, ಲೆನಿನ್‌ರ, ಸ್ಟಾಲಿನ್‌ರ, ಪಕ್ಷದ ಕಾರ್ಯಕ್ರಮದ ಉದ್ಧರಣೆಗಳು.







ಜ್ಯೋತಿ ಬಸು ಸ್ವಾಗತ

"ಧೈರ್ಯ ಹಾಗೂ ಜನಗಳಲ್ಲಿ ನಂಬಿಕೆಯೊಂದಿಗೆ ಮುನ್ನಡೆಯೋಣ"



ಸಿಪಿಐ(ಎಂ) ಅಸಮಾನ ಬೆಳವಣಿಗೆಯನ್ನು ಕಾಣುತ್ತಿದ್ದರೂ ದೇಶದ ರಾಜಕೀಯ ಜೀವನದಲ್ಲಿ ಒಂದು ಪ್ರತಿಷ್ಠೆಯ ಸ್ಥಾನ ಪಡೆದಿದೆ. ಅದಕ್ಕೆ ಕಾರಣ ಎಲ್ಲಾ ವಲಯಗಳಲ್ಲಿ ಅದು ವಹಿಸಿರುವ ನೀತಿಬದ್ಧ ಹಾಗೂ ಮಹತ್ವದ ಪಾತ್ರ. ಇದು ಜ್ಯೋತಿಬಸುರವರು ಹದಿನಾರನೇ ಮಹಾಧಿವೇಶನದ ಆರಂಭದಲ್ಲಿ ಪ್ರತಿನಿಧಿಗಳನ್ನು ಹಾಗೂ ವಿದೇಶಿ ಪ್ರತಿನಿಧಿಗಳನ್ನು ಸ್ವಾಗತಿಸುತ್ತಾ ಹೇಳಿದ ಮಾತು.

ನಾವು ವಿಶ್ವ ಆರ್ಥಿಕದಿಂದ ದೂರನಿಲ್ಲಬಯಸುವುದಿಲ್ಲ. ಪರಸ್ಪರ ಹಿಸಾಸಕ್ತಿಗಳ ಆಧಾರದ ಮೇಲೆ ವಿದೇಶಿ ಹೂಡಿಕೆಯ ಅಗತ್ಯವನ್ನು ಪ್ರತಿಪಾದಿಸುತ್ತೇವೆ. ಆದರೆ ನಾವು ಒಂದು ಸ್ವಾವಲಂಬೀ ಆರ್ಥಿಕವನ್ನು ಕಟ್ಟುವ ಅಗತ್ಯದ ಬಗ್ಗೆ ಒತ್ತಿ ಹೇಳುತ್ತೇವೆ - ಇತರರಿಂದ ಕಲಿಯುತ್ತೇವೆ. 10-15 ಶೇಕಡಾ ಮಂದಿಗಷ್ಟೇ ಒಂದು ಆರ್ಥಿಕವನ್ನು ಬೆಳೆಸು ವುದಕ್ಕೆ ನಮ್ಮ ವಿರೋಧ ವಿದೆ. ರಫ್ತುಗಳು ಬೇಕು ನಿಜ, ಆದರೆ ನಮ್ಮಂತಹ ದೊಡ್ಡ ದೇಶದಲ್ಲಿ ಜನಗಳ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಿ ಆಂತರಿಕ ಮಾರುಕಟ್ಟೆಯನ್ನು ವಿಸ್ತರಿಸಬೇಕು ಎಂದು ಹೇಳುತ್ತೇವೆ ಎಂದು ಸಿಪಿಐ(ಎಂ) ನ ಆರ್ಥಿಕ ನೀತಿಯನ್ನು ಸ್ಥೂಲವಾಗಿ ಮುಂದಿಟ್ಟರು. ಬಡವ-ಬಲ್ಲಿದರ ನಡುವೆ ಅಂತರ ಹೆಚ್ಚುತ್ತಿದೆ ಎಂದಿರುವ ವಿಶ್ವಸಂಸ್ಥೆಯ ಮಾನವ ಅಭಿವೃದ್ಧಿ ವರದಿಗಳನ್ನು ನಾವು ಗಂಭೀರವಾಗಿ ಪರಿಗಣಿಸುತ್ತೇವೆ ಎಂದರು ಜೋತಿಬಸು.

ವಿಶ್ವದ ಎರಡನೇ ಅತಿ ಹೆಚ್ಚು ಜನಸಂಖ್ಯೆಯ ದೇಶ ಭಾರತ ಸ್ವಾತಂತ್ರ್ಯದ 50 ವರ್ಷಗಳ ನಂತರವೂ ಗಂಭೀರ ಮತ್ತು ಕ್ಲಿಷ್ಟ ಸಮಸ್ಯೆಗಳನ್ನು ಎದುರಿಸುತ್ತಿದೆ ಎಂದು ಈ ಹಿರಿಯ ಮುತ್ಸದ್ದಿ ಖೇದ ವ್ಯಕ್ತಪಡಿಸಿದರು. ಇಂತಹ ಸ್ಥಿತಿಯಲ್ಲಿ ಬಂಡವಾಳಶಾಹಿ-ಪಾಳೆಯಗಾರಿ ವ್ಯವಸ್ಥೆಯಲ್ಲಿ ಪಶ್ಚಿಮ ಬಂಗಾಳ, ಕೇರಳ, ತ್ರಿಪುರಾಗಳಲ್ಲಿ ಎಡ ಮತ್ತು ಎಡ-ಪ್ರಜಾಸತ್ತಾತ್ಮಕ ಸರಕಾರಗಳನ್ನು ರಚಿಸಲು ಸಿಪಿಐ(ಎಂ) ಗೆ ಸಾಧ್ಯವಾಗಿದೆ. ಸುಮಾರು 12 ಕೋಟಿ ಜನಸಂಖ್ಯೆಯಾಗುವ ಈ ಮೂರು ರಾಜ್ಯಗಳಲ್ಲಿ ಒಂದು ಪರ್ಯಾಯ ಜನ-ಪರ ಆಡಳಿತ ವೈಖರಿ ಸಾಧ್ಯ ಎಂಬುದನ್ನು ಇವು ತೋರಿಸಿಕೊಟ್ಟಿವೆ. ಇದೊಂದು ಅಸಾಮಾನ್ಯ ಸಾಧನೆ ಎಂದರು ಜ್ಯೋತಿಬಸು.



ಈಗ ಕೇಂದ್ರದಲ್ಲಿ ಒಂದು ಮೂಲಭೂತವಾದಿ, ಕೋಮುವಾದಿ, ಭ್ರಷ್ಟ, ಸಮಯಸಾಧಕ, ಪ್ರಜಾಪ್ರಭುತ್ವ-ವಿರೋಧಿ ಪಕ್ಷವಾದ ಬಿಜೆಪಿಯ ನೇತೃತ್ವ ಸರಕಾರದ ರಚನೆಯೊಂದಿಗೆ ಹೊಸದೊಂದು ಅಪಾಯ ಉಂಟಾಗಿದೆ. 45 ವರ್ಷ ದಿಲ್ಲಿಯಿಂದ ಆಳ್ವಿಕೆ ನಡೆಸಿ ಈಗ ಪ್ರಮುಖ ವಿರೋಧ ಪಕ್ಷವಾಗಿರುವ ಕಾಂಗ್ರೆಸ್ ಕೋಮುವಾದಿ ಪಕ್ಷವೇನಲ್ಲ. ಆದರೆ ಅದು ಕೋಮುವಾದಿ ಶಕ್ತಿಗಳಿಗೆ ಶರಣಾಗುತ್ತಿದೆ. ಅದರ ಆರ್ಥಿಕ ನೀತಿಗಳು ಬಹುಪಾಲು ಜನಗಳನ್ನು ನಿರ್ಲಕ್ಷಿಸಿದೆ. ಬಿಜೆಪಿ ಮತ್ತು ಅದರ ಕೆಲವು ಮಿತ್ರಪಕ್ಷಗಳು ಭ್ರಷ್ಟಾಚಾರದಲ್ಲಿ ತನ್ನನ್ನು ಮೀರಿಸಿವೆಯೆಂದೇನು ಅದು ತೃಪ್ತಿ ಪಟ್ಟುಕೊಳ್ಳುವಂತಿಲ್ಲ ಎಂದರು ಜ್ಯೋತಿಬಸು.

ನಾವು ಬೆಂಬಲಿಸುತ್ತಿದ್ದ ಸಂಯುಕ್ತ ರಂಗ ದುರ್ಬಲಗೊಂಡಿದೆ. 1998 ರಲ್ಲಿ ಇನ್ನೊಂದು ಸಂಯುಕ್ತ ರಂಗ ಸರಕಾರವನ್ನು ಆರಿಸುವ ಕರೆ ಜನಗಳಲ್ಲಿ ವಿಶ್ವಾಸ ಮೂಡಿಸಲಿಲ್ಲ. ಬದಲು ಬಿಜೆಪಿಗೆ ಅದರ ಪ್ರಯೋಜನ ದೊರೆಯಿತು. ಇಂತಹ ಸನ್ನಿವೇಶದಲ್ಲಿ ಸಿಪಿಐ(ಎಂ) ಮತ್ತು ಎಡ ಪಕ್ಷಗಳ ಮೇಲೆ ಜಾತ್ಯಾತೀತತೆಯಲ್ಲಿ ನಂಬಿಕೆಯಿರುವ ಶಕ್ತಿಗಳನ್ನು ಅಣಿನೆರೆಸುವ ಜವಾಬ್ದಾರಿ ಯಿದೆ.

ಧೈರ್ಯ ಮತ್ತು ಜನಗಳಲ್ಲಿ ನಂಬಿಕೆಯೊಂದಿಗೆ ನಾವು ಕಷ್ಟಗಳನ್ನು ಮೀರಿ ನಿಲ್ಲುತ್ತೇವೆ. ಆರ್ಥಿಕ, ರಾಜಕೀಯ ಹಾಗೂ ಸೈದ್ಧಾಂತಿಕ ರಂಗಗಳಲ್ಲಿ ಹೋರಾಟಗಳನ್ನು ನಡೆಸಿ ನಮ್ಮ ತಕ್ಷಣದ ಕರ್ತವ್ಯಗಳನ್ನು ಈಡೇರಿಸುತ್ತೇವೆ ಎಂದು ಆತ್ಮವಿಶ್ವಾಸದಿಂದ ಹೇಳಿದ ಜ್ಯೋತಿಬಸುರವರು ತಕ್ಷಣದ ಕರ್ತವ್ಯಗಳನ್ನು ನಿಭಾಯಿಸಲು ಮಾತ್ರವೇ ಅಲ್ಲ ನಮ್ಮ ಅಂತಿಮ ಗುರಿಯಾದ ಜನತಾ ಪ್ರಜಾಪ್ರಭುತ್ವ ಹಾಗೂ ಸಮಾಜವಾದ-ಒಂದು ಶೋಷಣಾರಹಿತ ಸಮಾಜದ ರಚನೆಯ ಗುರಿಯನ್ನು ಈಡೇರಿಸಲು ನಮ್ಮ ಪಕ್ಷವನ್ನು ಒಂದು ಸಾಮೂಹಿಕ ಕ್ರಾಂತಿಕಾರಿ ಪಕ್ಷವಾಗಿ ವಿಸ್ತರಿಸಬೇಕಾಗಿದೆ ಎಂದು ಹೇಳುತ್ತಾ ಈ ಹಿರಿಯ ಕಮ್ಯುನಿಸ್ಟ್ ಮುತ್ಸದ್ದಿ ತಮ್ಮ ಸ್ವಾಗತ ಭಾಷಣವನ್ನು ಕೊನೆಗೊಳಿಸಿದಾಗ ಸಭಾಂಗಣ ಚಪ್ಪಾಳೆಗಳಿಂದ ಪ್ರತಿಧ್ವನಿತಗೊಂಡಿತು. ○


ಹುತಾತ್ಮರಿಗೆ ಶ್ರದ್ಧಾಂಜಲಿ

ಸಿಪಿಐ(ಎಂ) ಹದಿನಾರನೇ ಮಹಾಧಿವೇಶನ ಕಳೆದ ಮೂರೂವರೆ ವರ್ಷಗಳಲ್ಲಿ ಕಾರ್ಮಿಕ ವರ್ಗದ ಹಾಗೂ ಪ್ರಜಾಪ್ರಭುತ್ವ ಆಂದೋಲನದ ಧ್ಯೇಯ ಸಾಧನೆಯಲ್ಲಿ ಹಾಗೂ ರಾಷ್ಟ್ರೀಯ ಐಕ್ಯತೆಯಲ್ಲಿ ಪ್ರಾಣತೆತ್ತ ಸಂಗಾತಿಗಳಿಗೆ ಕೆಂಪು ನಮನ ಅರ್ಪಿಸಿತು.

- ಪಶ್ಚಿಮ ಬಂಗಾಳದಲ್ಲಿ ಪಕ್ಷದ, ಸಾಮೂಹಿಕ ಸಂಘಟನೆಗಳ ಹೋರಾಟಗಳಲ್ಲಿ ಪ್ರಾಣತೆತ್ತ 284 ಹುತಾತ್ಮರಿಗೆ
- ತ್ರಿಪುರಾದಲ್ಲಿ ಉಗ್ರಗಾಮಿ ಗುಂಪುಗಳಿಂದ ಹತರಾದ 180 ವೀರ ಹುತಾತ್ಮರಿಗೆ
- ಬಿಹಾರದಲ್ಲಿ ಭೂಮಾಲಕ ಗೂಂಡಾಗಳ ಅಥವಾ ಪೋಲೀಸರ ಗುಂಡುಗಳಿಗೆ ಬಲಿಯಾದ 36 ಸಂಗಾತಿಗಳಿಗೆ
- ಕೇರಳದಲ್ಲಿ ಆರ್.ಎಸ್.ಎಸ್., ಕಾಂಗ್ರೆಸ್(ಐ) ಮತ್ತಿತರ ಸಮಾಜಘಾತುಕರಿಂದ ಕೊಲೆಯಾದ 14 ಹುತಾತ್ಮರಿಗೆ
- ಆಂಧ್ರಪ್ರದೇಶದ ನಕ್ಸಲೀಯರು, ಭೂಮಾಲಕ ಗೂಂಡಾಗಳು ಕೊಲೆಗೈದ 20 ಸಂಗಾತಿಗಳಿಗೆ
- ಅಸ್ಸಾಂನಲ್ಲಿ ಉಗ್ರಗಾಮಿಗಳಿಗೆ ಬಲಿಯಾದ ಸಂಗಾತಿಗಳಿಗೆ
- ಬಿಜೆಪಿ-ಶಿವಸೇನೆಯ ಗೂಂಡಾಗಳು ಮತ್ತು ಪೋಲೀಸರ ಗೋಳಿಬಾರಿನಲ್ಲಿ ಪ್ರಾಣತೆತ್ತ 4 ಸಂಗಾತಿಗಳಿಗೆ
- ತಮಿಳುನಾಡಿನಲ್ಲಿ ವರ್ಗಶತ್ರುಗಳಿಗೆ ಹಾಗೂ ಸಮಾಜಘಾತುಕ ವ್ಯಕ್ತಿಗಳಿಗೆ ಬಲಿಯಾದ 5 ಸಂಗಾತಿಗಳಿಗೆ
- ಜಮ್ಮು ಮತ್ತು ಕಾಶ್ಮೀರದಲ್ಲಿ ಉಗ್ರಗಾಮಿಗಳಿಂದ ಹಾಗೂ ಸಾರ್ವಜನಿಕ ಸಭೆಯಲ್ಲಿ ಬಾಂಬ್ ಸ್ಫೋಟದಲ್ಲಿ ಮಡಿದ 11 ಸಂಗಾತಿಗಳಿಗೆ
- ಕರ್ನಾಟಕದಲ್ಲಿ ಹೆಜ್ಜಾಲದಲ್ಲಿ ಕಾರ್ಮಿಕರ ಹೋರಾಟದಲ್ಲಿ ಮಡಿದ 3 ಸಂಗಾತಿಗಳಿಗೆ ಹಾಗೂ
- ಉತ್ತರ ಪ್ರದೇಶದಲ್ಲಿ ಭೂಮಾಲಕರ ಗೂಂಡಾಗಳು ಹಾಗೂ ಉಗ್ರಗಾಮಿಗಳ ಧಾಳಿಗೆ ಬಲಿಯಾದ 7 ಸಂಗಾತಿಗಳಿಗೆ ಮಹಾಧಿವೇಶನ ಕೆಂಪುನಮನ ಸಲ್ಲಿಸಿತು, ಅವರ ಕುಟುಂಬದವರಿಗೆ ಸಹಾನುಭೂತಿ ವ್ಯಕ್ತಪಡಿಸಿತು.

ಕಳೆದ ಮಹಾಧಿವೇಶನದ ನಂತರ ನಮ್ಮನ್ನಗಲಿದ ಪೊಲಿಟ್‌ಬ್ಯೂರೋ ಸದಸ್ಯರಾದ ಇ.ಎಂ.ಎಸ್., ಸುನೀಲ್ ಮೈತ್ರ ಮತ್ತು ಎ.ನಲ್ಲಶಿವನ್, 1992 ರವರೆಗೆ ಕೇಂದ್ರ ಸಮಿತಿ ಸದಸ್ಯರಾಗಿದ್ದ ಗೋದಾವರಿ ಪರುಳೇಕರ್, ಕೇಂದ್ರ ಸಮಿತಿ ಸದಸ್ಯರಾಗಿದ್ದ ಚಡಯನ್ ಗೋವಿಂದನ್ ಹಾಗೂ ಪಿ.ರಾಮಚಂದ್ರರಾವ್‌ರವರಿಗೆ ಶ್ರದ್ಧಾಂಜಲಿ ಅರ್ಪಿಸಿತು.

ಸೋದರ ಪಕ್ಷಗಳ ಮುಖಂಡರಾದ ಚೀನಾದ ಡೆಂಗ್ ಕ್ಷಿಯಾವೋ ಪಿಂಗ್, ವಿಯೆಟ್ನಾಂ ಪಕ್ಷದ ಗುಯೆನ್ ವಾನ್ ಲಿನ್, ಫ್ರೆಂಚ್ ಪಕ್ಷದ ಜೋರ್ಜಸ್ ಮಾರ್ಕ್ಯಾಸ್, ಗುಯಾನಾದ ಪ್ರಗತಿಪರ ಜನತಾಪಕ್ಷದ ಚಡ್ಡಿ ಜಗನ್, ಸಿಪಿಐ ಮುಖಂಡರಾದ ಎಂ.ಫರೂಕಿ, ಗಿರಿಪ್ರಸಾದ್ ಹಾಗೂ ಎಸ್.ಜಿ. ಸರ್ದೇಸಾಯಿ, ಫಾರ್ವರ್ಡ್ ಬ್ಲಾಕ್‌ನ ಪ್ರಧಾನ ಕಾರ್ಯದರ್ಶಿ ಚಿತ್ತಬಸು ಹಾಗೂ ಆರ್.ಎಸ್.ಪಿ.ಯ ಪ್ರಧಾನ ಕಾರ್ಯದರ್ಶಿ ತ್ರಿದಿಪ್ ಚೌಧುರಿಯವರಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. 15ನೇ ಮಹಾಧಿವೇಶನ ದ ನಂತರ ನಿಧನರಾದ ವಿಭಿನ್ನ ರಾಜ್ಯ ಸಮಿತಿಗಳ ಹಾಗೂ ಇತರ ಪ್ರಮುಖ 26 ಸಂಗಾತಿಗಳಿಗೆ ಶ್ರದ್ಧಾಂಜಲಿ ಅರ್ಪಿಸಲಾಯಿತು. ❖



ಕಾಮ್ರೇಡ್ ದಶರಥ್ ದೇಬ್ ಇನ್ನಿಲ್ಲ

"ಜನಗಳೊಂದಿಗೆ ಗುರುತಿಸಿಕೊಂಡ ಅಪ್ರತಿಮ ಕಮ್ಯುನಿಸ್ಟ್ ಮುಖಂಡ"

ಪೊಲಿಟ್‌ಬ್ಯೂರೋ ಶ್ರದ್ಧಾಂಜಲಿ

ತ್ರಿಪುರಾದಲ್ಲಿ ಕಮ್ಯುನಿಸ್ಟ್ ಆಂದೋಲನದ ಸಂಸ್ಥಾಪಕರಲ್ಲಿ ಒಬ್ಬರಾದ ಹಾಗೂ ತ್ರಿಪುರಾದ ಮುಖ್ಯಮಂತ್ರಿಯಾಗಿದ್ದ ಕಾಮ್ರೇಡ್ ದಶರಥ ದೇಬ್ ಅಕ್ಟೋಬರ್ 14 ರ ಮುಂಜಾವಿನಲ್ಲಿ ನಿಧನ ಹೊಂದಿದರು. ಅವರಿಗೆ 82 ವರ್ಷ ವಯಸ್ಸಾಗಿತ್ತು. ಅವರು ಬುಡಕಟ್ಟು ಜನಗಳು ಹಾಗೂ ಇತರ ಜನಗಳ ನಡುವೆ ಐಕ್ಯತೆಯನ್ನು ಬೆಸೆದ ಒಬ್ಬ ಪ್ರಮುಖ ಕಮ್ಯುನಿಸ್ಟ್ ಮುಖಂಡರು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಶ್ರದ್ಧಾಂಜಲಿ ಅರ್ಪಿಸಿದೆ.

1945 ರಲ್ಲಿ 'ಜನ ಶಿಕ್ಷಾ ಸಮಿತಿ' ಆರಂಭಿಸಿ ಬುಡಕಟ್ಟು ಜನಗಳ ನಡುವೆ ಶಿಕ್ಷಣದ ಪ್ರಸಾರಕ್ಕೆ ಹಾಗೂ ಅವರಲ್ಲಿ ತಮ್ಮ ಹಕ್ಕುಗಳ ಬಗ್ಗೆ ಪ್ರಜ್ಞೆ ಮೂಡಿಸುವ ಕೆಲಸ ಆರಂಭಿಸಿದ ಯುವಕರಲ್ಲಿ ಇವರು ಒಬ್ಬರು. ತ್ರಿಪುರಾದ ರಾಜನ ದಮನಕಾರಿ ಆಳ್ವಿಕೆಯ ವಿರುದ್ಧ ಬುಡಕಟ್ಟು ಜನಗಳ ಹೋರಾಟ ಆರಂಭವಾದದ್ದು ಇಲ್ಲಿಂದಲೇ. 1948 ರಲ್ಲಿ ಗಣಮುಕ್ತಿ ಪರಿಷದ್ ಸ್ಥಾಪನೆಗೊಂಡಾಗ ದಶರಥ್ ದೇಬ್ ಅಧ್ಯಕ್ಷರಾದರು. ಈ ಪರಿಷತ್ತು ನಿರಂಕುಶ ಪ್ರಭುತ್ವದ ವಿರುದ್ಧ ಆಂದೋಲನ ನಡೆಸಿತು. 1948 ರಿಂದ 1950 ರ ನಡುವೆ ಅವರು ಊಳಿಗಮಾನ್ಯ ಪದ್ಧತಿಯ ವಿರುದ್ಧ ಹಾಗೂ ರಾಜನ ಸಶಸ್ತ್ರ ಪಡೆಗಳು ಹರಿಯಬಿಟ್ಟ ದಮನದ ವಿರುದ್ಧ ಸಶಸ್ತ್ರ ಹೋರಾಟಕ್ಕೆ ನೇತೃತ್ವ ನೀಡಿದರು. ಈ ಹೋರಾಟದಲ್ಲಿ ಅವರೊಂದು ದಂತ ಕಥೆಯೇ ಆದರು.


ದಶರಥ್ ದೇಬ್ ಮತ್ತು ಗಣಮುಕ್ತಿ ಪರಿಷತ್‌ನ ಇಡೀ ಮುಖಂಡತ್ವ 1950 ರಲ್ಲಿ ಕಮ್ಯುನಿಸ್ಟ್ ಪಕ್ಷ ಸೇರಿದರು. 1952 ರ ಮೊದಲ ಲೋಕಸಭಾ ಚುನಾವಣೆಗಳಲ್ಲಿ ಸ್ಪರ್ಧಿಸಿ ದಶರಥ್ ದೇಬ್ ಭಾರೀ ಬಹುಮತದಿಂದ ಗೆದ್ದರು. 1951 ರಲ್ಲಿ ಅವರು ಕೇಂದ್ರ ಸಮಿತಿಗೆ ಆಯ್ಕೆಯಾದರು. ಅಂದಿನಿಂದ ಅವರು ಮೊದಲು ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಮುಖಂಡತ್ವದ ಹಾಗೂ ನಂತರ ಸಿಪಿಐ(ಎಂ) ಸ್ಥಾಪಿಸಿದ ಮುಖಂಡತ್ವದ ಭಾಗವಾಗಿದ್ದರು. 1964 ರಲ್ಲಿ 7ನೇ ಮಹಾಧಿವೇಶನದಲ್ಲಿ ಸಿಪಿಐ(ಎಂ) ಸ್ಥಾಪನೆಗೊಂಡಾಗ ಅದರ ಕೇಂದ್ರ ಸಮಿತಿಗೆ ಅವರು ಆಯ್ಕೆಗೊಂಡರು. ಅಂದಿನಿಂದ 16ನೇ ಮಹಾಧಿವೇಶನದ ವೇಳೆಗೆ ಅನಾರೋಗ್ಯದಿಂದ ನಿವೃತ್ತಿಯಾಗುವವರೆಗೆ ಅವರು ಕೇಂದ್ರ ಸಮಿತಿಯಲ್ಲಿ ಮುಂದುವರೆದರು.

ದಶಕಗಳ ಕಾಲ ದಶರತ್‌ದೇಬ್ ತ್ರಿಪುರಾದಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಕಟ್ಟಿ ಬೆಳೆಸಿ, ಕ್ರೋಢೀಕರಿಸಲು ಅವಿಶ್ರಾಂತವಾಗಿ ದುಡಿದರು. 1978 ರಲ್ಲಿ ಮೊದಲ ಎಡರಂಗ ಸರ್ಕಾರದ ರಚನೆಗೊಂಡಾಗ ಅವರು ಉಪಮುಖ್ಯಮಂತ್ರಿಗಳಾದರು. 1993 ರ ಮೂರನೇ ಎಡರಂಗ ಸರಕಾರದಲ್ಲಿ ಮುಖ್ಯಮಂತ್ರಿಯಾಗಿ ಅವರು 1995 ರ ವರೆಗೆ ಸೇವೆ ಸಲ್ಲಿಸಿದರು. 1991 ರಿಂದ 1994 ರ ವರೆಗೆ ಅವರು ತ್ರಿಪುರಾ ರಾಜ್ಯ ಸಮಿತಿಯ ಕಾರ್ಯದರ್ಶಿಗಳಾಗಿದ್ದರು. ನಾಲ್ಕು ಬಾರಿ ಅವರು ಲೋಕಸಭೆಗೆ ಆಯ್ಕೆಯಾದರು.

ದಶರಥ್ ದೇಬ್‌ರಲ್ಲಿ ಒಬ್ಬ ಅಪ್ರತಿಮ ಕಮ್ಯುನಿಸ್ಟ್ ಮುಖಂಡನಲ್ಲಿರಬೇಕಾದ ಎಲ್ಲಾ ಸದ್ಗುಣಗಳೂ ಇದ್ದವು. ಅವರು ತನ್ನನ್ನು ಜನಗಳೊಂದಿಗೆ, ಅವರ ಆಕಾಂಕ್ಷೆಗಳೊಂದಿಗೆ ಅತ್ಯಂತ ನಿಕಟವಾಗಿ ಗುರುತಿಸಿಕೊಂಡವರು. ಬುಡಕಟ್ಟು ಜನಗಳು ಮತ್ತು ಇತರರ ನಡುವಿನ ಐಕ್ಯತೆಯನ್ನು ಬೆಸೆದ ಶಿಲ್ಪಿಗಳಲ್ಲಿ ಅವರೊಬ್ಬರು. ತ್ರಿಪುರಾದ ಎಲ್ಲಾ ಜನವಿಭಾಗಗಳೂ ಅವರಲ್ಲಿ ಅಪಾರ ವಿಶ್ವಾಸ ಹೊಂದಿದ್ದವು. ತಮ್ಮ ಬಾಳಿನುದ್ದಕ್ಕೂ ಅವರು ಕಮ್ಯುನಿಸ್ಟ್ ಆಂದೋಲನದ ಆದರ್ಶಗಳಿಗೆ ಸಂಪೂರ್ಣವಾಗಿ ವಿಧೇಯರಾಗಿದ್ದರು. ಜನಗಳ ಅಪಾರ ಪ್ರೀತಿ ಮತ್ತು ಅಭಿಮಾನ ಎಂದೂ ಅವರ ಸರಳ ವರ್ತನೆಯನ್ನಾಗಲೀ, ಸಾಮೂಹಿಕ ಕೆಲಸದ ವಿಧಾನವನ್ನಾಗಲೀ ತಟ್ಟಲಿಲ್ಲ. ಸಿಪಿಐ(ಎಂ) ಹಾಗೂ ಎಡ ಆಂದೋಲನಕ್ಕೆ ಅವರ ಸಾವಿನಿಂದ ಒಂದು ಗಂಭೀರ ಹಾನಿಯಾಗಿದೆ. ಅವರ ಕ್ರಾಂತಿಕಾರಿ ಜೀವನ ಮತ್ತು ಉದಾಹರಣೆ ಎಲ್ಲಾ ಕಮ್ಯುನಿಸ್ಟರಿಗೆ ಹಾಗೂ ಪ್ರಗತಿಪರ ಜನಗಳಿಗೆ ಚಿರಸ್ಮರಣೀಯ ಎನ್ನುತ್ತಾ ಸಿಪಿಐ(ಎಂ) ಪೊಲಿಟ್‌ಬ್ಯೂರೋ ದಶರಥ್ ದೇಬ್‌ರವರ ಸ್ಮರಣೆಗೆ ಗೌರವಪೂರ್ಣ ಶ್ರದ್ಧಾಂಜಲಿ ಅರ್ಪಿಸಿದೆ. ಅವರ ಪತ್ನಿ ಮಂಗಳೇಶ್ವರಿ ದೇಬ್‌ವರ್ಮ ಹಾಗೂ ಪುತ್ರಿಯರು ಮತ್ತು ಪುತ್ರರಿಗೆ ಪೊಲಿಟ್‌ಬ್ಯೂರೋ ತನ್ನ ಹಾರ್ದಿಕ ಸಂತಾಪ ವ್ಯಕ್ತಪಡಿಸಿದೆ.

ರಾಜ್ಯ ಸಮಿತಿ ಶ್ರದ್ಧಾಂಜಲಿ

ಅಕ್ಟೋಬರ್ 15 ರಂದು ಸಿಪಿಐ(ಎಂ) ರಾಜ್ಯ ಸಮಿತಿ ಕಚೇರಿಯಲ್ಲಿ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಕಾಂ॥ ದಶರಥ್ ದೇಬ್‌ರವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಲಾಯಿತು. ಸಭೆಯ ಅಧ್ಯಕ್ಷತೆ ವಹಿಸಿದ್ದ ಸೂರ್ಯನಾರಾಯಣ ರಾವ್, ನಿತ್ಯಾನಂದ ಸ್ವಾಮಿ ಹಾಗೂ ಜಿ.ಎನ್.ನಾಗರಾಜ್ ದಶರಥ್ ದೇಬ್‌ರವರ ಕೊಡುಗೆಗಳನ್ನು ಸ್ಮರಿಸಿದರು. ○



ಕರಡು ರಾಜಕೀಯ ನಿರ್ಣಯದ ಮೇಲಿನ ಚರ್ಚೆ



ಪ್ರಸ್ತುತ ಹೊಸ ಸನ್ನಿವೇಶದಲ್ಲಿ ಕಮ್ಯುನಿಸ್ಟರು ಏನು ಮಾಡಬೇಕು?

16ನೇ ಮಹಾಧಿವೇಶನದ ಉದ್ಘಾಟನಾ ಅಧಿವೇಶನದಲ್ಲೇ ಪ್ರಧಾನ ಕಾರ್ಯದರ್ಶಿ ಸುರ್ಜಿತ್‌ರವರು ಕರಡು ರಾಜಕೀಯ ನಿರ್ಣಯವನ್ನು ಮಂಡಿಸಿದರು. ಈ ದಸ್ತಾವೇಜನ್ನು ಪಕ್ಷದ ಸಂವಿಧಾನದ ಪ್ರಕಾರ ಎರಡು ತಿಂಗಳ ಹಿಂದೆಯೇ ಬಿಡುಗಡೆ ಮಾಡಿ ದೇಶಾದ್ಯಂತ ಪಕ್ಷದ ಸದಸ್ಯರು ಕೂಲಂಕುಷ ಚರ್ಚೆ ನಡೆಸಿ ತಂತಮ್ಮ ತಿದ್ದುಪಡಿಗಳನ್ನು ಕಳಿಸಿದ್ದರೆ, ಇತರರು, ಮುಖ್ಯವಾಗಿ ಬಂಡವಾಳಶಾಹಿ ಪತ್ರಿಕೆಗಳ ಮಂದಿ ತಂತಮ್ಮ ಮೂಗಿನ ನೇರಕ್ಕೆ ಟೀಕೆ- ಟಿಪ್ಪಣಿಗಳನ್ನು, ಊಹಾ-ಪೋಹಗಳನ್ನು ಮಾಡಿದ್ದರು, ಮಾಡುತ್ತಿದ್ದರು. ಉದ್ಘಾಟನಾ ಅಧಿವೇಶನದಲ್ಲೂ ದೊಡ್ಡ ಸಂಖ್ಯೆಯಲ್ಲಿ ಅವರು ಬಂದಿದ್ದರು.

"ದೇಶ ಕಲ್ಕತ್ತದ ಕಡೆ ನೋಡುತ್ತಿದೆ"

"ಇಡೀ ದೇಶ ಈಗ ಕಲ್ಕತ್ತಾ ಕಡೆ ನೋಡುತ್ತಿದೆ" ಎಂದು ಆರಂಭಿಸಿದರು ಸುರ್ಜಿತ್ ಕರಡು ನಿರ್ಣಯವನ್ನು ಮಂಡಿಸುತ್ತಾ. 150 ವರ್ಷಗಳ ನಂತರವೂ ಅಂತರ್ರಾಷ್ಟ್ರೀಯವಾಗಿ ಕಮ್ಯುನಿಸ್ಟ್ ಮ್ಯಾನಿಫೆಸ್ಟೋ ಈಗಲೂ ಶೋಷಣೆಯಿಲ್ಲದ ಮಾನವೀಯ ಸಮಾಜ ಬಯಸುವವರಿಗೆ ದಾರಿದೀಪವಾಗಿಯೇ ಇದೆ. ಇತ್ತ ನಮ್ಮ ದೇಶದಲ್ಲಿ ಸ್ವಾತಂತ್ರ್ಯದ 51 ವರ್ಷಗಳಲ್ಲಿ ಬಹಳಷ್ಟು ಸಾಧಿಸುವ ಸಾಮರ್ಥ್ಯವಿತ್ತು. ಆದರೆ ಬೂರ್ಜ್ವಾ-ಭೂಮಾಲಕ ನೀತಿಗಳು ದೇಶವನ್ನು ಐ.ಎಂ.ಎಫ್.-ವಿಶ್ವಬ್ಯಾಂಕ್ ತೆಕ್ಕೆಗೊಯ್ದ ಫಲವಾಗಿ ಈರುಳ್ಳಿ ಬೆಲೆ ಕೆ.ಜಿ.ಗೆ 32 ರೂ. ಗೇರಿದೆ ಎನ್ನುತ್ತಾ ಅಂತರ್ರಾಷ್ಟ್ರೀಯ ಹಾಗೂ ರಾಷ್ಟ್ರೀಯ ಬೆಳವಣಿಗೆಗಳ ಬಗ್ಗೆ ಪಕ್ಷಿ ನೋಟ ಬೀರಿದರು.

ಇದು 20ನೇ ಶತಮಾನದಲ್ಲಿ ನಮ್ಮ ಪಕ್ಷದ ಕೊನೆಯ ಮಹಾಧಿವೇಶನ. 20ನೇ ಶತಮಾನ ಚಾರಿತ್ರಿಕ ಘಟನೆಗಳ ಶತಮಾನ. ಸಾಮ್ರಾಜ್ಯಶಾಹಿಯ ಬೆಳವಣಿಗೆಯೊಂದಿಗೆ ಆರಂಭವಾದ ಶತಮಾನದ ಅಂತ್ಯದಲ್ಲಿನ ಸಂದೇಶವೆಂದರೆ ಬಂಡವಾಳಶಾಹಿ ಒಂದು ಬಿಕ್ಕಟ್ಟಿನಿಂದ ಇನ್ನೊಂದು ಬಿಕ್ಕಟ್ಟಿನತ್ತ ಹೋಗುತ್ತದೆಯೇ ಹೊರತು ಮಾನವಕುಲದ ಸಮಸ್ಯೆಗಳಿಗೆ ಪರಿಹಾರ ನೀಡದು - ಆದರೆ ಸಮಾಜವಾದ ಪರಿಹಾರ ನೀಡುವ ಸಾಮರ್ಥ್ಯ ತೋರಿದೆ ಎಂದರು ಸುರ್ಜಿತ್.

ವಿಶ್ವಾದ್ಯಂತ ಆರ್ಥಿಕ ಹಿಂಜರಿತ ಕಾಣಬರುತ್ತಿದೆ. ವಿಶ್ವದ ಆರ್ಥಿಕದಲ್ಲಿ ಬಡವರ ಪಾಲು ಇಳಿಯುತ್ತಿದೆ. ಸಿರಿವಂತರ ಪಾಲು ಹೆಚ್ಚುತ್ತಿದೆ ಎಂದು ಬೂರ್ಜ್ವಾ ಪಂಡಿತರೇ ಒಪ್ಪಿಕೊಳ್ಳುತ್ತಿದ್ದಾರೆ. ವಿಭಿನ್ನ ದೇಶಗಳಲ್ಲಿ ದೊಡ್ಡ ಪ್ರತಿರೋಧ ಬೆಳೆಯುತ್ತಿದೆ. ಇದು ಮುಷ್ಕರಗಳ ರೂಪದಲ್ಲಿ ಮಾತ್ರವಲ್ಲ, ಚುನಾವಣೆಗಳಲ್ಲಿ ಬಲಪಂಥೀಯರ ಸೋಲುಗಳಲ್ಲೂ ವ್ಯಕ್ತಗೊಳ್ಳುತ್ತಿದೆ. ಇತ್ತೀಚೆಗೆ ಜರ್ಮನಿಯಲ್ಲಿ ಸೋಶಲ್ ಡೆಮಾಕ್ರಟಿಕ್ ಪಕ್ಷದ ಭಾರೀ ವಿಜಯ, ಅದಕ್ಕಿಂತಲೂ ಹೆಚ್ಚಾಗಿ ಹೊಸ ಸರಕಾರ ಬಂದ ಕೂಡಲೇ ಪೆನ್ಷನ್ ಕಡಿತವನ್ನು ರದ್ದು ಮಾಡುವ, ನಿರುದ್ಯೋಗವನ್ನು ಎದುರಿಸುವ ಮಾತಾಡಬೇಕಾಗಿ ಬಂದಿದೆ ಎಂದರು.

ರಾಷ್ಟ್ರೀಯ ಸನ್ನಿವೇಶ ತೀವ್ರವಾಗಿ ಬದಲಾಗಿದೆ ಎನ್ನುತ್ತಾ ಕಳೆದ ಮೂರು ವರ್ಷಗಳ ರಾಜಕೀಯ ಬೆಳವಣಿಗೆಗಳನ್ನು ವಿಶ್ಲೇಷಿಸಿದರು. ಕಾಂಗ್ರೆಸ್‌ನ ಆರ್ಥಿಕ ನೀತಿಗಳಿಂದುಂಟಾದ ರಾಜಕೀಯ ಅಸ್ಥಿರತೆ ಹೆಚ್ಚುತ್ತಿದೆ. ಬಿಜೆಪಿ ಸರಕಾರ ಬಂದ ನಂತರ ಅಪಾಯ, ಅಸ್ಥಿರತೆ ಮತ್ತಷ್ಟು ಹೆಚ್ಚಿದೆ. ಬಿಜೆಪಿಯ ಆರ್ಥಿಕ ನೀತಿಗಳೂ ಅದೇ ಕಾಂಗ್ರೆಸ್ಸಿನ ನೀತಿಗಳು. 'ಸ್ವದೇಶಿ' ಬಾಯಲ್ಲಿ ಮಾತ್ರ. ಆರ್.ಎಸ್.ಎಸ್. ಮತ್ತು ಬಿಜೆಪಿ ಕೆಲಸಗಳನ್ನು ಹಂಚಿಕೊಂಡಂತೆ ಕಾಣುತ್ತದೆ. ಬಿಜೆಪಿ ಏನು ಬೇಕಾದರೂ ತಗೊಳ್ಳಿ, ಡಾಲರು ಕೊಡಿ ಎಂದು ಉದಾರೀಕರಣ, ಜಾಗತೀಕರಣದ ನೀತಿಗಳನ್ನು ಭರದಿಂದ ಜಾರಿಗೆ ತರುತ್ತಿದೆ. ಇದರಿಂದ ಉಂಟಾಗುವ ಅಸಂತೃಪ್ತಿಯನ್ನು ಹತೋಟಿಯಲ್ಲಿಡಲು ಆರ್.ಎಸ್.ಎಸ್. 'ಸ್ವದೇಶಿ' ಮಂತ್ರ ಜಪಿಸುತ್ತಿದೆ ಅಷ್ಟೆ. ಪೋಖ್ರಾನ್ ಇದೇ ಹಿನ್ನೆಲೆಯಲ್ಲಿ ಬಂತು. ವಿನಾಶವೇ ಬಾಂಬಿನ ಉದ್ದೇಶವಾದರೆ ಅದು ಸ್ವದೇಶಿಯಾದರೇನು, ವಿದೇಶದ ನೆರವಿನಿಂದ ಬಂದದ್ದಾದರೇನು ಎಂದು ಗೇಲಿ ಮಾಡಿದ ಸುರ್ಜಿತ್ ನಮ್ಮ ಪ್ರಧಾನಿಗಳು ಈ ಸಂದರ್ಭದಲ್ಲಿ ರಾಷ್ಟ್ರಪತಿ ಕ್ಲಿಂಟನ್‌ಗೆ ಬರೆದ ಪತ್ರ ನಾಚಿಕೆಗೇಡು ಎಂದರು.

ಇತ್ತ ಕಾಂಗ್ರೆಸ್ಸಿನಲ್ಲೂ ಏನೂ ಬದಲಾವಣೆಗಳಾಗಿಲ್ಲ. ನೆಹರೂ ಜಾತ್ಯಾತೀತತೆಯ ಬಗ್ಗೆ ಮಾತನಾಡುತ್ತಿದ್ದ ಕಾಂಗ್ರೆಸ್ ಈಗ ಅವನತಿ ಗೊಳ್ಳುತ್ತಿದೆ. ಹಿಂದೆ 1974 ಭೂಸುಧಾರಣೆಯ ವರ್ಷವಾಗಬೇಕೆಂಬ ಮಾತು ಹಾಗೆಯೇ ಉಳಿಯಿತು. ಈಗಲೂ 1991 ರ ನಂತರದ ಐಎಂಎಫ್-ವಿಶ್ವಬ್ಯಾಂಕ್ ಹೇರಿದ ನೀತಿಗಳ ಬಗ್ಗೆ ಅದು ಸ್ವಯಂ ವಿಮರ್ಶೆ ಮಾಡಿಕೊಳ್ಳುತ್ತಿಲ್ಲ. ಇಂತಹ ಸನ್ನಿವೇಶದಲ್ಲಿ ಸವಾಲುಗಳನ್ನು ನಾವು ಎದುರಿಸಬೇಕಾಗಿದೆ. ಆರ್ಥಿಕ ನೀತಿಗಳ ವಿರುದ್ಧ ಮಾತ್ರವಲ್ಲ, ಬಂಡವಾಳ ಶಾಹಿ-ಭೂಮಾಲಕ ಸಿದ್ಧಾಂತಗಳ ವಿರುದ್ಧವೂ ಹೋರಾಟವನ್ನು ನಡೆಸಬೇಕು. ಎಡಪಕ್ಷಗಳು ಐಕ್ಯತೆಯಿಂದ ಮುಂದೊತ್ತಬೇಕು. ನಮ್ಮ ಪಕ್ಷ ಸಂಖ್ಯೆಯ ದೃಷ್ಟಿಯಿಂದ ಮಾತ್ರವಲ್ಲ, ಸತ್ವಶಾಲಿಯಾಗಿ ಬೆಳೆಯಬೇಕು ಎಂದ ಸುರ್ಜಿತ್ "ಕಮ್ಯುನಿಸ್ಟನಾಗಿರುವುದು ಒಂದು ಜೀವನ ಧ್ಯೇಯ. ಸಮಾಜ ಇದೇ ರೀತಿ ಇರಲಿಲ್ಲ, ಇದೇ ರೀತಿ ಇರುವುದಿಲ್ಲ. ಸಮಾಜದ ಇತಿಹಾಸದ ಅಂತ್ಯ, ಶೋಷಣೆಯ ಅಂತ್ಯದೊಂದಿಗೆ. ಕಮ್ಯುನಿಸಂನ ವಿಜಯದೊಂದಿಗೆ. ಕಮ್ಯುನಿಸ್ಟರಿಗೆ ಬೇರೆ ಯಾವುದೇ ಗುರಿಯಿಲ್ಲ" ಎನ್ನುತ್ತಾ ಅವರು ಈಗಿನ ಪ್ರಧಾನ ಕರ್ತವ್ಯಗಳತ್ತ ಗಮನ ಸೆಳೆದರು. ಜನ ನಮ್ಮತ್ತ ನೋಡುತ್ತಿದ್ದಾರೆ. ಜಾರಿಗೆ ತರಲು ಸಾಧ್ಯವಾದ ಪರ್ಯಾಯ ನೀತಿಗಳನ್ನು ಮುಂದಿಡಬೇಕು. ಈ ಬಗ್ಗೆ ಚರ್ಚಿಸಬೇಕು ಎಂದರು.

ಸೂಚನೆಗಳು, ಕೆಲವು ಪ್ರಶ್ನೆಗಳು

ಅಧಿವೇಶನದಲ್ಲಿ ಒಟ್ಟು 38 ಸಂಗಾತಿಗಳು ಈ ಕರಡು ನಿರ್ಣಯದ ಮೇಲಿನ ಚರ್ಚೆಗಳಲ್ಲಿ ಪಾಲ್ಗೊಂಡರು. ಎಲ್ಲಾ ಸಂಗಾತಿಗಳೂ ಕರಡಿನ ಒಟ್ಟು ದಿಕ್ಕನ್ನು ಬೆಂಬಲಿಸುತ್ತಾ ಕೆಲವಾರು ಪ್ರಶ್ನೆಗಳನ್ನು, ಸೂಚನೆಗಳನ್ನು ಮುಂದಿಟ್ಟರು. ಬಿಜೆಪಿ ಅಧಿಕಾರಕ್ಕೆ ಬಂದುದರ ಅಪಾಯವನ್ನು ಒತ್ತಿಹೇಳುತ್ತಾ ಈಗಿನ ಸನ್ನಿವೇಶದಲ್ಲಿ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಡಬೇಕಾದ್ದು ಪ್ರಧಾನ ಕರ್ತವ್ಯ ಎಂದರು. ಅದೇ ವೇಳೆಗೆ ಆರ್ಥಿಕ ನೀತಿಗಳ ವಿರುದ್ಧ ಹೋರಾಟವನ್ನು ಸಡಿಲಗೊಳಿಸಬಾರದು, ಬದಲಾಗಿ ತೀವ್ರ ಗೊಳಿಸಬೇಕು ಎಂದರು. ಮೂರನೇ ಪರ್ಯಾಯದ ಬಗ್ಗೆ ಮಾತನಾಡುತ್ತಾ ಕೆಲವು ಪ್ರತಿನಿಧಿಗಳು ಸಂಯುಕ್ತ ರಂಗದ ಅನುಭವದ ಹಿನ್ನೆಲೆಯಲ್ಲಿ ಇದನ್ನು ಈಗ ಮತ್ತೆ ಹೇಗೆ ಬೆಸೆಯುವುದು ಎಂದೂ ಪ್ರಶ್ನಿಸಿದರು. ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಮತ್ತೆ ಒಂದುಗೂಡಿಸಲು ಜನಗಳ ತುರ್ತು ಪ್ರಶ್ನೆಗಳ ಮೇಲೆ ಸಾಮೂಹಿಕ ಆಂದೋಲನಗಳನ್ನು, ಹೋರಾಟಗಳನ್ನು ನಡೆಸಬೇಕು ಎಂದರು. ಎಡಶಕ್ತಿಗಳು ಆರ್ಥಿಕ ನೀತಿಗಳ ವಿರುದ್ಧ ಹೋರಾಟದಲ್ಲಿ ಮುಂಚೂಣಿಯಲ್ಲಿರಬೇಕು, ಉದಾರೀಕರಣದ ವಿರುದ್ಧ ಹೋರಾಟ ಹಾಗೂ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟದ ನಡುವಿನ ಗೊಣಸನ್ನು ಕಾಣುವುದು ಅಗತ್ಯ" ಎಂಬ ಕರಡು ನಿರ್ಣಯದ ವಾಕ್ಯವನ್ನು ನೆನಪಿಸಿದರು. ಪ್ರತಿನಿಧಿಗಳು ತಂತಮ್ಮ ರಾಜ್ಯಗಳ ಅನುಭವಗಳನ್ನು ಹೇಳುತ್ತಾ ಕೋಮುವಾದದ ವಿರುದ್ಧ ಹೋರಾಟ ಉದಾರೀಕರಣ-ಖಾಸಗೀಕರಣ-ಜಾಗತೀಕರಣದ ಧಾಳಿಗಳ ವಿರುದ್ಧ ಪ್ರತಿರೋಧವನ್ನು ನಿರ್ಲಕ್ಷಿಸಬಾರದು, ಏಕೆಂದರೆ ಇವು ಬಹುಪಾಲು ಜನಗಳ ಮೇಲೆ ವಿನಾಶಕಾರಿ ಪರಿಣಾಮ ಬೀರುತ್ತದೆ ಎಂದು ಒತ್ತಿ ಹೇಳಿದರು. ಆರ್ಥಿಕ ನೀತಿಗಳ ವಿರುದ್ಧ ಹೋರಾಟವಿಲ್ಲದೆ ಕೋಮುವಾದದ ವಿರುದ್ಧ ಸಮರವೂ ಯಶಸ್ವಿಯಾಗುವುದಿಲ್ಲ. ಬಿಜೆಪಿ ಅಧಿಕಾರಕ್ಕೆ ಬರುವುದರೊಂದಿಗೆ ಉದಾರೀಕರಣದ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಅನುಸರಿಸುತ್ತಿರುವುದರಿಂದ ಇವೆರಡೂ ಹೋರಾಟಗಳನ್ನು ಒಂದು ಸಮಗ್ರ ಹೋರಾಟದ ಭಾಗಗಳಾಗಿ ಕಾಣಬೇಕಾಗಿದೆ ಎಂದರು. ಪಕ್ಷದ ಕಾರ್ಯಕ್ರಮವನ್ನು ಸಮಯಬದ್ಧಗೊಳಿಸುವಲ್ಲಿ 'ಇನ್ನೂ ವಿಳಂಬ ಸಲ್ಲ ಎಂದೂ ಹಲವು ಪ್ರತಿನಿಧಿಗಳು ಹೇಳಿದರು.

ಸಂಯುಕ್ತ ರಂಗದ ಅನುಭವ

ಸಂಯುಕ್ತ ರಂಗದ ಆಡಳಿದ ಕಾಲದಲ್ಲಿ ಜನ-ವಿರೋಧಿ ಆರ್ಥಿಕ ನೀತಿಗಳ ವಿರುದ್ಧ ಸತತ ಹೋರಾಟ ನಡೆಸದ ಕಾರಣ ಬಿಜೆಪಿ ಜನಗಳ ಅಸಂತೃಪ್ತಿಯ ಲಾಭ ಪಡೆಯಿತು ಎಂದು ಅಭಿಪ್ರಾಯ ಪಟ್ಟರು. ಉದಾರೀಕರಣದ ವಿರುದ್ಧ ಸಂಯುಕ್ತ ರಂಗ ಸರಕಾರದ ಅವಧಿಯಲ್ಲೂ ಧೀರ ಹೋರಾಟಗಳನ್ನು ನಡೆಸಬೇಕಾಗಿತ್ತು, ಸಮಾನ ಕನಿಷ್ಟ ಕಾರ್ಯಕ್ರಮದ ಜನ-ಪರ ಕ್ರಮಗಳ ಜಾರಿಗೆ ಭರದಿಂದ ಪ್ರಯತ್ನಿಸಬೇಕಾಗಿತ್ತು ಎಂದು ಹೇಳಿದರು.

ಕರ್ನಾಟಕವೂ ಸೇರಿದಂತೆ ಸಂಯುಕ್ತ ರಂಗ ಅಂಗ ಪಕ್ಷಗಳ ಆಳ್ವಿಕೆಯಲ್ಲಿನ ರಾಜ್ಯಗಳ ಪ್ರತಿನಿಧಿಗಳು ಮೂರನೇ ರಂಗದ ಈ ಪ್ರಯೋಗದಲ್ಲಿ ಆಳುವ ಪಕ್ಷಗಳು ಎದುರಿಸಬೇಕಾದ ಸಮಸ್ಯೆಗಳನ್ನು, ಆಳುವ ಪಕ್ಷದ ಉದಾರೀಕರಣ ನೀತಿಗಳ ಜಾರಿಯ ರೀತಿಯನ್ನು, ತಮ್ಮ ಅನುಭವಗಳ ನಕಾರಾತ್ಮಕ-ಸಕಾರಾತ್ಮಕ ಅಂಶಗಳನ್ನು ಹೇಳಿದರು. ಕರ್ನಾಟಕದ ಪ್ರತಿನಿಧಿಗಳ ಪರವಾಗಿ ಕಾಂ॥ ಜಿ.ವಿ.ಶ್ರೀರಾಮರೆಡ್ಡಿ ಮಾತನಾಡಿದರು.

ಬಿಜೆಪಿ ಆಳ್ವಿಕೆಯ ರಾಜ್ಯಗಳ ಪ್ರತಿನಿಧಿಗಳು ಈ ಸರಕಾರಗಳ ಕೋಮುವಾದಿಯಷ್ಟೇ ಅಲ್ಲ, ಭ್ರಷ್ಟ ಹಾಗೂ ದಮನಕಾರಿ ಆಳ್ವಿಕೆಯ ಚಿತ್ರ ನೀಡಿದರು. ಉತ್ತರ ಪ್ರದೇಶ ಮತ್ತು ರಾಜಸ್ತಾನದಲ್ಲಿ ಮಾತ್ರವಲ್ಲ ಹರ್‍ಯಾಣದಂತ ರಾಜ್ಯದಲ್ಲೂ ಆರ್.ಎಸ್.ಎಸ್. ಸಿದ್ಧಾಂತವನ್ನು ಆಡಳಿತದಲ್ಲಿ, ಶಿಕ್ಷಣದಲ್ಲಿ ತೂರಿಸುವ ಪ್ರಯತ್ನಗಳನ್ನು ವಿವರಿಸಿದರು. ರಾಜಸ್ತಾನದಲ್ಲಿ ಮಹಿಳೆಯರ ಮೇಲೆ, ಗುಜರಾತಿನಲ್ಲಿ ಮುಸ್ಲಿಮರ ಮೇಲೆ ಹಾಗೂ ಹರ್‍ಯಾಣದಲ್ಲಿ ಕಾರ್ಮಿಕ ಹಕ್ಕುಗಳ ಮೇಲೆ ಧಾಳಿಗಳು ನಡೆಯುತ್ತಿವೆ. ಬಿಜೆಪಿ ಹಿಂದೆ ಅಧಿಕಾರದಲ್ಲಿದ್ದ ಮಧ್ಯ ಪ್ರದೇಶದಲ್ಲೂ ವಾಜಪೇಯಿ ಸರಕಾರ ಬಂದ ನಂತರ ಕೋಮುವಾದಿ ಶಕ್ತಿಗಳು ಅಲ್ಪಸಂಖ್ಯಾತರ ಮೇಲೆ ಧಾಳಿಗಳನ್ನು ತೀವ್ರಗೊಳಿಸಿದ್ದಾರೆ, ಇತ್ತೀಚೆಗೆ ಸಿಪಿಐ(ಎಂ) ನ ಗ್ವಾಲೇರ್ ಜಿಲ್ಲಾ ಸಮಿತಿಯ ಕಛೇರಿಯ ಮೇಲೆ ಧಾಳಿ ಮಾಡಿರುವತ್ತ ಪ್ರತಿನಿಧಿಗಳು

ಪುಟ 5 ಕ್ಕೆ





ಮಹಾಧಿವೇಶನದ ಅಧ್ಯಕ್ಷ ಮಂಡಳಿ

ಪುಟ 4 ರಿಂದ

ಗಮನ ಸೆಳೆದರು.

ಈಶಾನ್ಯ ಭಾರತದ ನೋವು

ಈಶಾನ್ಯ ಭಾರತದ ರಾಜ್ಯಗಳ ಪ್ರತಿನಿಧಿಗಳು ತಮ್ಮ ಪ್ರದೇಶದ ಬಗ್ಗೆ ದೀರ್ಘ ಕಾಲದಿಂದ ಕೇಂದ್ರದಲ್ಲಿನ ಸರಕಾರಗಳು ತೋರಿರುವ ನಿರ್ಲಕ್ಷ್ಯ, ಆದರಿಂದಾಗಿ ಎದ್ದಿರುವ ಉಗ್ರಗಾಮಿ ಹಾಗೂ ಭಯೋತ್ಪಾದಕ ಚಟುವಟಿಕೆಗಳಿಂದ ಆಗುತ್ತಿರುವ ಹಾನಿಗಳ, ಸಂಕಟಗಳ ಬಗ್ಗೆ ತೀವ್ರ ಕಳಕಳಿಯಿಂದ ಮಾತನಾಡಿದರು. ದೇಶದ ಇತರ ಭಾಗಗಳಲ್ಲಿ ಈ ಭಾಗದ ಜನಗಳ ನೋವುಗಳ ಬಗ್ಗೆ ಪ್ರಜ್ಞೆ ಉಂಟುಮಾಡಬೇಕು, ಈ ಪ್ರದೇಶದ ಅಭಿವೃದ್ಧಿಯ ಬಗ್ಗೆ, ಎಡ ಶಕ್ತಿಗಳ ಸಂಯೋಜಿತ ಪ್ರಯತ್ನ ನಡೆಯಬೇಕು, ಜತೆಗೇ ಮಾನವ ಹಕ್ಕುಗಳ ನೆಪದಲ್ಲಿ ಭಯೋತ್ಪಾದಕ ಗುಂಪುಗಳ ಮುಖವಾಣಿಯಾಗಿ ವರ್ತಿಸುವ ಗುಂಪುಗಳನ್ನು ಬಯಲಿಗೆಳೆಯಬೇಕು ಎಂದು ಕೇಳಿಕೊಂಡರು.

ತ್ರಿಪುರಾದ ಸಂಗಾತಿಗಳು ತಮ್ಮ ರಾಜ್ಯದಲ್ಲಿನ ಪರಿಸ್ಥಿತಿ, ಬಿಜೆಪಿ ಅದನ್ನು ರಾಜಕೀಯವಾಗಿ ದುರುಪಯೋಗ ಪಡಿಸಿಕೊಳ್ಳುತ್ತಿರುವ ಬಗ್ಗೆ ಹೇಳಿದರು. ಇಡೀ ಪಕ್ಷ ತ್ರಿಪುರಾದಲ್ಲಿ ನಮ್ಮ ಸಂಗಾತಿಗಳ ಹೋರಾಟವನ್ನು ಬೆಂಬಲಿಸಿ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕು ಎಂದು ಮನವಿ ಮಾಡಿದರು.

ಪಶ್ಚಿಮ ಬಂಗಾಳ ಮತ್ತು ಕೇರಳದ ಪ್ರತಿನಿಧಿಗಳು ತಮ್ಮ ರಾಜ್ಯಗಳ ಸರಕಾರಗಳು ಪರ್ಯಾಯ ನೀತಿಗಳನ್ನು ಮುಂದಿಟ್ಟು ಜಾರಿಗೆ ತರುತ್ತಿರುವ ರೀತಿಯ ಬಗ್ಗೆ ಉದಾಹರಣೆಗಳನ್ನು ನೀಡಿದರು (ಬಾಕ್ಸ್ ನೋಡಿ)

ಅವಿರೋಧ ಅಂಗೀಕಾರ

ಸುರ್ಜಿತ್‌ರವರು ಚರ್ಚೆಗೆ ಉತ್ತರ ನೀಡುತ್ತಾ ಈಗಿನ ಸನ್ನಿವೇಶದಲ್ಲಿ ಹೊಸದೇನಿದೆ ಎಂದು ವಿವರಿಸುತ್ತಾ ಅತಿದೊಡ್ಡ ಶಕ್ತಿಯಾಗಿ ಹೊಮ್ಮಿರುವ ಬಿಜೆಪಿಯ ವಿರುದ್ಧ ಹೋರಾಟ ಏಕೆ ಪ್ರಧಾನ ಕರ್ತವ್ಯ ಎಂದು ಮತ್ತೊಮ್ಮೆ ವಿವರಿಸಿದರು. ಎರಡನೆಯದಾಗಿ, ಇದರಿಂದಾಗಿ ಆರ್ಥಿಕ ನೀತಿಗಳ ವಿರುದ್ಧ ಹೋರಾಟವನ್ನು ಸಡಿಲಗೊಳಿಸಬೇಕೇ? ಇದು ಸಾಧ್ಯವೇ ಇಲ್ಲ ಎಂದ ಸುರ್ಜಿತ್ ಅಲ್ಲದೆ ಬಿಜೆಪಿ ಈಗ ಎಲ್ಲವನ್ನು ಮಾರಾಟಕ್ಕಿಟ್ಟಿದೆ ಎಂದು ಪುನರುಚ್ಚರಿಸಿದರು. ಮೂರನೇ ಪರ್ಯಾಯದ ಬಗ್ಗೆ ಹೇಳುತ್ತಾ 1977 ರಲ್ಲಿ ಜನತಾಪಕ್ಷದ ಸರಕಾರಕ್ಕೆ ತುರ್ತುಪರಿಸ್ಥಿತಿ ವ್ಯವಸ್ಥೆಯನ್ನು ಕಳಚಿಹಾಕಲು ಬೆಂಬಲ ನೀಡಿದ್ದು, 1989 ರಲ್ಲಿ ವಿ.ಪಿ.ಸಿಂಗ್ ಸರಕಾರಕ್ಕೆ ಅದರ ನೀತಿಗಳ ಅನುಷ್ಠಾನಕ್ಕೆ ಬೆಂಬಲ ನೀಡಿದ್ದನ್ನು, 1996 ರಲ್ಲಿ ಸಂಯುಕ್ತ ರಂಗ ರಚನೆಗೊಂಡ ಸಂದರ್ಭವನ್ನು ನೆನಪಿಸಿದರು. ಈ ಹಿನ್ನೆಲೆಯಲ್ಲಿ ನಮ್ಮ 'ಜನತಾ ಪ್ರಜಾಪ್ರಭುತ್ವ ರಂಗ'ದ ಮೂಲಭೂತ ಘೋಷಣೆ, ನಂತರ ಮಧ್ಯಂತರ ಘೋಷಣೆಯಾಗಿ ಎಡ ಪ್ರಜಾಪ್ರಭುತ್ವ ರಂಗದ ಘೋಷಣೆ ಹಾಗೂ ನಂತರ ಕೋಮುವಾದಿ ಶಕ್ತಿಗಳ ಬಲ ಹೆಚ್ಚಲಾರಂಭಿಸಿದಾಗ ಎಡ ಪ್ರಜಾಸತ್ತಾತ್ಮಕ ಜಾತ್ಯಾತೀತ ಪರ್ಯಾಯದ ಘೋಷಣೆ ಇವುಗಳ ನಡುವಿನ ವ್ಯತ್ಯಾಸವನ್ನು ಹಾಗೂ ಕೊಂಡಿಯನ್ನು ವಿವರಿಸಿದರು.

ಮಹಾಧಿವೇಶನದ ಮೊದಲು ಹಾಗೂ ಮಹಾಧಿವೇಶನದಲ್ಲಿ ಬಂದ ತಿದ್ದುಪಡಿಗಳ ಬಗ್ಗೆ ಚರ್ಚಿಸಿ ಅವುಗಳಲ್ಲಿ ಕೆಲವನ್ನು ಸ್ವೀಕರಿಸಿದ ರಾಜಕೀಯ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ಈ ವೇಳೆಗೆ ಹೊರಗೆ 'ಮಾಧ್ಯಮ ಕೇಂದ್ರ'ದಲ್ಲಿ ದೇಶದ ಎಲ್ಲಾ ಪತ್ರಿಕೆಗಳ, ಟಿ.ವಿ.ಚಾನಲ್‌ಗಳ ಪತ್ರಕರ್ತರು ಈ ಸುದ್ದಿ ಕೇಳಲು ಕಾತುರರಾಗಿ ನಿಂತಿದ್ದರು. ಸುರ್ಜಿತ್‌ರವರು ನಿರ್ಣಯ ಸರ್ವಾನುಮತದಿಂದ ಅಂಗೀಕಾರವಾಯಿತು ಎಂದು ಪ್ರಕಟಿಸಿದಾಗ ಬಹುಶಃ ಅವರಲ್ಲಿ ಕೆಲವರಿಗೆ ನಿರಾಸೆಯೂ ಆಗಿರಬಹುದು. ಮರುದಿನ ತಂತಮ್ಮ ಮೂಗಿನ ನೇರಕ್ಕೆ ಈ ಸುದ್ದಿಯನ್ನು ಪ್ರಕಟಿಸಿದ್ದು ನಮ್ಮ ಓದುಗರಲ್ಲಿ ಹಲವರ ಗಮನಕ್ಕೆ ಬಂದಿರಬಹುದು.

ಮಹಾಧಿವೇಶನದ ಚಾಲನಾ ಸಮಿತಿ



3000 ತಿದ್ದುಪಡಿಗಳು

ತೀವ್ರ ಆಸಕ್ತಿ, ಆತಂಕದ ಪ್ರತೀಕ

ಎರಡು ತಿಂಗಳು ದೇಶಾದ್ಯಂತ ಸಿಪಿಐ(ಎಂ)ನ ಕರಡು ರಾಜಕೀಯ ನಿರ್ಣಯದ ಮೇಲೆ ನಡೆದ ಚರ್ಚೆಯ ಪರಿಣಾಮವಾಗಿ ಈ ಬಾರಿ ಹಿಂದೆಂದಿಗಿಂತಲೂ ಹೆಚ್ಚು ತಿದ್ದುಪಡಿಗಳು ಬಂದವು ಎಂದು ತಿದ್ದುಪಡಿಗಳ ಬಗ್ಗೆ ವರದಿಯನ್ನು ಮಂಡಿಸುತ್ತಾ ಸೀತಾರಾಂ ಯೆಚೂರಿ ಹೇಳಿದರು. ಮಹಾಧಿವೇಶನದ ಮೊದಲು ಬಂದ ತಿದ್ದುಪಡಿಗಳ ಸಂಖ್ಯೆ 4344 (ಕಳೆದ ಮಹಾಧಿವೇಶದಲ್ಲಿ ಬಂದ ತಿದ್ದುಪಡಿ ಗಳ ಸಂಖ್ಯೆ 2772). ಸೆಪ್ಟೆಂಬರ್ 15 ತಿದ್ದುಪಡಿಗಳನ್ನು ಕಳಿಸುವ ಕೊನೆಯ ದಿನವಾಗಿತ್ತು. ಆದರೂ ಸೆಪ್ಟೆಂಬರ್ 24 ರ ವರೆಗೆ ಬಂದ ತಿದ್ದುಪಡಿಗಳನ್ನು ಗಮನಕ್ಕೆ ತೆಗೆದುಕೊಳ್ಳಲಾಯಿತು. ಮೇಲೆ ಹೇಳಿದ ಸಂಖ್ಯೆಯಲ್ಲಿ 1222 ಈ ದಿನಾಂಕದ ನಂತರ ಬಂದವು. ಅವನ್ನು ಪರಿಗಣನೆಗೆ ತೆಗೊಳ್ಳಲಿಲ್ಲ. ಅಂದರೆ ಒಟ್ಟು ತಿದ್ದುಪಡಿಗಳ ಸಂಖ್ಯೆ 3122. ಇವುಗಳಲ್ಲಿ 2419 ರಾಷ್ಟ್ರೀಯ ಪ್ರಶ್ನೆಗಳಿಗೆ ಸಂಬಂಧಿಸಿದ್ದವು. ಈ ಹಿಂದೆ ಅಂತರ್ರಾಷ್ಟ್ರೀಯ ಪ್ರಶ್ನೆಗಳ ಬಗ್ಗೆ ಹೆಚ್ಚು ತಿದ್ದಪಡಿಗಳು ಬಂದಿದ್ದವು. ಈ ಬಾರಿ ತದ್ವಿರುದ್ಧವಾಗಿರುವುದು ಪಕ್ಷದ ಸದಸ್ಯರಲ್ಲಿ ಕಳೆದ ಮೂರೂವರೆ ವರ್ಷಗಳ ರಾಜಕೀಯ ಬೆಳವಣಿಗೆಗಳ ಬಗ್ಗೆ ಇರುವ ತೀವ್ರ ಆಸಕ್ತಿ ಹಾಗೂ ಆತಂಕದ ಸೂಚನೆ, ಇದು ಸಕಾರಾತ್ಮಕ, ಆರೋಗ್ಯಕರ ಪ್ರವೃತ್ತಿ ಎಂದು ಸೀತಾರಾಂ ಯೆಚೂರಿ ಹೇಳಿದರು.

ಅಂತರ್ರಾಷ್ಟ್ರೀಯ ವಿಭಾಗದಲ್ಲಿನ ತಿದ್ದುಪಡಿಗಳು ಮುಖ್ಯವಾಗಿ ಇತ್ತೀಚಿನ ಬೆಳವಣಿಗೆಗಳನ್ನು ಸೇರಿಸುವ ಬಗ್ಗೆ, ಕೆಲವೊಂದು ಘಟನೆಗಳ ವಿವರಗಳ ಬಗ್ಗೆ, ಈಗಿರುವ ಸಮಾಜವಾದಿ ದೇಶಗಳ ಪರಿಸ್ಥಿತಿಗಳ ಬಗ್ಗೆ ಹಾಗೂ ಈಗಿನ ಪ್ರಧಾನ ವೈರುಧ್ಯಗಳ ಕುರಿತಾಗಿದ್ದವು.

ರಾಷ್ಟ್ರೀಯ ವಿಭಾಗದಲ್ಲಿನ ತಿದ್ದುಪಡಿಗಳಲ್ಲಿ ನಂತರದ ಬೆಳವಣಿಗೆಗಳ ಪ್ರಸ್ತಾಪ, ಮೇ 1996 ರಲ್ಲಿ ಸಂಯುಕ್ತ ರಂಗ ಸರಕಾರ ಸೇರದಿರುವ ನಿರ್ಧಾರ, ಮೂರನೇ ಪರ್ಯಾಯ-ಸಂಯುಕ್ತ ರಂಗದ ಅನುಭವ, ಪಕ್ಷದ ಪ್ರಗತಿ ಮತ್ತು ಅಭಿವೃದ್ಧಿಯ ಬಗ್ಗೆ ಚಿಂತನೆ ಹಾಗೂ 12ನೇ ಲೋಕಸಭೆಯಲ್ಲಿ ಕಾಂಗ್ರೆಸ್ಸನ್ನು ಬೆಂಬಲಿಸುವುದು ಮತ್ತು ಮೂರನೇ ಪರ್ಯಾಯದ ನಡುವಿನ ಗೊಂದಲ - ಹೀಗೆಂದು ಸೀತಾರಾಂ ಯೆಚೂರಿ ಯವರು ವಿಂಗಡಿಸಿದರು. ಇವಲ್ಲದೆ 528 ಉದ್ದನೆಯ ಪ್ರಸ್ತಾವಗಳು, ಸೂಚನೆಗಳು ಬಂದವು. ಇವುಗಳಲ್ಲಿ 91 ಪ್ರಶ್ನೆಗಳ ಮೇಲಿನ ತಿದ್ದುಪಡಿಗಳನ್ನು (ತಿದ್ದುಪಡಿಗಳ ಸಂಖ್ಯೆಯ ಲೆಕ್ಕದಲ್ಲಿ 300 ಕ್ಕೂ ಹೆಚ್ಚಾಗಬಹುದು) ಅಂಗೀಕರಿಸ ಲಾಯಿತು.

ಮಹಾಧಿವೇಶನದಲ್ಲಿ ಪ್ರತಿನಿಧಿಗಳಿಂದ ಬಂದ ಒಟ್ಟು ತಿದ್ದುಪಡಿಗಳ ಸಂಖ್ಯೆ 285 ಮತ್ತು 11 ಸೂಚನೆಗಳು. ಇವುಗಳಲ್ಲಿ 14 ನ್ನು ಸ್ವೀಕರಿಸಲಾಯಿತು. ಈ ಬಗ್ಗೆಯೂ ಸೀತಾರಾಂ ಯೆಚೂರಿ ವಿವರಣೆ ನೀಡಿದರು.

ಸಿಪಿಐ(ಎಂ) ನೇತೃತ್ವದ ಸರಕಾರಗಳು ಕೊಟ್ಟಿವೆ

ಪರ್ಯಾಯ ನೀತಿಗಳ ಇಣುಕು ನೋಟ

ಅಧಿಕಾರಕ್ಕೆ ಬಂದಾಗ ವಿರೋಧ ಪಕ್ಷಗಳಲ್ಲಿರುವಾಗ ತೋರಿದ ವಿರೋಧ ಗಳನ್ನೆಲ್ಲಾ ಮರೆತು ಹಿಂದಿನ ಆಳುವ ಪಕ್ಷದ ನೀತಿಗಳನ್ನೇ ಮುಂದುವರೆಸುವುದು ಕಾಂಗ್ರೆಸ್ ಮತ್ತು ಬಿಜೆಪಿಗಳ ಮತ್ತು ಇತರ ಆಳುವ ವರ್ಗಗಳ ಪಕ್ಷಗಳ ಸಮಾನ ಗುಣ. ಆದರೆ ಎಡಶಕ್ತಿಗಳು ಮಾತ್ರ ಇವಕ್ಕೆ ಅಪವಾದ. ಮಹಾಧಿವೇಶನದಲ್ಲಿ ಮಾತ ನಾಡಿದ ಪಶ್ಚಿಮ ಬಂಗಾಳ ಮತ್ತು ಕೇರಳದ ಪ್ರತಿನಿಧಿಗಳು ಇದರ ಒಂದೊಂದು ಉದಾಹರಣೆಗಳನ್ನು ಮುಂದಿಟ್ಟರು.

ಪಶ್ಚಿಮ ಬಂಗಾಳ ಎಡರಂಗ ಸರ್ಕಾರದ ಸಾಧನೆ - ಭೂಸುಧಾರಣೆ ಮತ್ತು ವಿಕೇಂದ್ರೀಕರಣ

ಪಶ್ಚಿಮ ಬಂಗಾಳದ ಪ್ರತಿನಿಧಿ ಅಸೀಮ್ ದಾಸ್ ಗುಪ್ತಾ ಮಾತನಾಡುತ್ತಾ ಎಡರಂಗ ಸರ್ಕಾರಗಳು ಆರ್ಥಿಕ ಅಭಿವೃದ್ಧಿಯಲ್ಲಿ ವಹಿಸಿದ ಪಾತ್ರವನ್ನು, ವಿಶ್ವಾದ್ಯಂತ ಐಎಂಎಫ್ ಮಾದರಿ ವಿಫಲವಾಗಿರುವ ಹಿನ್ನೆಲೆಯಲ್ಲಿ ಈ ಪರ್ಯಾಯ ದಾರಿಯ ಮಹತ್ವವನ್ನು ವಿವರಿಸಿದರು. ಇದನ್ನು ಒಂದು ರಾಜ್ಯ ಸರ್ಕಾರದ ಸೀಮಿತ ಅಧಿಕಾರಗಳ ಪರಿಧಿಯೊಳಗೇ ಸಾಧಿಸಲಾಯಿತು ಎಂಬುದನ್ನು ಅವರು ನೆನಪಿಸಿದರು. ಈಗ ಪಶ್ಚಿಮ ಬಂಗಾಳದಲ್ಲಿ 70% ಕೃಷಿ ಭೂಮಿ ಸಣ್ಣ ಮತ್ತು ಅಂಚಿನಲ್ಲಿರುವ ರೈತರ ಒಡೆತನದಲ್ಲಿವೆ. ಅಖಿಲ ಭಾರತ ಮಟ್ಟದಲ್ಲಿ ಇದು ಕೇವಲ 34%. ಭೂ ಸುಧಾರಣೆಗಳ ಯಶಸ್ವಿ ಜಾರಿಯ ನಂತರ ಸಣ್ಣ ಕೈಗಾರಿಕೆಗಳ ಮೇಲೆ ಗಮನ, ನಂತರ ಈಗ ದೊಡ್ಡ ಕೈಗಾರಿಕೆಗಳ ಮೇಲೆ ಗಮನನೀಡ ಲಾಗುತ್ತಿದೆ. 5000 ಕೋಟಿ ರೂ.ಗಳ ಹಲ್ದಿಯಾ ಪೆಟ್ರೊ ರಾಸಾಯನಿಕ ಕಾರ್ಖಾನೆ ಇದಕ್ಕೊಂದು ಉದಾಹರಣೆ - ಸದ್ಯದಲ್ಲೇ ಪೂರ್ಣಗೊಳ್ಳಲಿರುವ ಇದು ಒಂದು ಬೃಹತ್ ಜನತಾ ಯೋಜನೆ ಎಂದರು ಅಸೀಮ್ ದಾಸ್ ಗುಪ್ತಾ.

1978 ರಲ್ಲಿ ವಿಕೇಂದ್ರೀಕರಣದ ಪ್ರಕ್ರಿಯೆ ಆರಂಭವಾಯಿತು. ಸಂಯೋಜನೆಯ ಅಗತ್ಯ ಕಂಡು ಬಂದಾಗ ಜಿಲ್ಲಾಮಟ್ಟದ ಯೋಜನಾ ಸಮಿತಿಗಳನ್ನು ರಚಿಸಲಾಯಿತು. ಈಗ ಅಭಿವೃದ್ಧಿ ಕಾರ್ಯಗಳಿಗೆ ಹಣವನ್ನು ಇಲಾಖೆಯ ಮೂಲಕ ಕೊಡುತ್ತಿಲ್ಲ, ಜಿಲ್ಲಾ ಪಂಚಾಯತ್, ಗ್ರಾಮ ಪಂಚಾಯತುಗಳ ಮೂಲಕ ಕೊಡಲಾಗುತ್ತಿದೆ. ಯೋಜನಾ ಪ್ರಕ್ರಿಯೆಯಲ್ಲಿ ಈ ಸ್ಥಳೀಯ ಸಂಸ್ಥೆಗಳನ್ನು ಮಾತ್ರವಲ್ಲ ಇನ್ನೂ ಕೆಳಗೆ ಹೋಗಿ ಜನಗಳನ್ನು ಬಳಸಿಕೊಳ್ಳುವ ವ್ಯವಸ್ಥೆ ತರಲಾಗಿದೆ. ಫಲಾನುಭವಿಗಳ ಸಮಿತಿ ಗಳನ್ನು ರಚಿಸಿ ಇವು ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳ ಮೇಲೆ ಕಣ್ಣಿಡುವಂತಾಗಿದೆ. ಆಳದ ಕೊಳವೆ ಬಾವಿಗಳ ಒಂದು ಉದಾಹರಣೆಗಳನ್ನು ಅಸೀಮ್ ದಾಸ್ ಗುಪ್ತಾ ನೀಡಿದರು. ಗ್ರಾಮ ಪಂಚಾಯತುಗಳನ್ನು ಬಳಸಿಕೊಳ್ಳಲಾಯಿತಷ್ಟೇ ಅಲ್ಲ, ರೈತರ ಸಮಿತಿಗಳನ್ನು ರಚಿಸಲಾಯಿತು. ಗ್ರಾಮೀಣ ಪ್ರದೇಶಗಳಲ್ಲಿ ಉತ್ಪಾದನಾ ಶಕ್ತಿಗಳ ಬೆಳವಣಿಗೆ, ಉದ್ಯೋಗ ನಿರ್ಮಾಣದಲ್ಲಿ ಹೆಚ್ಚಳದಿಂದಾಗಿ ಜನಗಳ ನಿರೀಕ್ಷೆಗಳು ಹೆಚ್ಚುತ್ತಿವೆ. ಇವು ಇನ್ನಷ್ಟು ತೀವ್ರಗಾಮಿ ಸುಧಾರಣೆಗಳ ಬಗ್ಗೆ ಒತ್ತಡ ತರಬಲ್ಲವು ಎಂದು ಈ ಪರ್ಯಾಯ ನೀತಿಗಳ ಬಗ್ಗೆ ಹೇಳುತ್ತಾ ಅವರು ತಿಳಿಸಿದರು.

ಕೇರಳದ ಅನುಭವ - ಜನತಾ ಯೋಜನೆ


ಕೇರಳದ ಪ್ರತಿನಿಧಿ ಇ.ಎಂ.ಶ್ರೀಧರನ್ ರಾಜಕೀಯ ನಿರ್ಣಯದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡುತ್ತಾ ಕೇರಳದ ಎಡ ಪ್ರಜಾಪ್ರಭುತ್ವ ರಂಗ ಜಾರಿಗೆ ತಂದ ಪರ್ಯಾಯ ದಾರಿಯ ಉದಾಹರಣೆ ನೀಡಿದರು.

ಉತ್ಪಾದಕ ವಲಯಗಳಲ್ಲಿ ಹೆಚ್ಚಿನ ಹಣ ಹೂಡಿಕೆ ಮತ್ತು ವಿಕೇಂದ್ರೀಕರಣದ ಮೇಲೆ ಎಲ್.ಡಿ.ಎಫ್. ಸರಕಾರದ ಪರ್ಯಾಯ ನೀತಿಗೆ ಗಮನ ಕೇಂದ್ರೀಕರಿಸಿತು. ಈ ವಿಕೇಂದ್ರೀಕರಣದ ಪ್ರಕ್ರಿಯೆಯ ಅಡಿಗಲ್ಲೆಂದರೆ 'ಜನತಾ ಯೋಜನೆ', ಹಣಕಾಸು ಮತ್ತು ನಿರ್ಣಯಾಧಿಕಾರವನ್ನು ಗ್ರಾಮಸಭಾ ಮತ್ತು ಇನ್ನೂ ಕೆಳಗಿನವರೆಗೆ ವಿಕೇಂದ್ರೀಕರಿಸಿದ ಯೋಜನೆಯಿದು. ಈ ಯೋಜನೆಯ ಪ್ರಕಾರ ಪಂಚಾಯತುಗಳು ಅಭಿವೃದ್ಧಿಯ ಆದ್ಯತೆಗಳನ್ನು ನಿರ್ಧರಿಸುತ್ತವೆ. ಜನಗಳು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ನೇರವಾಗಿ ಭಾಗವಹಿಸುತ್ತಾರೆ. ಗ್ರಾಮ ಪಂಚಾಯತಿ ಯಂತಹ ಸ್ಥಳೀಯ ಸಂಸ್ಥೆಗಳಿಗೆ ಕಳೆದ ವರ್ಷ 750 ಕೋಟಿ ರೂ. ಗಳನ್ನು ಈ ಯೋಜನೆಯಲ್ಲಿ ನೀಡಲಾಯಿತು.

ಒಂದು ಪಂಚಾಯತಿನ ಒಂದು ವಾರ್ಡಿನ ಎಲ್ಲಾ ಜನರಿರುವ ಗ್ರಾಮ ಸಭೆಗಳು 'ಜನತಾ ಉತ್ಸವ'ಗಳನ್ನು ನಡೆಸಿದವು. ಇದರಲ್ಲಿ ಆ ವಾರ್ಡಿನ ಎಲ್ಲರೂ ರಸ್ತೆ, ಶಾಲೆ, ಅಂಗನವಾಡಿ ಇತ್ಯಾದಿಗಳ ನಿರ್ಮಾಣದಲ್ಲಿ ನೇರವಾಗಿ ಭಾಗವಹಿಸುವಂತಾಯಿತು. ಜನತಾ ಯೋಜನೆಯಡಿ ಮೂರು ಆದ್ಯತಾ ಪ್ರದೇಶಗಳನ್ನು ನಿರ್ಧರಿಸಲಾಯಿತು - ಕುಡಿಯುವ ನೀರು, ದುರ್ಬಲ ವಿಭಾಗಗಳಿಗೆ ಮನೆಗಳು ಮತ್ತು ಕೃಷಿ. ಮೂರು ವರ್ಷಗಳಲ್ಲಿ ಎಲ್ಲರಿಗೂ ಕುಡಿಯುವ ನೀರು, ದುರ್ಬಲ ವಿಭಾಗಗಳವರಿಗೆ ಮನೆ - ಈ ಗುರಿಯನ್ನು ಇಟ್ಟುಕೊಳ್ಳಲಾಗಿದೆ. ಕೇರಳ ಆಹಾರ ಧಾನ್ಯಗಳಿಗೆ ನೆರೆಯ ತಮಿಳುನಾಡನ್ನು ಅವಲಂಬಿಸಿದೆ - ಈ ಅವಲಂಬನೆಯನ್ನು ಕಡಿಮೆ ಮಾಡುವುದು ಕೃಷಿ ನೀತಿಗಳ ಗುರಿಯಾಯಿತು.

ಕಳೆದ ಎರಡು ವರ್ಷಗಳಲ್ಲಿ ತಂತಮ್ಮ ಪ್ರದೇಶಗಳ ಗ್ರಾಮ ಸಭೆಗಳಲ್ಲಿ ಅಭಿವೃದ್ಧಿ ಯೋಜನೆಗಳ ಕುರಿತ ಚರ್ಚೆಗಳಲ್ಲಿ 28 ಲಕ್ಷ ಜನ ಭಾಗವಹಿಸಿದರು. ಇದನ್ನು ಇನ್ನಷ್ಟು ವಿಕೇಂದ್ರೀಕರಿಸಿ 25-30 ಕುಟುಂಬಗಳ ನೆರೆಕರೆ ಗುಂಪುಗಳನ್ನು ರಚಿಸುವ ಯೋಜನೆಯಿದೆ. ಈ ರೀತಿ ಕೇರಳ ನೈಜ ಬುಡಮಟ್ಟದ ಪ್ರಜಾಪ್ರಭುತ್ವವನ್ನು ಜಾರಿಗೆ ತರುತ್ತಿದೆ. ಇದರ ಫಲಿತಾಂಶ ಮುಂದಿನ ಕೆಲವು ವರ್ಷಗಳಲ್ಲಿ ಎಲ್ಲರ ಗಮನಕ್ಕೆ ಬರಲಿದೆ ಎಂದು ಕಾಂ|| ಶ್ರೀಧರನ್ ಹೇಳಿದರು.

ರಾಜಕೀಯ - ಸಂಘಟನಾ ವರದಿಯ ಮೇಲೆ ಚರ್ಚೆ



ಅಕ್ಟೋಬರ್ 8 ರ ಬೆಳಗಿನ ಅಧಿವೇಶನದಲ್ಲಿ ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಕರಡು ರಾಜಕೀಯ - ಸಂಘಟನಾ ನಿರ್ಣಯವನ್ನು ಮಹಾಧಿವೇಶನದ ಮುಂದಿಟ್ಟರು. ಈ ಸಂದರ್ಭದಲ್ಲಿ ಮಾತನಾಡುತ್ತಾ ಅವರು ಇದು ರಾಜಕೀಯ ನಿರ್ಣಯದಲ್ಲಿ ಹೇಳಿರುವುದರ ಇನ್ನಷ್ಟು ವಿವರವಾದ ವರದಿ ಎಂದರು.

ಈ ವರದಿ ಮೂರು ವಿಭಾಗಗಳಲ್ಲಿದೆ - ಅಂತರ್ರಾಷ್ಟ್ರೀಯ, ರಾಷ್ಟ್ರೀಯ ಮತ್ತು ಸಂಘಟನಾತ್ಮಕ ಭಾಗ-1 ರಲ್ಲಿನ ಅಂತರ್ರಾಷ್ಟ್ರೀಯ ಬೆಳವಣಿಗೆಗಳ ವರದಿ. ವಿಶ್ವ ಬಂಡವಾಳ ಶಾಹಿ ಬಿಕ್ಕಟ್ಟು ಹಾಗೂ ವಿಶ್ವಾದ್ಯಂತ ಕಾರ್ಮಿಕ ವರ್ಗದ ಹೋರಾಟಗಳಿಗೆ ಅಪಾರ ಅವಕಾಶಗಳು ತೆರೆದಿರುವುದನ್ನು ವಿವರಿಸಿದೆ. ಬಲಪಂಥೀಯ ಶಕ್ತಿಗಳ ಸೋಲು, ಅವುಗಳಲ್ಲಿ ಇತ್ತೀಚಿನದೆಂದರೆ ಜರ್ಮನಿಯಲ್ಲಿ, ಈ ಬಲಾಬಲ ವ್ಯತ್ಯಸ್ತಗೊಳ್ಳುತ್ತಿ ರುವುದರ ಸಂಕೇತ. ಜಪಾನ್, ಇಟಲಿ, ಫ್ರಾನ್ಸಿನಂತಹ ಮುಂದುವರೆದ ಬಂಡವಾಳಶಾಹಿ ದೇಶಗಳಲ್ಲಿ ಕಮ್ಯುನಿಸ್ಟರು ಸಾಧಿಸಿರುವ ಮುನ್ನಡೆಯನ್ನು ಈ ವರದಿ ಗಮನಿಸಿದೆ: "ಸಿಪಿಐ(ಎಂ) ಅಂತರ್ರಾಷ್ಟ್ರೀಯತೆಗೆ ಬದ್ಧವಾಗಿದೆ, ಈಗಿನ ಸಂದರ್ಭದಲ್ಲಿ ಇದರ ಅರ್ಥ ಐಎಂಎಫ್-ವಿಶ್ವಬ್ಯಾಂಕ್-ಡಬ್ಲ್ಯುಟಿಒ ಹರಿಯಬಿಟ್ಟ ಉದಾರೀಕರಣದ ಧಾಳಿಗಳ ವಿರುದ್ಧ ಒಂದು ಬಲಿಷ್ಟ ಸಾಮ್ರಾಜ್ಯಶಾಹಿ-ವಿರೋಧಿ ಹೋರಾಟವನ್ನು ಬೆಳಸಬೇಕು" ಎಂದು ಹೇಳುತ್ತಾ ಈ ಭಾಗ - 1 ಕೊನೆಗೊಳ್ಳುತ್ತದೆ.

ಈ ಭಾಗದ ಬಗ್ಗೆ ಮಾತನಾಡುತ್ತಾ ಸುರ್ಜಿತ್ ನಮ್ಮ ನೆರೆದೇಶಗಳಲ್ಲಿನ ಸನ್ನಿವೇಶದ ಬಗ್ಗೆ ಸ್ವಲ್ಪ ವಿವರವಾಗಿ ಮಾತನಾಡಿದರು. ಪಾಕಿಸ್ತಾನದಲ್ಲಿ ಸೇನಾಧಿಪತಿಯ ರಾಜೀನಾಮೆಯಿಂದ ಪರಿಸ್ಥಿತಿ ಇನ್ನಷ್ಟು ಹದಗೆಟ್ಟು ಅಲ್ಲಿ ಮುಂದೇನಾಗಬಹುದು ಎಂದು ಹೇಳಲು ಸಾಧ್ಯವಿಲ್ಲ ಎಂದರು. ಧರ್ಮ ಒಂದು ಬಹುದೇಶಿಯ ರಾಷ್ಟ್ರವನ್ನು ಒಂದಾಗಿಡಲು ಸಾಧ್ಯವಿಲ್ಲ ಎಂಬುದನ್ನು ಬಾಂಗ್ಲಾದೇಶದ ವಿಮೋಚನೆ ತೋರಿಸಿಕೊಟ್ಟಿತ್ತು. ಈಗ ಮತ್ತೆ ಬಲೂಚಿಸ್ತಾನ, ಸಿಂಧ್, ಪಾಖ್ತೂನಿನ ಮುಖಂಡರು ಪಂಜಾಬಿಗಳ ಪ್ರಾಬಲ್ಯದ ವಿರುದ್ಧ ದನಿಯೆತ್ತಿದ್ದಾರೆ. ಇಸ್ಲಾಮೀಕರಣದ ಘೋಷಣೆ ಆ ದೇಶವನ್ನು ಒಂದಾಗಿಡದು. ಅಫಘಾನಿಸ್ತಾನದಲ್ಲಿ ಅಮೆರಿಕನ್ ಮತ್ತು ಪಾಕಿಸ್ತಾನದ ನೆರವಿನಿಂದ ಬೆಳೆದಿರುವ ತಾಲೀಬಾನ್‌ನ ಅಟಾಟೋಪ. ಕಂಪೋಚಿಯಾದಲ್ಲಿ ವಿಶ್ವಸಂಸ್ಥೆಯೇ ಮಾನ್ಯ ಮಾಡಿದ ಚುನಾವಣೆಗಳನ್ನು ಮಾನ್ಯ ಮಾಡಲು ಜನ-ವಿರೋಧಿ ಶಕ್ತಿಗಳ ನಿರಾಕರಣೆ ಹಾಗೂ ಹುನ್‌ಸೇನ್ ಮೇಲೆ ಹಲ್ಲೆಯ ಪ್ರಯತ್ನದಿಂದ ಉಂಟಾಗಿರುವ ಸ್ಥಿತಿ, ಶ್ರೀಲಂಕಾದಲ್ಲಿ ಇನ್ನೂ ಶಾಂತಿ ನೆಲಸದಿರುವುದು, ಭೂತಾನಿನಲ್ಲಿ ನೇಪಾಳಿ ಭಾಷಿಕ ಜನಗಳನ್ನು ಹೊರದಬ್ಬುವ ಪ್ರಯತ್ನ, ಬರ್ಮಾದಲ್ಲಿ ಪ್ರಜಾಪ್ರಭುತ್ವಕ್ಕಾಗಿ ಹೋರಾಟ ಮುಂದುವರಿಯುತ್ತಿ ರುವುದು, ಪಶ್ಚಿಮ ಏಶ್ಯಾದಲ್ಲಿ ಒಸ್ಲೋ ಒಪ್ಪಂದದ ನಂತರದ ಸನ್ನಿವೇಶವನ್ನು ಸುರ್ಜಿತ್ ಪ್ರಸ್ತಾಪಿಸಿದರು.

ಎಡಪ್ರಜಾಸತ್ತಾತ್ಮಕ ಪರ್ಯಾಯ

ಭಾಗ-2 ರಲ್ಲಿ ಕಳೆದ ಮೂರುವರೆ ವರ್ಷಗಳ ತೀವ್ರ ರಾಜಕೀಯ ಚಟುವಟಿಕೆಗಳ ವಿಶ್ಲೇಷಣೆ ಮಾಡಿದೆ. ವಿಶ್ಲೇಷಣೆಗಾಗಿ ಇದನ್ನು ಮೂರು ಅವಧಿಗಳಾಗಿ ಮಾಡಲಾಗಿದೆ: ಮೇ 1996 ರವರೆಗೆ, ಮೇ 1996 ರಿಂದ ಫೆಬ್ರವರಿ 1998 ಹಾಗೂ ನಂತರ. ಪಕ್ಷ ಅನುಸರಿಸಿದ ಕಾರ್ಯತಂತ್ರಗಳು, ಅದರ ಅನುಭವಗಳನ್ನು ಇಲ್ಲಿ ಚರ್ಚಿಸಲಾಗಿದೆ. ಇದೊಂದು ಕ್ಲಿಷ್ಟ ಸನ್ನಿವೇಶ. ನಮ್ಮ ಯಾವುದೇ ಕಾರ್ಯತಂತ್ರ ಸಾಮೂಹಿಕ ಆಂದೋಲನಕ್ಕೆ ಹಾನಿ ತರದೆ ಅದನ್ನು ಮುಂದೊಯ್ಯುವಂತಿರಬೇಕು ಎಂದರು ಈ ಬಗ್ಗೆ ಮಾತನಾಡುತ್ತಾ ಸುರ್ಜಿತ್. ಪ್ರಸಕ್ತ ಕಾರ್ಯತಂತ್ರಗಳು ಎಡ ಮತ್ತು ಪ್ರಜಾಸತ್ತಾತ್ಮಕ ಪರ್ಯಾಯವನ್ನು ಕಟ್ಟುವ ನಮ್ಮ ಗುರಿಗೆ ಅನುಗುಣವಾಗಿ ಇರಬೇಕು ಎಂದು ಅವರು ಹೇಳಿದರು.

ಪಕ್ಷವೆಂಬ ಅಸ್ತ್ರ

ಮೂರನೇ ಭಾಗ ಪಕ್ಷದ ಸಂಘಟನಾ ವಿಷಯಗಳ ಬಗೆಗಿದ್ದು ಈ ವಿಷಯದಲ್ಲಿ ಮಾತನಾಡುತ್ತಾ ಪ್ರಧಾನ ಕಾರ್ಯದರ್ಶಿಗಳು ಇದು ಅತ್ಯಂತ ಮಹತ್ವದ ಸಂಗತಿ ಎಂದರು. ಏಕೆಂದರೆ ಸಂಘಟನೆಯೆಂಬ ಅಸ್ತ್ರವಿಲ್ಲದೆ ಎಲ್ಲವೂ ಕಾಗದದ ಮೇಲೆಯೇ ಉಳಿಯುತ್ತವೆ. 1917 ರ ಮಹಾನ್ ಅಕ್ಟೋಬರ್ ಕ್ರಾಂತಿಯ ಸ್ಫೂರ್ತಿಯಿಂದ ಹುಟ್ಟಿದ ನಮ್ಮ ಪಕ್ಷ ಅಪಾರ ಅನುಭವ ಗಳಿಸಿದೆ. ಜನತಾ ಪ್ರಜಾಪ್ರಭುತ್ವ ಕ್ರಾಂತಿಯತ್ತ ಸಾಗುವ ನಮ್ಮ ಈ ಅಸ್ತ್ರದ ಒಂದು ಸಕಾರಾತ್ಮಕ ಅಂಶವೆಂದರೆ ಸೋವಿಯತ್ ಒಕ್ಕೂಟದ ವಿಘಟನೆಯ ನಂತರ ವಿಶ್ವಾದ್ಯಂತ ಕಮ್ಯುನಿಸ್ಟ್ ಪಕ್ಷಗಳಲ್ಲಿ ಕಂಡ ಹತಾಶೆ ನಮ್ಮ ಬೆಳವಣಿಗೆಯನ್ನು ಕುಂಠಿತಗೊಳಿಸಲಿಲ್ಲ, ಜಡತ್ವ ತರಲಿಲ್ಲ, ಪರಿಸ್ಥಿತಿಯನ್ನು ಮೀರಿ ನಿಂತು ಮುಂದುವರಿದಿದ್ದೇವೆ. ಆದರೆ ನಮ್ಮಲ್ಲಿಯೂ ಕೆಲವು ಗಂಭೀರ ಕೊರತೆಗಳಿವೆ ಎಂದು ಸುರ್ಜಿತ್ ಪಕ್ಷದ ಸಂಘಟನೆಯಲ್ಲಿನ ದೌರ್ಬಲ್ಯಗಳ ಬಗ್ಗೆ ಮಾತನಾಡಿದರು. ಸಿದ್ಧಾಂತ ಮತ್ತು ಆಚರಣೆಯನ್ನು ಸಮಗ್ರಗೊಳಿಸುವುದು ಮಾರ್ಕ್ಸ್‌ವಾದ -ಲೆನಿನ್‌ವಾದದ ಸಾರಭೂತ ಅಂಶ. ಕಮ್ಯುನಿಸ್ಟ್ ನೀತಿ-ನಿಯಮಗಳನ್ನು ಎತ್ತಿಹಿಡಿಯಿರಿ, ಪಕ್ಷ ಕಟ್ಟಲು, ಜನತೆಗೆ ನಿಸ್ವಾರ್ಥ ಸೇವೆಯ ಧ್ಯೇಯ ಸಾಧನೆಗೆ ಬದ್ಧರಾಗಿರಿ ಎಂದು ಅವರು ಪ್ರತಿನಿಧಿಗಳಿಗೆ ಕರೆ ನೀಡಿದರು. ಸೋವಿಯತ್ ಒಕ್ಕೂಟದ ಪತನದಿಂದ ಪಾಠ ಕಲಿಯಬೇಕಾಗಿದೆ. ಪ್ರಸ್ತುತ ಸನ್ನಿವೇಶದಲ್ಲಿ ಅಭೂತಪೂರ್ವ ಉದಾರೀಕರಣದ ಧಾಳಿ, ಕೊಳ್ಳುಬಾಕತನ, ಬೂರ್ಜ್ವಾ ವೈಯಕ್ತಿಕತೆ ಮತ್ತು ಭ್ರಷ್ಟ ನಡವಳಿಕೆಗಳನ್ನು ಪ್ರೋತ್ಸಾಹಿಸುತ್ತಿರು ವಾಗ ಪಕ್ಷ ನಮ್ಮ ಸದಸ್ಯರ ಪ್ರಜ್ಞೆ ಮತ್ತು ಬದ್ಧತೆ ಹ್ರಾಸಗೊಳ್ಳದಂತೆ ಎಚ್ಚರಿಕೆ ವಹಿಸಬೇಕು. ಇದಕ್ಕಾಗಿ ಪಕ್ಷದ ಸದಸ್ಯರನ್ನು ಸೈದ್ಧಾಂತಿಕವಾಗಿ ಸಜ್ಜುಗೊಳಿಸಬೇಕು, ಪ್ರತಿಯೊಬ್ಬ ಸದಸ್ಯನೂ ಸಾಮೂಹಿಕ ಸಂಘಟನೆಗಳಲ್ಲಿ ಸಕ್ರಿಯವಾಗಿ ಕೆಲಸ ಮಾಡಬೇಕು - ಈ ಸಂದರ್ಭಗಳಲ್ಲಿ ಅವರು ಪಕ್ಷ ಕೈಗೆತ್ತಿಕೊಂಡ ಸರಿಪಡಿಕೆ ಚಳುವಳಿ ಬಗ್ಗೆ ಪ್ರಸ್ತಾಪಿಸಿದರು. ಅನ್ಯವರ್ಗ ಪ್ರವೃತ್ತಿಗಳು ಮತ್ತು ಮೌಲ್ಯಗಳ ವಿರುದ್ಧ ಮೇಲಿಂದ ಕೆಳಗಿನವರೆಗೆ ಹೋರಾಟ ಸತತವಾಗಿ ನಡೆಯಬೇಕು ಎಂದರು. ಪಕ್ಷದ ಕಾರ್ಯಕ್ರಮವನ್ನು ಸಮಯಬದ್ಧ ಗೊಳಿಸುವ ಕೆಲಸದ ಬಗ್ಗೆ ಮಹಾಧಿವೇಶನ ಒಂದು ಸಮಯ ಚೌಕಟ್ಟು ಹಾಗೂ ವ್ಯವಸ್ಥೆಯನ್ನು ನಿರ್ಧರಿಸಬೇಕು ಎಂದು ಅವರು ಹೇಳಿದರು.

"ಸವಾಲುಗಳನ್ನು ಎದುರಿಸಲು ಪಕ್ಷ ಸರ್ವಸಜ್ಜಿತಗೊಳ್ಳಬೇಕು"



8 ಗಂಟೆಗಳ ಚರ್ಚೆ

ರಾಜಕೀಯ - ಸಂಘಟನಾ ವರದಿಯ ಮೇಲೆ ಸುಮಾರು 8 ಗಂಟೆಗಳು ನಡೆದ ಚರ್ಚೆಯಲ್ಲಿ 40 ಪ್ರತಿನಿಧಿಗಳು ಭಾಗವಹಿಸಿದರು. ಕರ್ನಾಟಕದ ಪರವಾಗಿ ಬಿ.ಮಾಧವರವರು ಮಾತನಾಡಿದರು. ತಂತಮ್ಮ ರಾಜ್ಯಗಳಲ್ಲಿನ ಸಂಘಟನಾ ವಿಷಯಗಳನ್ನು ಯೋಜನೆಗಳನ್ನು ಮಹಾಧಿವೇಶನದ ಮುಂದಿಟ್ಟರು. ಸರಿಪಡಿಕೆ ಚಳುವಳಿಯನ್ನು ತಂತಮ್ಮ ರಾಜ್ಯಗಳಲ್ಲಿ ಹೇಗೆ ನಡೆಸಲಾಗುತ್ತಿದೆ, ಕಂಡು ಬಂದ ನ್ಯೂನತೆಗಳೇನು ಎಂಬುದನ್ನು ವಿವರಿಸಿದರು. ಪಕ್ಷದಲ್ಲಿ ಅಲ್ಲಲ್ಲಿ ಕಾಣಬರುತ್ತಿರುವ ಪಾರ್ಲಿಮೆಂಟರಿಸಂ ಬಗ್ಗೆ ಖಾರವಾಗಿ ಮಾತನಾಡಿದರು. ಕೆಲವರು ಸಂಯುಕ್ತ ರಂಗದ ರಚನೆ ನಿರ್ವಹಣೆಯ ಸಮಯದಲ್ಲಿ ಪಕ್ಷ ಚುನಾವಣಾ ಕಸರತ್ತುಗಳಿಗೇ ಹೆಚ್ಚಿನ ಒತ್ತು ನೀಡಿ ಹೋರಾಟಗಳು ಹಿಂದಕ್ಕೆ ಸರಿದವು, ಕೇಂದ್ರ ಸಮಿತಿ ಮತ್ತು ಪೊಲಿಟ್‌ಬ್ಯೂರೋ ಸಾಮೂಹಿಕ ಸಂಘಟನೆಗಳ ಕೇಂದ್ರಗಳ ದಕ್ಷ ನಿರ್ವಹಣೆಯತ್ತ ಸಾಕಷ್ಟು ಗಮನ ಹರಿಸಲಿಲ್ಲ ಎಂದೂ ಕೆಲವರು ಟೀಕಿಸಿದರು. ಸರಿಪಡಿಕೆ ಕಾರ್ಯಕ್ರಮದ ಬಗ್ಗೆ ಮಾತನಾಡುತ್ತಾ ಗಂಗೆಯನ್ನು ಗಂಗೋತ್ರಿಯಿಂದಲೇ ಶುದ್ಧಗೊಳಿಸಬೇಕು ಎಂದು ಒಬ್ಬರು ಟಿಪ್ಪಣಿ ಮಾಡಿದರು. 1992 ರಲ್ಲಿ ಮದ್ರಾಸ್ ಅಧಿವೇಶನದಲ್ಲಿ ಆರಂಭಿಸಿದ ಸೈದ್ಧಾಂತಿಕ ವಿಷಯಗಳ ಚರ್ಚೆಯನ್ನು ಮುಂದುವರೆಸಿಲ್ಲ ಎಂದು ಕೆಲವರು ಆಕ್ಷೇಪಿಸಿದರೆ, ಪಕ್ಷದ ಕಾರ್ಯಕ್ರಮವನ್ನು ಸಮಯಬದ್ಧಗೊಳಿಸುವ ಕೆಲಸ ಆರು ವರ್ಷಗಳಾದರೂ ಪೂರೈಸದ ಬಗ್ಗೆ ಹಲವರು ತೀವ್ರ ಖೇದ ವ್ಯಕ್ತಪಡಿಸಿದರು. ಇದರಲ್ಲಿ ಇನ್ನೂ ವಿಳಂಬ ಸಲ್ಲದು ಎಂದರು. ಪಕ್ಷದ ಬೆಳವಣಿಗೆಯಾಗಿದೆ, ಆದರೆ ಈಗಲೂ ಅದು ಮೂರು-ನಾಲ್ಕು ರಾಜ್ಯಗಳಿಗೇ ಸೀಮಿತವಾಗಿದೆ. ಹಿಂದೀ ಭಾಷಿಕ ಪ್ರದೇಶಗಳಲ್ಲಿ ಗಮನಾರ್ಹ ಮುನ್ನಡೆಯಾಗಿಲ್ಲ ಎಂದು ಪ್ರತಿನಿಧಿಗಳು ಆತಂಕ ವ್ಯಕ್ತಪಡಿಸಿದರು. ಸಾಲ್ಕಿಯಾಪ್ಲೀನಂ ನ ನಿರ್ಣಯಗಳ ಜಾರಿಯ ಅವಲೋಕನ ಮಾಡಬೇಕಾಗಿದೆ ಎಂದು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದರು. ಪಕ್ಷದ ಸೈದ್ಧಾಂತಿಕ ಪ್ರಚಾರ, ಸಾಹಿತ್ಯಗಳ, ಪತ್ರಿಕೆಗಳ ಪ್ರಚಾರದ ಬಗ್ಗೆಯೂ ಹಲವು ಟೀಕೆಗಳು, ಸಲಹೆಗಳು ಬಂದವು. ಪಕ್ಷದ ಕೇಂದ್ರ ಪತ್ರಿಕೆಗಳನ್ನು ಸುಧಾರಿಸಿ ಅವುಗಳ ಪ್ರಸಾರವನ್ನು ಹೆಚ್ಚಿಸಬೇಕು, ಐ.ಎನ್.ಎನ್. ಸುದ್ದಿ ಸಂಸ್ಥೆಯನ್ನು ಬಲಪಡಿಸಬೇಕು, ಹಿಂದಿ ಪ್ರದೇಶಗಳಿಗೆ ಒಂದು ಪ್ರತ್ಯೇಕ ಪತ್ರಿಕೆ ತರಬೇಕು, ಕೇಂದ್ರದಿಂದ ಒಂದು ಇಂಗ್ಲೀಷ್ ದೈನಿಕ ತರಬೇಕು, 'ಮಾರ್ಕ್ಸಿಸ್ಟ್' ಸೈದ್ಧಾಂತಿಕ ಪತ್ರಿಕೆಯನ್ನು ನಿಯಮಿತವಾಗಿ ಹೊರತರಬೇಕು ಎಂಬಿತ್ಯಾದಿ ಸಲಹೆಗಳು ಬಂದವು. ನಮ್ಮ ಸೈದ್ಧಾಂತಿಕ ತರಬೇತಿಯಲ್ಲಿ ಯುರೋಪಿನ ಉದಾಹರಣೆಗಳೇ ಇರುತ್ತವೆ, ನಮ್ಮ ದೇಶದ ಉದಾಹರಣೆಗಳ ಮೂಲಕವೂ ತಿಳಿಸುವ ಪ್ರಯತ್ನ ನಡೆಯಬೇಕು ಎಂದರು ಕೆಲವರು.

ಈ ಹಿಂದೆ ನಿರ್ಧರಿಸಿದಂತೆ ಮೇ 1996 ರಲ್ಲಿ ಸಂಯುಕ್ತ ರಂಗದಲ್ಲಿ ಭಾಗವಹಿಸದಿರುವ ಕುರಿತ ಕೇಂದ್ರ ಸಮಿತಿಯ ನಿರ್ಣಯದ ಬಗ್ಗೆ ಪ್ರತ್ಯೇಕ ಚರ್ಚೆ ನಡೆಯಿತು. (ಬಾಕ್ಸ್ ನೋಡಿ)

ಸರ್ವಾನುಮತದ ಅಂಗೀಕಾರ

ನಂತರ ಪ್ರಧಾನ ಕಾರ್ಯದರ್ಶಿಗಳು ಚರ್ಚೆಗೆ ಉತ್ತರ ನೀಡುತ್ತಾ ಪಕ್ಷದ ಮುಂದಿರುವ ಕರ್ತವ್ಯಗಳನ್ನು ಮತ್ತೆ ನೆನಪಿಸಿದರು. ಸಮಾಜವಾದಿ ದೇಶಗಳಲ್ಲಿ ಸೋವಿಯತ್ ಒಕ್ಕೂಟ ಇಲ್ಲದ ಹೊಸ ಸನ್ನಿವೇಶಗಳನ್ನು ಎದುರಿಸಲು ಹೊಸ ವಿಧಾನಗಳನ್ನು ಬಳಸುತ್ತಿದ್ದಾರೆ. ಅವರ ಪ್ರಯತ್ನಗಳನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಬೇಕು, ಸೈದ್ಧಾಂತಿಕ ಪ್ರಶ್ನೆಗಳ ಅಧ್ಯಯನದಲ್ಲಿನ ವಿಳಂಬವನ್ನು ಹೋಗಲಾಡಿಸಬೇಕು ಎಂದು ಸುರ್ಜಿತ್ ಹೇಳಿದರು. ಪಕ್ಷದ ಸಂಘಟನೆಯ ಬಗ್ಗೆ ಹೇಳುತ್ತಾ ಗುಂಪುಗಾರಿಕೆಯನ್ನು ಯಾವ ರೀತಿಯಲ್ಲೂ ಸಹಿಸಲು ಸಾಧ್ಯವಿಲ್ಲ ಎಂದರು. ಈ ಬಗ್ಗೆ ಪಕ್ಷ ಸಾಕಷ್ಟು ಕ್ರಮಗಳನ್ನು ಕೈಗೊಂಡಿದೆ ಎಂದರು. ಪ್ರಜಾಸತ್ತಾತ್ಮಕ ಕೇಂದ್ರವಾದ ಎಂಬ ನೀತಿ ಕೇವಲ ಹೆಸರಿಗಲ್ಲ ಅದು ಪಕ್ಷದ ಸಂಘಟನೆಯ ಜೀವಾಳ ಎಂದು ಸುರ್ಜಿತ್ ಸ್ಪಷ್ಟ ಪಡಿಸಿದರು.

ಪಕ್ಷದ ಕಾರ್ಯಕ್ರಮವನ್ನು ಸಮಯಬದ್ಧಗೊಳಿಸುವ ಕೆಲಸವನ್ನು ನೆರವೇರಿಸುವಲ್ಲಿ ವಿಫಲರಾಗಿದ್ದೇವೆ ಎಂದು ಒಪ್ಪಿಕೊಂಡ ಅವರು ಮುಂದಿನ ವರ್ಷದ ಅಂತ್ಯದೊಳಗೆ ಈ ಕೆಲಸ ಪೂರ್ಣಗೊಳ್ಳುತ್ತದೆ ಎಂದು ಭರವಸೆ ನೀಡಿದರು. ಒಂದು ಕರಡು ಈಗಾಗಲೇ ಸಿದ್ಧವಾಗಿದ್ದು ಪೊಲಿಟ್‌ಬ್ಯೂರೋ ಮತ್ತು ಕೇಂದ್ರ ಸಮಿತಿ ಅದನ್ನು ಚರ್ಚಿಸಿದ ನಂತರ ಇಡೀ ಪಕ್ಷದಲ್ಲಿ ಚರ್ಚೆಗೆ ಅದನ್ನು ಬಿಡುಗಡೆ ಮಾಡಲಾಗುವುದು. ನಂತರ ಒಂದು ವಿಶೇಷ ಸಮ್ಮೇಳನ ಅಥವಾ ಪ್ಲೀನಂ ನಡೆಸಿ ಇದನ್ನು ಕೂಲಂಕುಷವಾಗಿ ಚರ್ಚಿಸಿ ಅಂಗೀಕರಿಸಲಾಗುವುದು. ಇದರ ವಿಧಿ-ವಿಧಾನಗಳ ಬಗ್ಗೆ ಹೊಸ ಕೇಂದ್ರ ಸಮಿತಿ ನಿರ್ಧರಿಸುವುದು ಎಂದರು. ಸರಿಪಡಿಕೆ ಚಳುವಳಿ ಮುಂದುವರಿಯುವುದು ಎಂದೂ ಸುರ್ಜಿತ್ ಹೇಳಿದರು.

ಈ ರಾಜಕೀಯ - ಸಂಘಟನಾ ವರದಿಗೆ 108 ತಿದ್ದುಪಡಿಗಳು ಪ್ರತಿನಿಧಿಗಳಿಂದ ಬಂದಿದ್ದು ಇವುಗಳಲ್ಲಿ ಸುಮಾರು 25 ತಿದ್ದುಪಡಿಗಳ ಆಶಯಗಳನ್ನು, ವಿಚಾರಗಳನ್ನು ವರದಿಯಲ್ಲಿ ಸೇರಿಸುವ ಬಗ್ಗೆ ಪರಿಶೀಲಿಸಲಾಗುವುದು ಎಂದು ಪ್ರಕಾಶ್ ಕಾರಟ್‌ರವರು ತಿದ್ದುಪಡಿಗಳ ಬಗ್ಗೆ ವಿವರಿಸುತ್ತಾ ತಿಳಿಸಿದರು.

ಚರ್ಚೆಯ ಕೊನೆಯಲ್ಲಿ ರಾಜಕೀಯ-ಸಂಘಟನಾ ವರದಿಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಮೇ 1996 ರಲ್ಲಿ ಸಂಯುಕ್ತರಂಗ ಸರ್ಕಾರದಲ್ಲಿ ಪಾಲ್ಗೊಳ್ಳದಿರುವ ಕೇಂದ್ರ ಸಮಿತಿಯ ನಿರ್ಧಾರ ಸರಿ

ಮಹಾಧಿವೇಶನದ ಬಹುಮತದ ನಿರ್ಧಾರ

ಕರಡು ರಾಜಕೀಯ ನಿರ್ಣಯದ ಬಗ್ಗೆ ಮಹಾಧಿವೇಶನದ ಮೊದಲು ನಡೆದ ದೇಶವ್ಯಾಪಿ ಚರ್ಚೆಗಳಲ್ಲಿ ಮೇ 1996 ರಲ್ಲಿ ಸಂಯುಕ್ತ ರಂಗ ಸರಕಾರ ಸೇರದಿರುವ ಕುರಿತಾದ ನಿರ್ಣಯದ ಬಗ್ಗೆ ಬಹಳಷ್ಟು ಟೀಕೆ-ಟಿಪ್ಪಣಿಗಳು ಬಂದವು. ಈ ಬಗ್ಗೆ ರಾಜಕೀಯ-ಸಂಘಟನಾ ವರದಿಯ ಭಾಗ-2 ರಲ್ಲಿ ವಿವರ ನೀಡಿದ್ದು ಇದನ್ನು ಕುರಿತಂತೆ ಪ್ರತ್ಯೇಕವಾಗಿ ಚರ್ಚಿಸಲು ಒಂದು ಅಧಿವೇಶನವನ್ನು ನಿಗದಿಪಡಿಸಲಾಯಿತು. ಅಕ್ಟೋಬರ್ 10 ರ ಬೆಳಗಿನ ಅಧಿವೇಶನವನ್ನು ಇದಕ್ಕಾಗಿ ಮೀಸಲಿಡಲಾಗಿತ್ತು.

ಮೇ 1996 ರಲ್ಲಿ ಸಂಯುಕ್ತ ರಂಗ ಜ್ಯೋತಿಬಸುರವರನ್ನು ಪ್ರಧಾನ ಮಂತ್ರಿ ಸ್ಥಾನ ವಹಿಸಿಕೊಳ್ಳಲು ಕೇಳಿದಾಗ ಈ ಬಗ್ಗೆ ಚರ್ಚಿಸಿದ ಕೇಂದ್ರ ಸಮಿತಿ ಈ ಆಹ್ವಾನವನ್ನು ಒಪ್ಪಿಕೊಳ್ಳಬಾರದು ಎಂದು ನಿರ್ಧರಿಸಿತು. ಇದನ್ನು ಮರು ಪರಿಶೀಲಿಸಬೇಕು ಎಂದು ಸಂಯುಕ್ತ ರಂಗದ ಮುಖಂಡರು ಹೇಳಿದ ಮೇಲೆ ಮತ್ತೆ ಈ ಬಗ್ಗೆ ಚರ್ಚಿಸಿದ ಕೇಂದ್ರ ಸಮಿತಿ ಮತ್ತೆ ತನ್ನ ನಿರ್ಧಾರವನ್ನು ಬಹುಮತದಿಂದ ಪುನರುಚ್ಚರಿಸಿತು. ಈ ಬಗ್ಗೆ ನಂತರ ಪಕ್ಷದ ಒಳಗೆ ಹಾಗೂ ಹೊರಗೂ ಬಹಳಷ್ಟು ಚರ್ಚೆಗಳು ನಡೆದಿವೆ. ಪಕ್ಷ ಈ ಆಹ್ವಾನವನ್ನು ಸ್ವೀಕರಿಸಿ ಸವಾಲುಗಳನ್ನು ಎದುರಿಸಿ ದೇಶದ ಎಡ ಮತ್ತು ಪ್ರಜಾಪ್ರಭುತ್ವ ಆಂದೋಲನದ ತ್ವರಿತ ಮುನ್ನಡೆಗೆ ನೆರವಾಗಬಹುದಿತ್ತು ಎಂದು ಕೆಲವರು ಅಭಿಪ್ರಾಯ ಪಟ್ಟರೆ ಇನ್ನೂ ಕೆಲವರು ಪಕ್ಷ ಈ ಬಗ್ಗೆ ನೀತಿಬದ್ಧವಾಗಿಯೆ ನಡೆದುಕೊಂಡಿದೆ ಎಂದು ಅಭಿಪ್ರಾಯ ಪಟ್ಟರು. ಈ ಎಲ್ಲಾ ಅಂಶಗಳನ್ನು ಈ ಅಧಿವೇಶನದಲ್ಲಿ ಕೂಲಂಕುಶವಾಗಿ ಚರ್ಚಿಸಲಾಯಿತು. ಒಟ್ಟು 30 ಮಂದಿ ಈ ಚರ್ಚೆಯಲ್ಲಿ ಭಾಗವಹಿಸಿದರು. ಕರ್ನಾಟಕದಿಂದ ಜಿ.ಎನ್.ನಾಗರಾಜ್‌ರವರು ಮಾತನಾಡಿದರು. ಕೊನೆಗೆ "ಪಕ್ಷದ ಮಹಾಧಿವೇಶನ ಮೇ 1996 ರಲ್ಲಿ ಸರಕಾರದಲ್ಲಿ ಭಾಗವಹಿಸದಿರುವ ಕೇಂದ್ರ ಸಮಿತಿಯ ನಿರ್ಧಾರವನ್ನು ಅನುಮೋದಿಸುತ್ತದೆ" ಎಂಬ ಬಹುಮತದ ನಿರ್ಣಯಕ್ಕೆ ಬಂತು. ಈ ನಿರ್ಣಯವನ್ನು ರಾಜಕೀಯ-ಸಂಘಟನಾ ವರದಿಯ ಭಾಗ-2 ರಲ್ಲಿ ಸೇರಿಸಲಾಗುವುದು.

ಬೆಲೆಯೇರಿಕೆಯ ವಿರುದ್ಧ ಸರ್ವಶಕ್ತಿಯನ್ನು ಬಳಸಿ ಹೋರಾಡಬೇಕು

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಹದಿನಾರನೇ ಮಹಾಧಿವೇಶನ ಕಳೆದ ತಿಂಗಳಲ್ಲಿ ವಿಶೇಷವಾಗಿ ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ನಂತರ ಜನ ಹೌಹಾರುವಂತೆ ಮಾಡಿರುವ ಬೆಲೆಯೇರಿಕೆಯನ್ನು ಗಂಭೀರವಾಗಿ ಗಮನಿಸುತ್ತದೆ ಹಾಗೂ ಖಂಡಿಸುತ್ತದೆ. ಒಂದು ವರ್ಷದ ಹಿಂದೆ 1997 ರಲ್ಲಿ ಹಣದುಬ್ಬರದ ದರ ಸುಮಾರು 3.4% ಇತ್ತು. ಮಾರ್ಚ್ 1994 ರಲ್ಲೂ ಅದು 5% ಕ್ಕಿಂತ ಹೆಚ್ಚಿರಲಿಲ್ಲ. ಆದರೆ ಈಗ ಆರೇಳು ತಿಂಗಳಲ್ಲೇ ಅದು 8.7% ವನ್ನು ದಾಟಿ ಎರಡಂಕಿಯತ್ತ ತ್ವರಿತವಾಗಿ ಸಾಗಿದೆ. ಹಣದುಬ್ಬರ ಜನಸಾಮಾನ್ಯರ ಕೊಳ್ಳುವ ಶಕ್ತಿಯನ್ನು ಗಂಭೀರವಾಗಿ ಇಳಿಸಿದೆ. ಆಹಾರಧಾನ್ಯಗಳು, ಅಡುಗೆ ಎಣ್ಣೆಗಳು, ಆಲೂಗಡ್ಡೆ, ಈರುಳ್ಳಿ, ಖಂಡಸಾರಿ(ಸಕ್ಕರೆ), ಬೆಲ್ಲ, ಚಹಾ, ಮಸಾಲೆ ಸಾಮಾನುಗಳು, ಅಡಿಗೆ ಇಂಧನ ಇತ್ಯಾದಿಗಳಲ್ಲಂತೂ ಬೃಹತ್ ಬೆಲೆಯೇರಿಕೆಯಾಗಿದೆ. ಸಕ್ಕರೆಯ ಲೈಸೆನ್ಸ್ ರದ್ಧತಿಯಿಂದ ಸಕ್ಕರೆ ಬೆಲೆಗಳೂ ಗಗನಕ್ಕೇರುವ ಸಾಧ್ಯತೆಗಳೆಲ್ಲಾ ಇವೆ.

ಸತತವಾಗಿ ಹನ್ನೊಂದು ವರ್ಷ ಒಳ್ಳೆಯ ಮಳೆಯಾಗಿದೆ. ಇದೊಂದು ಗಮನಾರ್ಹ ದಾಖಲೆ. ಇನ್ನು ಮುಂದೆ ಹೀಗಾಗಲಿಕ್ಕಿಲ್ಲ. ಆದರೂ ಕೃಷಿ ಉತ್ಪಾದನೆ 1991 ರಿಂದ ಇಳಿಮುಖವಾಗಿದೆ, ಆಹಾರ ಉತ್ಪಾದನೆಯ ಹೆಚ್ಚಳದ ದರ ಜನಸಂಖ್ಯಾ ಹೆಚ್ಚಳದ ದರಕ್ಕೆ ಅನುಗುಣವಾಗಿಲ್ಲ. ಹೀಗೆ ತಲಾ ಆಹಾರ ಧಾನ್ಯ ಪೂರೈಕೆ ತೀವ್ರವಾಗಿ ಇಳಿದಿದೆ. ಇದಕ್ಕೆ ಕಾರಣ ಕೃಷಿಯ ಮೂಲ ರಚನೆಯಲ್ಲಿ ಸಾರ್ವಜನಿಕ ಮತ್ತು ಖಾಸಗಿ ಹೂಡಿಕೆಯಲ್ಲಿ ಇಳಿಕೆ ಹಾಗೂ ಸಬ್ಸಿಡಿಗಳ ರದ್ಧತಿ. ಕಳೆದ ವರ್ಷ ಆಹಾರಧಾನ್ಯಗಳ ಉತ್ಪಾದನೆ 19.9 ಕೋಟಿ ಟನ್ನುಗಳಿಂದ 109.2 ಕೋಟಿ ಟನ್ನುಗಳಷ್ಟು ಸುಮಾರು 70 ಲಕ್ಷ ಟನ್‌ಗಳ ತೀವ್ರ ಇಳಿತ ಕಂಡಿದೆ. ಇದರಿಂದಾಗಿ ಅವಶ್ಯಕ ಸರಕುಗಳ ಬೆಲೆಗಳ ಮೇಲೆ ಒತ್ತಡವನ್ನು ಹೆಚ್ಚಿಸಿದೆ.

ಇಂತಹ ಬೆಚ್ಚಿಬೀಳಿಸುವ ಬೆಲೆ ಏರಿಕೆ ಇದ್ದರೂ ಕೇಂದ್ರ ಸರಕಾರದ ಕಡೆಯಿಂದ ಸುಮಾರಾಗಿ ಯಾವುದೇ ಕ್ರಮವಿಲ್ಲ, ಮಧ್ಯ ಪ್ರವೇಶವಿಲ್ಲ. ಅದು ಐ.ಎಂ.ಎಫ್.-ವಿಶ್ವಬ್ಯಾಂಕ್ ಸೂಚನೆಗಳಂತೆ ಮಾರು ಕಟ್ಟೆ ಜಾಗದಲ್ಲಿ ಬೇಡಿಕೆ ಮತ್ತು ಪೂರೈಕೆಯ ಶಕ್ತಿಗಳ ಮುಕ್ತ ಸಂಪರ್ಕದಿಂದ ಬೆಲೆಗಳು ತಾವಾಗಿಯೇ ತಮ್ಮ ಮಟ್ಟ ಪಡೆಯಲು ಬಿಡಬೇಕು ಎನ್ನುತ್ತಿದೆ. ಕೃಷಿ ಬೆಲೆಗಳು ಹೆಚ್ಚಾದರೂ ಅದರ ಫಲ ರೈತರಿಗೆ ಸಿಗುತ್ತಿಲ್ಲ. ಅವರಲ್ಲಿ ಹೆಚ್ಚಿನವರು ಕಟಾವು ನಡೆದ ಕೂಡಲೇ ಅತಿ ಕಮ್ಮಿ ಬೆಲೆಗಳಲ್ಲಿ ತಮ್ಮ ಉತ್ಪನ್ನಗಳನ್ನು ಮಾರಬೇಕಾಗಿ ಬರುತ್ತದೆ. ಈ ನಡುವೆ ಕಳ್ಳ ದಾಸ್ತಾನುಗಾರರು ಹಾಗೂ ವ್ಯಾಪಾರಸ್ಥರು ವಿವಿಧ ಸೀಸನ್‌ಗಳ ನಡುವಿನ ಬೆಲೆ ವ್ಯತ್ಯಾಸದ ಹಾಗೂ ಅತ್ಯಂತ ಕೆಳಗಿನ ಹಂತಗಳಲ್ಲಿ ಕೃಷಿ ಉತ್ಪಾದಕರಿಗೆ ಮೂಲಭೂತ ಬೆಂಬಲದ ಅಭಾವದ ಪೂರ್ಣ ಪ್ರಯೋಜನ ಪಡೆಯುತ್ತಿದ್ದಾರೆ.

ನಮ್ಮ ಪಕ್ಷ ಹಾಗೂ ಇತರ ಎಡ ಪಕ್ಷಗಳು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಬೇಕು ಎಂದು ಒತ್ತಾಯಿಸುತ್ತಿದ್ದರೂ ಕೇಂದ್ರದ ಬಿಜೆಪಿ ಸರಕಾರ ಅದನ್ನು ಕಳಚಿಹಾಕಲು ವ್ಯವಸ್ಥಿತ ಪ್ರಯತ್ನ ನಡೆಸಿದೆ.

ಸಿಪಿಐ(ಎಂ) ಹದಿನಾರನೇ ಮಹಾಧಿವೇಶನ ಜನಸಮೂಹಗಳ, ಮುಖ್ಯವಾಗಿ ಕಾರ್ಮಿಕರ, ರೈತರ ಹಾಗೂ ಸಂಬಳಗಾರರ ಸಂಕಟಗಳ ಬಗ್ಗೆ ಕೇಂದ್ರ ಸರ್ಕಾರ ಅತ್ಯಂತ ನಿರ್ಲಕ್ಷ್ಯದ ಹಾಗೂ ಬೇಜವಾಬ್ದಾರಿಯ ನಿಲುವು ತಳೆದಿರುವುದನ್ನು ಬಲವಾಗಿ ಖಂಡಿಸುತ್ತದೆ. ಈ ಜನಗಳು ಏರು ಬೆಲೆಗಳ ಧಾಳಿಗಳಿಂದ ತಮ್ಮ ಅಲ್ಪ ಕೊಳ್ಳುವ ಶಕ್ತಿಯನ್ನು ಉಳಿಸಿಕೊಳ್ಳಲು ಹೆಣಗುತ್ತಿದ್ದಾರೆ. ಆದ್ದರಿಂದ 14 ಜೀವನಾವಶ್ಯಕ ಸರಕುಗಳನ್ನು ನ್ಯಾಯ ಹಾಗೂ ತರ್ಕಬದ್ಧ ಬೆಲೆಗಳಲ್ಲಿ ಜನಸಾಮಾನ್ಯರಿಗೆ ಹಂಚಬೇಕು ಎಂದು ಮಹಾಧಿವೇಶನ ಒತ್ತಾಯಿಸುತ್ತದೆ. ತಮ್ಮ ಜೀವನ ಮಟ್ಟದ ಮೇಲಿನ ಈ ಭಯಾನಕ ಹಾಗೂ ನಿರಂತರ ಧಾಳಿಯನ್ನು ಎದುರಿಸಿ ನಿಲ್ಲಬೇಕು, ಕೇಂದ್ರ ಸರ್ಕಾರ ಜಾರಿ ಮಾಡುತ್ತಿರುವ ಜನ-ವಿರೋಧಿ ಆರ್ಥಿಕ ನೀತಿಗಳ ವಿರುದ್ಧ ತಮ್ಮೆಲ್ಲಾ ಶಕ್ತಿ ಬಳಸಿ ಅವರು ಎಲ್ಲಿಯೇ ಇರಲಿ, ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ, ಠಾಣಾಗಳಲ್ಲಿ, ತಹಶೀಲುಗಳಲ್ಲಿ, ಜಿಲ್ಲೆಗಳಲ್ಲಿ, ರಾಜ್ಯಗಳ ರಾಜಧಾನಿಗಳಲ್ಲಿ ತಮ್ಮದೇ ವರ್ಗ ಹಾಗೂ ಸಾಮೂಹಿಕ ಸಂಘಟನೆಗಳ ಮೂಲಕ ದೇಶಾದ್ಯಂತ ಹೋರಾಟಕ್ಕಿಳಿಯಬೇಕು ಎಂದು ಮಹಾಧಿವೇಶನ ಆಗ್ರಹಪಡಿಸುತ್ತದೆ.



ಸಿಪಿಐ(ಎಂ)ನ ಹದಿನಾರನೇ ಮಹಾಧಿವೇಶನ ರಾಜಕೀಯ ನಿರ್ಣಯ ಮತ್ತು ರಾಜಕೀಯ ಸಂಘಟನಾ ವರದಿಯನ್ನು ಕೂಲಂಕುಷವಾಗಿ ಚರ್ಚಿಸಿದ್ದು ಮಾತ್ರವೇ ಅಲ್ಲದೇ ತಕ್ಷಣದ ನಾಲ್ಕು ಪ್ರಶ್ನೆಗಳ ಬಗ್ಗೆ ಪ್ರತ್ಯೇಕ ನಿರ್ಣಯಗಳನ್ನು ಅಂಗೀಕರಿಸಿತು. ಆ ನಿರ್ಣಯಗಳ ಪೂರ್ಣಪಾಠವನ್ನು ಇಲ್ಲಿ ಕೊಡಲಾಗಿದೆ.

ಡಿಸೆಂಬರ್ 11, 1998 : ಶ್ರಮಜೀವಿ ಜನಕೋಟಿಯ ಕಾರ್ಯಾಚರಣೆಗೆ ಬೆಂಬಲ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಹದಿನಾರನೇ ಮಹಾಧಿವೇಶನ ರಾಷ್ಟ್ರೀಯ ಆರ್ಥಿಕ ಅಭಿವೃದ್ಧಿ ಮತ್ತು ಶ್ರಮಜೀವಿಗಳ ಜೀವನ ಮಟ್ಟವನ್ನು ಬಲವಾಗಿ ತಟ್ಟಿರುವ ಬಿಜೆಪಿ ಸರಕಾರದ ಆರ್ಥಿಕ ಧೋರಣೆಗಳ ವಿರುದ್ಧ ಒಂದು ರಾಷ್ಟ್ರವ್ಯಾಪಿ ಪ್ರಚಾರ-ಪ್ರಕ್ಷೋಭೆ ಹಾಗೂ ಮುಷ್ಕರ ಸಂಘಟಿಸುವ ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆಯ ಅಖಿಲ ಭಾರತ ಸಮಾವೇಶದ ನಿರ್ಣಯವನ್ನು ಸ್ವಾಗತಿಸುತ್ತದೆ.

ಬಿ.ಜೆ.ಪಿ. ಸರಕಾರ ವಿಶ್ವಬ್ಯಾಂಕ್ ಮತ್ತು ಐ.ಎಂ.ಎಫ್.ನ ಸಂರಚನಾ ಹೊಂದಾಣಿಕೆ ಕಾರ್ಯಕ್ರಮಗಳನ್ನು ಇನ್ನಷ್ಟು ಭರದಿಂದ ಜ್ಯಾರಿಮಾಡುತ್ತಿದೆ. ಬಹುರಾಷ್ಟ್ರೀಯ ಕಂಪನಿಗಳು ಮತ್ತು ಭಾರತದ ದೊಡ್ಡ ಬಂಡವಾಳಶಾಹೀ ಗುಂಪುಗಳಿಗೆ ಭಾರತೀಯ ಜನತೆಯನ್ನು ಲೂಟಿ ಮಾಡಲು ಹಾಗೂ ಅಪಾರ ಲಾಭಗಳಿಸಲು ಉದಾರ ರಿಯಾಯ್ತಿಗಳನ್ನು ನೀಡಲಾಗಿದೆ. ಶೇ. 74ರ ವರೆಗೆ ಶೇರು ಹಿಂಪಡೆತ ಹಾಗೂ ಸಾರ್ವಜನಿಕ ವಲಯ ಉದ್ದಿಮೆಗಳ ಖಾಸಗೀಕರಣದ ಧಾಳಿಗಳು ಪೂರ್ಣ ರಭಸದಿಂದ ನಡೆದಿವೆ. ಸರಕಾರ ಯಾವುದೇ ಪರಿವೆಯಿಲ್ಲದೆ ರೋಗಗ್ರಸ್ತ ಸಾರ್ವಜನಿಕ ವಲಯದ ಉದ್ದಿಮೆಗಳಿಗೆ ಯಾವುದೇ ಹಣಕಾಸು ನೆರವು ನೀಡಲು ನಿರಾಕರಿಸಿದೆ: ಇದರಿಂದಾಗಿ ಅವುಗಳ ಪುನಶ್ಚೇತನ ಅಸಾಧ್ಯವಾಗಿದೆ. ಹೀಗೆ ಸರಕಾರ ದೇಶದಲ್ಲಿ ಸಾರ್ವಜನಿಕ ವಲಯದ ಜಾಲವನ್ನು ಸಂಪೂರ್ಣವಾಗಿ ಕಳಚಿಹಾಕುವ ಒಂದು ನೀಲನಕಾಶೆ ತಯಾರಿಸಿದೆ.

ಬಜೆಟ್ ಪ್ರಸ್ತಾಪಗಳು ಹಾಗೂ ಕಾಳಸಂತೆಕೋರರಿಗೆ ಸರಕಾರದ ಪರೋಕ್ಷ ಬೆಂಬಲದಿಂದಾಗಿ ಜೀವನಾವಶ್ಯಕ ಸಾಮಗ್ರಿಗಳ ಬೆಲೆಗಳಲ್ಲಿ ವಿಪರೀತ ಏರಿಕೆ ಜನಸಾಮಾನ್ಯರನ್ನು ಜಜ್ಜಿಬಿಡುವಂತಹ ಹೊರೆ ಹಾಕಿದೆ. ಬಡತನದ ರೇಖೆಯ ಕೆಳಗಿನ ಜನಸಂಖ್ಯೆ ದೊಡ್ಡ ಪ್ರಮಾಣದಲ್ಲಿ ಬೆಳೆದಿದೆ.

ರೈತಾಪಿ ಜನ ಭೂಸುಧಾರಣೆಗಳಿಲ್ಲದೆ, ಮಿಗುತೆ ಭೂಮಿಯ ವಿತರಣೆಯಿಲ್ಲದೆ ನರಳುತ್ತಿದ್ದಾರೆ. ಕೃಷಿ ಕಾರ್ಮಿಕರ ಕೂಲಿಗಳು ವಿಪರೀತ ಕಮ್ಮಿಯಿವೆ, ದೀರ್ಘ ಕಾಲದಿಂದ ಕಾಯುತ್ತಿರುವ ಕೃಷಿಕೂಲಿಕಾರರ ಮಸೂದೆಯನ್ನು ಕೈಬಿಡಲಾಗಿದೆ, ಸಂಸತ್ತು ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮೂರನೇ ಒಂದು ಸ್ಥಾನಗಳನ್ನು ಮೀಸಲಿಡುವ ಮಸೂದೆಯನ್ನು ಬಿಜೆಪಿ ಬುಡಮೇಲು ಮಾಡಿದೆ. ಮಹಿಳೆಯರ ಮೇಲಿನ ಅತ್ಯಾಚಾರಗಳು ದಿನೇ ದಿನೇ ಹೆಚ್ಚುತ್ತಲೇ ಇವೆ. ಉಚ್ಚವರ್ಗೀಯ ಶಿಕ್ಷಣ ನೀತಿಗಳು ಶಿಕ್ಷಣವನ್ನು ಜನಸಾಮಾನ್ಯರ ಕೈಗೆಟುಕದಂತೆ ಮಾಡಿವೆ. ನಿರುದ್ಯೋಗ ಬೆಚ್ಚಿ ಬೀಳಿಸುವ ರೀತಿಯಲ್ಲಿ ಏರುತ್ತಿದೆ, ಯುವಜನರಿಗೆ ಉದ್ಯೋಗವಕಾಶಗಳು ತೀವ್ರವಾಗಿ ಇಳಿದಿವೆ. ಇವಷ್ಟೇ ಅಲ್ಲ ಕೋಮುವಾದ ನಮ್ಮ ಸಮಾಜದ ಜಾತ್ಯಾತೀತ ಹಂದರಕ್ಕೆ ಬೆದರಿಕೆಯೊಡ್ಡಿದೆ. ಅಲ್ಪಸಂಖ್ಯಾತರಲ್ಲಿ ಅಭದ್ರತೆಯ ಭಾವನೆ ಉಂಟುಮಾಡಿದೆ.

ರಾಷ್ಟ್ರೀಯ ವೇದಿಕೆ ರಣಕಹಳೆಯೂದಿದೆ - ಕಾರ್ಮಿಕ ವರ್ಗಕ್ಕೆ, ರೈತ ಸಂಘಟನೆಗಳಿಗೆ, ಕೃಷಿ ಕಾರ್ಮಿಕರ ಸಂಘಗಳಿಗೆ, ಮಹಿಳೆಯರ ಸಂಘಟನೆಗಳಿಗೆ, ವಿದ್ಯಾರ್ಥಿ ಮತ್ತು ಯುವಜನರಿಗೆ ಹಂತಹಂತದ ಕಾರ್ಯಾಚರಣೆಯ ಕಾರ್ಯಕ್ರಮ ಹಾಗೂ ಕೊನೆಗೆ ಡಿಸೆಂಬರ್ 11, 1998 ರ ಸಾರ್ವತ್ರಿಕ ಮುಷ್ಕರದಲ್ಲಿ ಕೋಟಿಗಟ್ಟಲೆ ಜನಗಳನ್ನು ಅಣಿನೆರೆಸಲು ಕರೆನೀಡಿದೆ.

ಸಿಪಿಐ(ಎಂ)ನ ಹದಿನಾರನೇ ಮಹಾಧಿವೇಶನ ಕಾರ್ಮಿಕ ಸಂಘಟನೆಗಳು ಹಾಗೂ ಇತರ ಸಾಮೂಹಿಕ ಸಂಘಟನೆಗಳ ಸಾರ್ವತ್ರಿಕ ಮುಷ್ಕರದ ಕರೆಯನ್ನು ಬೃಹತ್ ಪ್ರಮಾಣದಲ್ಲಿ ಯಶಸ್ವಿಗೊಳಿಸಿ ಬಿಜೆಪಿ ನೇತೃತ್ವದ ಸರಕಾರದ ಪ್ರತಿಗಾಮಿ ಧೋರಣೆಗಳಿಗೆ ಶ್ರಮಜೀವಿ ಜನಸಮೂಹಗಳ ಐಕ್ಯಬಲದಿಂದ ಒಂದು ಬಲವಾದ ತಕ್ಕ ಉತ್ತರ ನೀಡಬೇಕೆಂದು ಕರೆ ನೀಡುತ್ತದೆ.

ಸಿಪಿಐ(ಎಂ) ಡಿಸೆಂಬರ್ 10 ಹಾಗೂ 11, 1998 ರಂದು ಎರಡು ದಿನಗಳ ಮುಷ್ಕರ ನಡೆಸಿ ಸರಕಾರದ ಖಾಸಗೀಕರಣದ ಹಾಗೂ ಸಾರ್ವಜನಿಕ ವಲಯ ಘಟಕಗಳನ್ನು ಮುಚ್ಚುವ ನೀತಿಯನ್ನು ವಿರೋಧಿಸುವ ಸಾರ್ವಜನಿಕ ವಲಯದ ಕಾರ್ಮಿಕ ಸಂಘಟನೆಗಳ ಸಮಿತಿ (CPSTU)ಯ ನಿರ್ಣಯವನ್ನು ಸ್ವಾಗತಿಸುತ್ತದೆ.

ಈ ಮಹಾಧಿವೇಶನ ಈ ಬೃಹತ್ ಕಾರ್ಯಾಚರಣೆಗೆ ಸರ್ವ ಬೆಂಬಲ ನೀಡಬೇಕು ಎಂದು, ಡಿಸೆಂಬರ್ 11 ರಂದು ಜನಸಮೂಹಗಳನ್ನು ಅಣಿನೆರೆಸಿ ಆ ಮೂಲಕ ಶ್ರಮಜೀವಿ ಜನಕೋಟಿಗಳ ಒಂದು ಶಕ್ತಿಶಾಲಿ ದನಿ ಭಾರತದಾದ್ಯಂತ ಏಳುವಂತಾಗಬೇಕು ಎಂದು ಪಕ್ಷದ ಘಟಕಗಳಿಗೆ, ಸದಸ್ಯರಿಗೆ ಕರೆ ನೀಡುತ್ತದೆ.

ಕ್ರಿಶ್ಚಿಯನ್ ಕೋಮಿನ ವಿರುದ್ಧ ಧಾಳಿ ಹಿಂದುತ್ವ ಶಕ್ತಿಗಳ ದುಷ್ಟ ಸಂಚನ್ನು ಬಯಲಿಗೆಳೆಯಬೇಕು

ಸಿಪಿಐ(ಎಂ)ನ ಹದಿನಾರನೇ ಮಹಾಧಿವೇಶನ ಕ್ರಿಶ್ಚಿಯನ್ ಕೋಮಿನ ವಿರುದ್ಧ ಆರ್.ಎಸ್.ಎಸ್. ಮತ್ತು ಅದರ ಅಂಗಗಳು, ವಿಶೇಷವಾಗಿ ವಿಶ್ವ ಹಿಂದೂ ಪರಿಷತ್ ಇತ್ತೀಚಿನ ತಿಂಗಳಲ್ಲಿ ದೇಶಾದ್ಯಂತ ಹರಿಯಬಿಟ್ಟಿರುವ ವ್ಯವಸ್ಥಿತ ಹಿಂಸಾಚಾರದ ಬಗ್ಗೆ ತೀವ್ರ ಕ್ರೋಧವನ್ನು ವ್ಯಕ್ತಪಡಿಸುತ್ತಾ ಅದನ್ನು ಬಲವಾಗಿ ಖಂಡಿಸುತ್ತದೆ. ಬಿಜೆಪಿ ನೇತೃತ್ವದ ಸರಕಾರ ಕೇಂದ್ರದಲ್ಲಿ ಅಧಿಕಾರ ವಹಿಸಿಕೊಂಡಂದಿನಿಂದ ವಿಶೇಷವಾಗಿ ಬಿಜೆಪಿಯ ಆಳ್ವಿಕೆಯ ರಾಜ್ಯಗಳಲ್ಲಿ ಕ್ರಿಶ್ಚಿಯನ್ನರ ಮೇಲೆ ಧಾಳಿಗಳು ತೀವ್ರವಾಗಿ ಏರಿವೆ. ಹಿಂಸಾಚಾರದ ವಿಧಾನವನ್ನು ನೋಡಿದರೆ ಆರ್.ಎಸ್.ಎಸ್., ವಿಹೆಚ್‌ಪಿ, ಭಜರಂಗದಳ ಮತ್ತು ಶಿವಸೇನಾ ಕಾರ್ಯಕರ್ತರು ಭಾರತದಲ್ಲಿನ ಕ್ರಿಶ್ಚಿಯನ್ ಅಲ್ಪಸಂಖ್ಯಾತರಿಗೆ ಕಿರುಕುಳ ಕೊಡುವ, ಹೆದರಿಸುವ, ಭಯೋತ್ಪಾದನೆ ನಡೆಸುವ ಈ ಸುನಿರ್ಧಾರಿತ ಯೋಜನೆಯನ್ನು ಜಾರಿಗೊಳಿಸುತ್ತಿರುವುದನ್ನು ತೋರಿಸುತ್ತಿದೆ. ಭಾರತದಲ್ಲಿ ಕ್ರಿಶ್ಚಿಯನ್ನರ ಸಂಖ್ಯೆ ಸುಮಾರು 2.3 ಕೋಟಿ; ಇದು ಜನಸಂಖ್ಯೆಯ 2.6% ಮಾತ್ರ.

ಕ್ರೈಸ್ತ ಸನ್ಯಾಸಿ, ಸನ್ಯಾಸಿಯರಂತಹ ಧಾರ್ಮಿಕ ವ್ಯಕ್ತಿಗಳ ವಿರುದ್ಧ ನೇರ ಹಿಂಸಾಚಾರ, ಪ್ರಾರ್ಥನಾ ಸಭೆಗಳನ್ನು ಹಿಂಸಾತ್ಮಕವಾಗಿ ಅಸ್ತವ್ಯಸ್ತಗೊಳಿಸುವುದು, ಕ್ರಿಶ್ಚಿಯನ್ ಸಂಸ್ಥೆಗಳ ಮೇಲೆ ಧಾಳಿಗಳು, ಚರ್ಚ್‌ಗಳ ಧ್ವಂಸ, ಸಮಾಧಿಗಳನ್ನು ಅಪವಿತ್ರಗೊಳಿಸುವುದು, ಮಿಶನರಿ ಶಾಲೆಗಳಲ್ಲಿ ವಿದ್ಯಾರ್ಥಿಗಳನ್ನು, ಅಧ್ಯಾಪಕರನ್ನು ಬೆದರಿಸುವುದು ಇವೆಲ್ಲಾ ಈ ಧಾಳಿಗಳ ವಿಧಾನಗಳು.

ಅತೀ ಹೆಚ್ಚು ಧಾಳಿಗಳು ನಡೆದಿರುವುದು ವಿಹೆಚ್‌ಪಿ ಅತ್ಯಂತ ವ್ಯಾಪಕ ಜಾಲ ಹೊಂದಿರುವ ಗುಜರಾತಿನಲ್ಲಿ. ಇಲ್ಲಿ ವಿಹೆಚ್‌ಪಿ ಕಾರ್ಯಕರ್ತರು ಬೈಬಲ್ ಪ್ರತಿಗಳನ್ನು ಸುಟ್ಟಿದ್ದಾರೆ, ಚರ್ಚುಗಳನ್ನು ಧ್ವಂಸ ಮಾಡಿದ್ದಾರೆ, ಕ್ರಿಶ್ಚಿಯನ್ ಮಸಣಗಳನ್ನು ಅಪವಿತ್ರಗೊಳಿಸಿದ್ದಾರೆ, ಪ್ರಾರ್ಥನಾ ಸಭೆಗಳಲ್ಲಿ ಅಮಾನುಷ ಹಲ್ಲೆ ನಡೆಸಿದ್ದಾರೆ ಹಾಗೂ ಮಿಷನರಿ ಸಂಸ್ಥೆಗಳ ಮೇಲೆ ದುಂಡಾವರ್ತಿ ನಡೆಸಿದ್ದಾರೆ. ಮಧ್ಯ ಪ್ರದೇಶ, ಮಹಾರಾಷ್ಟ್ರ, ಉತ್ತರ ಪ್ರದೇಶ, ರಾಜಸ್ಥಾನ ಮತ್ತು ಪಂಜಾಬ್‌ಗಳಲ್ಲಿ ಕಳೆದ ಕೆಲವು ತಿಂಗಳಲ್ಲಿ ಇಂತಹ ಧಾಳಿಗಳು ನಡೆದಿವೆ. ಈಶಾನ್ಯ ಭಾಗಗಳಲ್ಲಿ ಮತ್ತು ಬಿಹಾರದಲ್ಲಿ ಆರ್.ಎಸ್.ಎಸ್. ಕಾರ್ಯಕರ್ತರು ಹಲವು ವರ್ಷಗಳಿಂದ ಚರ್ಚ್ ವಿರುದ್ಧ ಪ್ರಚಾರ ಕಾರ್ಯ ನಡೆಸಿದ್ದು ಈಗ ಅದನ್ನು ಇನ್ನಷ್ಟು ತೀವ್ರಗೊಳಿಸಿದ್ದಾರೆ. ಇಂತಹ ಅತ್ಯಾಚಾರಗಳಿಂದ ಉಂಟಾದ ದ್ವೇಷದ ವಾತಾವರಣದ ಒಂದು ಅತ್ಯಂತ ಭಯಾನಕ ಉದಾಹರಣೆಯಾಗಿ ಮಧ್ಯಪ್ರದೇಶದ ಝಬುವಾ ಜಿಲ್ಲೆಯಲ್ಲಿ ನಡೆಸಿರುವ ಕ್ರೈಸ್ತ ಸನ್ಯಾಸಿನಿಯರ ಮಾನಭಂಗದ ಘಟನೆ. ಮಾನಭಂಗ ಮತ್ತು ಹಿಂಸಾಚಾರದ ಇತರ ಘಟನೆಗಳನ್ನು ವಿಹೆಚ್‌ಪಿ ಸಮರ್ಥಿಸಿಕೊಂಡದ್ದು ಈ ಹಿಂಸಾಚಾರ ಆಕಸ್ಮಿಕವಾಗಿ ಅಲ್ಲಲ್ಲಿ ನಡೆದದ್ದಲ್ಲ ಫ್ಯಾಸಿಸ್ಟ್ ಮಾದರಿಯ ಹಿಂದುತ್ವ ಸಿದ್ಧಾಂತದ ಅಭಿವ್ಯಕ್ತಿ ಇದು; ಪ್ರಭುತ್ವ ಅಧಿಕಾರ ದೊರೆತ ಮೇಲೆ ಅದು ನಗ್ನ ಆಕ್ರಮಣಕ್ಕೆ ಇಳಿದಿದೆ ಎಂಬುದನ್ನು ಸಾಬೀತು ಪಡಿಸುತ್ತದೆ.

ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗ ತನಿಖೆಯ ನಂತರ ಗುಜರಾತಿನ ಬಿಜೆಪಿ ಸರಕಾರ ಅಲ್ಪಸಂಖ್ಯಾತರಿಗೆ ಅಭದ್ರತೆಯ ವಾತಾವರಣವನ್ನು ಸೃಷ್ಟಿಸುವ ಅಪರಾಧ ಮಾಡಿದೆ ಎಂದಿದೆ. ದೇಶಾದ್ಯಂತ ಇಂತಹ ಹಿಂಸಾಚಾರಗಳು ನಡೆದರೂ ಕೇಂದ್ರ ಸರಕಾರ ಇದನ್ನು ಖಂಡಿಸುವ ಯಾವುದೇ ಅಧಿಕೃತ ಹೇಳಿಕೆ ನೀಡಿಲ್ಲ, ಅಥವಾ ಕ್ರಿಶ್ಚಿಯನ್ ಕೋಮಿನ ಭದ್ರತೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಭಾರತದಲ್ಲಿ ಸ್ವಾತಂತ್ರ್ಯದ ನಂತರ ಮೊದಲ ಬಾರಿಗೆ ಕ್ರಿಶ್ಚಿಯನ್ನರಿಗೆ ಬೆದರಿಕೆಯ ಭಾವನೆ ಉಂಟಾಗಿದೆ ಎಂದು ಈ ಕೋಮಿನ ಪ್ರತಿನಿಧಿಗಳು ಹೇಳುತ್ತಿದ್ದಾರೆ.

ಕ್ರಿಶ್ಚಿಯನ್ನರ ಮೇಲೆ ಧಾಳಿಗಳ ಸಾರಾಂಶವಿರುವುದು ಹಿಂದುತ್ವ ಸಿದ್ಧಾಂತದಲ್ಲೇ. ಭಾರತ ಏಕಮುಖ ಹಿಂದು ಕೋಮಿನ ನಾಡು, ಬೇರೆ ಮತಾವಲಂಬಿಗಳು 'ಪರಕೀಯರು', ಅವರಿಗೆ ಯಾವುದೇ ಸ್ಥಾನಮಾನ ಇಲ್ಲ ಎಂದು ಈ ಸಿದ್ಧಾಂತ ಹೇಳುತ್ತದೆ. ಬಾಬ್ರಿ ಮಸೀದಿಯ ಧ್ವಂಸ ಮತ್ತು ಮುಸಲ್ಮಾನ ಅಲ್ಪಸಂಖ್ಯಾತರ ವಿರುದ್ಧ ಹಿಂಸಾಚಾರಕ್ಕೆ ಕಾರಣವಾದ ದ್ವೇಷ ಭಾವನೆಯೇ ಕ್ರಿಶ್ಚಿಯನ್ನರ ವಿರುದ್ಧ ಧಾಳಿಗಳಲ್ಲಿ ಅಭಿವ್ಯಕ್ತಗೊಳ್ಳುತ್ತಿದೆ. ಈ ದ್ವೇಷ ಮತ್ತು ಹಿಂಸಾಚಾರದ ಆರ್.ಎಸ್.ಎಸ್. - ಬಿಜೆಪಿ - ವಿಹೆಚ್‌ಪಿಯ ಹಿಂದೂರಾಷ್ಟ್ರ ತರುವ ದಾರಿಯ ಒಂದು ಅಭಿನ್ನ ಅಂಗ.

ಸಿಪಿಐ(ಎಂ) ಹದಿನಾರನೇ ಮಹಾಧಿವೇಶನ ಜನಗಳ ನಡುವೆ ಹೋಗಿ ಕೋರಿ ಹಿಂದುತ್ವ ಶಕ್ತಿಗಳ ದುಷ್ಟ ಆಟಗಳನ್ನು ಬಯಲಿಗೆಳೆಯಬೇಕು ಎಂದು ಎಲ್ಲಾ ಪಕ್ಷದ ಘಟಕಗಳಿಗೆ, ಸದಸ್ಯರಿಗೆ ಕರೆ ನೀಡುತ್ತದೆ. ಭಾರತದಲ್ಲಿ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ ಹಾಗೂ ಭದ್ರತೆಯ ಸಮರದಲ್ಲಿ ಸಿಪಿಐ(ಎಂ) ಮುಂಚೂಣಿಯಲ್ಲಿರಬೇಕು. ಪ್ರಜಾಪ್ರಭುತ್ವ ಮತ್ತು ಕೋಮು ಸೌಹಾರ್ದದಲ್ಲಿ ನಂಬಿಕೆಯಿರುವ ಎಲ್ಲಾ ಭಾರತೀಯ ಜನವಿಭಾಗಗಳು ತಮ್ಮ ದನಿಯೆತ್ತಿ ಕ್ರಿಶ್ಚಿಯನ್ ಕೋಮಿನ ವಿರುದ್ಧ ಹಿಂಸಾತ್ಮಕ ಧಾಳಿಯನ್ನು ಎದುರಿಸಬೇಕು ಎಂದು ಮಹಾಧಿವೇಶನ ಕರೆ ನೀಡುತ್ತದೆ.

ತ್ರಿಪುರಾದಲ್ಲಿ ಹಿಂಸಾತ್ಮಕ ಚಟುವಟಿಕೆಗಳು: ಹೀನ ಪ್ರಯತ್ನಗಳನ್ನು ವಿಫಲಗೊಳಿಸಬೇಕು

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ದ ಹದಿನಾರನೇ ಮಹಾಧಿವೇಶನ ತ್ರಿಪುರಾದಲ್ಲಿ ಉಗ್ರಗಾಮಿ ಗುಂಪುಗಳ ಹೆಚ್ಚುತ್ತಿರುವ ಹಿಂಸಾತ್ಮಕ ಚಟುವಟಿಕೆಗಳ ಬಗ್ಗೆ ಆಳವಾದ ಆತಂಕ ವ್ಯಕ್ತಪಡಿಸುತ್ತದೆ. ಹಲವು ಮುಗ್ಧ ಜೀವಗಳ ಬಲಿಯಾಗಿದೆ, ಹಲವಾರು ಜನಗಳು ಗಾಯಗೊಂಡಿದ್ದಾರೆ, ಸಾಮಾನ್ಯ ಜನಜೀವನವನ್ನು ಇದು ತಟ್ಟಿದೆ. ಮಹಾಧಿವೇಶನ ಈ ಬುದ್ಧಿಗೇಡಿ ಕೊಲೆಗಳು, ಅಪಹರಣಗಳು, ವ್ಯಾಪಕ ಹಣ ಸುಲಿಗೆಗಳನ್ನು ನಡೆಸಿ ಗಡಿಯಾಚೆಯ ಪ್ರದೇಶಗಳನ್ನು ಆಶ್ರಯವಾಗಿ ಬಳಸುವ ಎರಡು ಕಾನೂನು ಬಾಹಿರ ಉಗ್ರಗಾಮಿ ಗುಂಪುಗಳಾದ ಎನ್‌ಎಲ್‌ಎಫ್‌ಟಿ ಹಾಗೂ ಎಟಿಟಿಎಫ್‌ನ್ನು ಬಲವಾಗಿ ಖಂಡಿಸುತ್ತದೆ.

ಬುಡಕಟ್ಟೇತರ ಜನಗಳನ್ನು ಯೋಜಿತ ಆಕ್ರಮಣಗಳಲ್ಲಿ ಕೊಲ್ಲುತ್ತಿರುವುದು ಜನಾಂಗಗಳ ನಡುವೆ ಘರ್ಷಣೆಗಳನ್ನು ಪ್ರಚೋದಿಸಲು ಹಾಗೂ ಕೋಮುವಾದಿ ಹಿಂಸಾಚಾರ ಉದ್ರೇಕಿಸುವ ಲೆಕ್ಕಾಚಾರದಿಂದಾಗಿ ದಶಕಗಳ ಕಾಲದ ಪ್ರಯತ್ನಗಳಿಂದ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಬೆಸೆದ ಬುಡಕಟ್ಟು ಮತ್ತು ಬುಡಕಟ್ಟೇತರ ಐಕ್ಯತೆಯನ್ನು ಛಿದ್ರಗೊಳಿಸುವ ಒಂದು ಹೀನ ಪಿತೂರಿಯಿದು.

ಕಳೆದ ಮೂರು ತಿಂಗಳಲ್ಲಿ ಉಗ್ರಗಾಮಿ ಗುಂಪುಗಳ ಧಾಳಿಗಳು ರಾಜ್ಯದಲ್ಲಿ ನೆಲೆಗೊಳಿಸಿದ್ದ ಸಶಸ್ತ್ರ ಪಡೆಗಳಲ್ಲಿ ಗಮನಾರ್ಹ ಸಂಖ್ಯೆಯನ್ನು ಹಿಂತೆಗೆದುಕೊಳ್ಳುವ ಬಿಜೆಪಿ ನೇತೃತ್ವದ ಸರಕಾರದ ನಿರ್ಣಯದ ಹಿನ್ನೆಲೆಯಲ್ಲಿ ತೀವ್ರಗೊಂಡಿದೆ. ಈ ಕ್ರಮದಿಂದ ಧೈರ್ಯ ತೆಗೆದುಕೊಂಡ ಉಗ್ರಗಾಮಿಗಳು ತಮ್ಮ ಹೊಡೆದೋಡುವ ತಂತ್ರಗಳನ್ನು ತೀವ್ರಗೊಳಿಸಿದ್ದಾರೆ.

ಮಹಾಧಿವೇಶನ ವಾಜಪೇಯಿ ಸರಕಾರದ ಈ ದುರುದ್ದೇಶಪೂರಿತ ನಿಷ್ಕ್ರಿಯತೆಯನ್ನು ಖಂಡಿಸುತ್ತದೆ ಹಾಗೂ ತಕ್ಷಣ ಸಶಸ್ತ್ರ ಪಡೆಗಳನ್ನು ಮೊದಲಿನ ಮಟ್ಟಕ್ಕೆ ತರಬೇಕು, ಹೆಚ್ಚಿನ ಪಡೆಗಳನ್ನು ಕಳಿಸಬೇಕು ಎಂದು ಎಡರಂಗ ಸರಕಾರ ಮತ್ತೆ-ಮತ್ತೆ ಮನವಿ ಮಾಡಿಕೊಂಡಲೂ ಅದಕ್ಕೆ ಕಿವಿಗೊಡದಿರುವುದನ್ನು ಖಂಡಿಸುತ್ತದೆ.

ತ್ರಿಪುರಾದ ಸಮಸ್ಯೆಯನ್ನು ಕೆಲವು ಕಟ್ಟಾ ಸಶಸ್ತ್ರ ಉಗ್ರಗಾಮಿ ಗುಂಪುಗಳು ನಿರ್ಮಿಸಿದ ಒಂದು ಕಾನೂನು ವ್ಯವಸ್ಥೆಯ ಪ್ರಶ್ನೆಯಾಗಿಯಷ್ಟೆ ನೋಡಬಾರದು. ಈ ಗುಂಪುಗಳ ಹಿಂದೆ ಸಾಮ್ರಾಜ್ಯಶಾಹಿ ಏಜೆನ್ಸಿಗಳು, ಐ.ಎಸ್.ಐ. ಇವೆ. ಗಡಿಯಾಚೆಯಿಂದ ಇವರಿಗೆ ಇವು ಬೆಂಬಲ, ಸಾಧನಗಳನ್ನು ಒದಗಿಸುತ್ತಿವೆ. ತ್ರಿಪುರಾದಲ್ಲಿನ ಹೋರಾಟ ಒಂದು ಸ್ಥಳೀಯ ರಾಜಕೀಯ ತಿಕ್ಕಾಟವಲ್ಲ, ದೇಶದ ಒಂದು ಸಾಮರಿಕ ಮಹತ್ವದ ಪ್ರದೇಶದಲ್ಲಿ ರಾಷ್ಟ್ರೀಯ ಐಕ್ಯತೆಯನ್ನು ರಕ್ಷಿಸುವ ಒಂದು ಹೋರಾಟ ಅದು. ರಾಜ್ಯದಲ್ಲಿ ಕಾಂಗ್ರೆಸ್ (ಐ)-ಟಿಯುಜೆಎಸ್ ಪ್ರತಿಪಕ್ಷಗಳು ರಾಜ್ಯ ಸರಕಾರದೊಡನೆ ಸಹಕರಿಸದೆ ಒಂದು ಪಕ್ಷಪಾತಪೂರ್ಣ, ದೇಶಕ್ಕೆ ಮಾರಕಮಾಡುವ ನಿಲುವು ತಳೆದು ಸರಕಾರವನ್ನು ಅಸ್ಥಿರಗೊಳಿಸುವ ನಿರೀಕ್ಷೆಯಿಂದ ಹಿಂಸಾತ್ಮಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತಿರುವುದು ದುರದೃಷ್ಟಕರ.

ಈ ಹೀನ ಪಿತೂರಿಯಿಂದ ಉದ್ರೇಕಗೊಳ್ಳದೆ ತ್ರಿಪುರಾದ ಬುಡಕಟ್ಟು ಜನತೆ ಹಾಗೂ ಇತರ ಜನಗಳು ಉಚ್ಚ ಮಟ್ಟದ ಪ್ರಜ್ಞೆಯನ್ನು ಪ್ರದರ್ಶಿಸಿರುವ ಬಗ್ಗೆ, ಈಗಲೂ ಸಮರಸಪೂರ್ಣ ಸಂಬಂಧಗಳನ್ನು ಕಾಯ್ದುಕೊಂಡಿರುವ ಬಗ್ಗೆ 16ನೇ ಮಹಾಧಿವೇಶನ ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತದೆ.

. ಮಹಾಧಿವೇಶನ ಸಿಪಿಐ(ಎಂ) ರಾಜ್ಯ ಘಟಕದೊಂದಿಗೆ ಹಾಗೂ ಸಶಸ್ತ್ರಧಾಳಿಗಳನ್ನು ವೀರಾವೇಶದಿಂದ ಎದುರಿಸಿ ರಾಷ್ಟ್ರೀಯ ಐಕ್ಯತೆಯನ್ನು ಎತ್ತಿಹಿಡಿದಿರುವ, ಜನಗಳ ಐಕ್ಯತೆಯನ್ನು ಕಾಯ್ದುಕೊಂಡ ಕಾರ್ಯಕರ್ತರೊಂದಿಗೆ ಪೂರ್ಣ ಸೌಹಾರ್ದ ವ್ಯಕ್ತಪಡಿಸುತ್ತದೆ. ಎಡರಂದ ಸರ್ಕಾರ ಒಂದೆಡೆ ಹಿಂಸಾತ್ಮಕ ಚಟುವಟಿಕೆಗಳನ್ನು ದೃಢವಾಗಿ ಎದುರಿಸುತ್ತಲೇ ಶಸ್ತ್ರಾಸ್ತ್ರಗಳನ್ನು ತ್ಯಜಿಸಿದವರೊಂದಿಗೆ ಮಾತುಕತೆ ನಡೆಸುವ ಹಾಗೂ ಪುನರ್ವಸತಿ ಕಲ್ಪಿಸುವ ಆಹ್ವಾನ ನೀಡಿ ಉಗ್ರಗಾಮಿತ್ವದ ಸಮಸ್ಯೆಯನ್ನು ರಾಜಕೀಯವಾಗಿ ಎದುರಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿದೆ.

16ನೇ ಮಹಾಧಿವೇಶನ ತ್ರಿಪುರಾದ ಪ್ರಜಾಪ್ರಭುತ್ವ ಆಂದೋಲನದ ರಕ್ಷಣೆಗಾಗಿ ಪರಿಣಾಮಕಾರಿ ಪ್ರಚಾರ-ಪ್ರಕ್ಷೋಭೆ ನಡೆಸಬೇಕು, ಕೇಂದ್ರ ಸರ್ಕಾರ ರಾಜ್ಯಕ್ಕೆ ಸಾಕಷ್ಟು ಪ್ರಮಾಣದ ನೆರವು ಒದಗಿಸುವಂತೆ ಒತ್ತಡ ತರಲು ಸಾರ್ವಜನಿಕ ಅಭಿಪ್ರಾಯವನ್ನು ಅಣಿನೆರೆಸಬೇಕು ಎಂದು ಎಲ್ಲಾ ಪಕ್ಷದ ಘಟಕಗಳಿಗೆ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳಿಗೆ ಕರೆ ನೀಡುತ್ತದೆ.



ಅಕ್ಟೋಬರ್ 11ರ ರ್‍ಯಾಲಿಯ ವೇದಿಕೆಯ ಮೇಲೆ ಪೊಲಿಟ್‌ಬ್ಯೂರೋ ಸದಸ್ಯರಾದ ಪ್ರಕಾಶ್ ಕಾರಟ್, ರಾಮಚಂದ್ರನ್ ಪಿಳ್ಳೆ ಮತ್ತು ವಿದೇಶಿ ಪ್ರತಿನಿಧಿಗಳು

ಹೊಸ ಕೇಂದ್ರ ಸಮಿತಿ

16ನೇ ಮಹಾಧಿವೇಶನ ಹೊಸ ಕೇಂದ್ರ ಸಮಿತಿಯ ಸಂಖ್ಯೆ 75 ಎಂದು ನಿಗದಿಪಡಿಸಿ 66 ಸಂಗಾತಿಗಳನ್ನು ಆರಿಸಿದೆ. ಉಳಿದ ಸ್ಥಾನಗಳನ್ನು ಮುಂದೆ ಭರ್ತಿ ಮಾಡಲಾಗುವುದು.

1. ಹರ್ಕಿಶನ್ ಸಿಂಗ್ ಸುರ್ಜಿತ್
2. ಜ್ಯೋತಿಬಸು
3. ಇ.ಬಾಲಾನಂದನ್
4. ಬಿನೋಯ್ ಕೃಷ್ಣ ಚೌಧರಿ
5. ವಿ.ಎಸ್.ಅಚ್ಯುತಾನಂದನ್
6. ಪ್ರಕಾಶ್ ಕಾರಟ್
7. ಸೀತಾರಾಂ ಯೆಚೂರಿ
8. ಎಸ್.ಆರ್.ಪಿಳ್ಳೆ
9. ಪಿ.ರಾಮಚಂದ್ರನ್
10. ಶೈಲೇನ್ ಗುಪ್ತ
11. ಇ.ಕೆ.ನಾಯನಾರ್
12. ಆರ್.ಉಮಾನಾಥ
13. ಎಂ.ಹನುಮಂತರಾವ್
14. ಕೊರಟಳ ಸತ್ಯನಾರಾಯಣ
15. ಎಂ.ವಿ.ನರಸಿಂಹ ರೆಡ್ಡಿ
16. ಹೇಮನ್ ದಾಸ್
17. ನೂರಲ್ ಹುಡಾ
18. ಗಣೇಶ್ ಶಂಕರ್ ವಿದ್ಯಾರ್ಥಿ
19. ಸುಬೋಧ್ ರಾಯ್
20. ಜೋಗಿಂದರ್ ಶರ್ಮ
21. ಮಹಮ್ಮದ್ ಯೂಸಫ್ ತರಿಗಾಮಿ
22. ಟಿ.ಕೆ.ರಾಮಕೃಷ್ಣನ್
23. ಸುಶೀಲಾ ಗೋಪಾಲನ್
24. ಪ್ರಭಾಕರ್ ಸಾಂಜ್‌ಗಿರಿ
25. ಅಹಲ್ಯಾ ರಂಗ್ನೇಕರ್
26. ಮಂಗತ್ ರಾಮ್ ಪಾಸ್ಲಾ
27. ಬಲವಂತ್ ಸಿಂಗ್
28. ಹರಿರಾಮ್ ಚೌಹಾಣ್
29. ಎನ್.ಶಂಕರಯ್ಯ
30. ಮಾಣಿಕ್ ಸರ್ಕಾರ್
31. ರಾಮ್ ಸುಮೇರ್ ಯಾದವ್
32. ಬುದ್ಧದೇಬ್ ಭಟ್ಟಾಚಾರ್ಯ
33. ಬೀಮನ್ ಬಸು
34. ಮಹಮದ್ ಅಮೀನ್
35. ಅನಿಲ್ ಬಿಸ್ವಾಸ್
36. ಬಿಪ್ಲವ್ ದಾಸ್ ಗುಪ್ತಾ
37. ಎಂ.ಕೆ.ಪಂಧೆ
38. ವಿಮಲಾ ರಣದಿವೆ
39. ಸುಕೋಮಲ್ ಸೆನ್
40. ಹನನ್ ಮುಲ್ಲಾ
41. ಎಂ.ಎ.ಬೇಬಿ
42. ಹರಿಸಿಂಗ್ ಕಾಂಗ್
43. ನಿರೇನ್ ಘೋಷ್
44. ಬಿನೋಯ್ ಕೊನಾರ್
45. ಚಿತ್ತಬ್ರತ ಮಜುಂದಾರ್
46. ಪಳೊಳಿ ಮಹಮದ್ ಕುಟ್ಟಿ
47. ವೈದ್ಯನಾಥ ಮಜುಂದಾರ್
48. ಎನ್.ವರದರಾಜನ್
49. ಬಿ.ವಿ.ರಾಘವಲು
50. ಉಧಬ್ ಬರ್ಮನ್
51. ಜನಾರ್ಧನ ಪತಿ
52. ಮಹಮದ್ ಸಲೀಂ
53. ಸುನೀತ್ ಚೋಪ್ರಾ
54. ಶೈಲೇಂದ್ರ ಶೈಲಿ
55. ಇಂದ್ರಜಿತ್ ಸಿಂಗ್
56. ಪಿನರಾಯ್ ವಿಜಯನ್ (ಕೇರಳ)
57. ಪಿ.ಕೆ.ಗುರುದಾಸನ್(ಕೇರಳ)
58. ಪಿ.ಕರುಣಾಕರನ್(ಕೇರಳ)
59. ಪಿ.ರಾಮಯ್ಯ (ಆಂಧ್ರಪ್ರದೇಶ)
60. ಕೆ.ವರದರಾಜನ್ (ತಮಿಳುನಾಡು)
61. ನಿರುಪಮ ಸೆನ್(ಪಶ್ಚಿಮಬಂಗಾಳ)
62. ಸೋಮನಾಥ ಚಟರ್ಜಿ(ಪಶ್ಚಿಮ ಬಂಗಾಳ
63. ಅಘೋರ್ ದೇಬ್‌ವರ್ಮ(ತ್ರಿಪುರ)
64. ಅಶೋಕ್ ದಾವ್ಲೆ (ಮಹಾರಾಷ್ಟ)
65. ಸುಬೋಧ್ ಮೆಹ್ತಾ (ಗುಜರಾತ್)
66. ಮೊಹರ್ ಸಿಂಗ್ (ಹಿಮಾಚಲ ಪ್ರದೇಶ)

ಮೇಲಿನ ಪಟ್ಟಿಯಲ್ಲಿ ಕೊನೆಯ 11 ಜನರು ಕೇಂದ್ರ ಸಮಿತಿಗೆ ಹೊಸದಾಗಿ ಆಯ್ಕೆಗೊಂಡವರು. ಹಿಂದಿನ ಕೇಂದ್ರ ಸಮಿತಿಯ 9 ಸದಸ್ಯರು ಹೊಸ ಸಮಿತಿಯಲ್ಲಿಲ್ಲ.

ಚುನಾಯಿತ ಕೇಂದ್ರ ಸಮಿತಿ ಸದಸ್ಯರು ಕಾಮ್ರೇಡ್ ಹರ್ಕಿಶನ್ ಸಿಂಗ್ ಸುರ್ಜಿತ್‌ರವರನ್ನು ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆ ಮಾಡಿದರು. ಹೊಸ ಪೊಲಿಟ್‌ಬ್ಯೂರೋವನ್ನು ನವಂಬರ್ ತಿಂಗಳ ವಿಧಾನಸಭಾ ಚುನಾವಣೆಗಳ ನಂತರ ಸಭೆ ಸೇರುವ ಹೊಸ ಕೇಂದ್ರ ಸಮಿತಿ ಆರಿಸುತ್ತದೆ.

ಮಹಾಧಿವೇಶನ ಆರಿಸಿದ ಹೊಸ ಕೇಂದ್ರೀಯ ಹತೋಟಿ ಆಯೋಗದ ಸದಸ್ಯರ ಹೆಸರುಗಳು ಹೀಗಿವೆ:


1. ಸಮರ್ ಮುಖರ್ಜಿ 2. ಸುನಿಲ್ ಬಸು ರಾಯ್ 3. ಎ.ಜನಾರ್ಧನನ್ 4. ಸಿ.ಪಿ.ನಾರಾಯಣನ್ 5. ಆಂಧ್ರದಿಂದ ಒಬ್ಬ ಸಂಗಾತಿ ಮುಂದೆ ಆರಿಸಲಾಗುವುದು.

ಕಾಂ. ಸಮರ್ ಮುಖರ್ಜಿಯವರನ್ನು ಆಯೋಗದ ಅಧ್ಯಕ್ಷರಾಗಿ ಆರಿಸಲಾಯಿತು.

ಅಕ್ಟೋಬರ್ 11 ರ ರ್‍ಯಾಲಿಯ ವೇದಿಕೆಯ ಮೇಲೆ ಪೊಲಿಟ್‌ಬ್ಯೂರೋ ಸದಸ್ಯರಾದ ಇ.ಬಾಲಾನಂದನ್ ಮತ್ತು ಪಿ.ರಾಮಚಂದ್ರನ್.



೧೬ನೇ ಮಹಾಧಿವೇಶನದ ಪ್ರತಿನಿಧಿಗಳು



ಒಟ್ಟು 683 ಪ್ರತಿನಿಧಿಗಳು ಹಾಗೂ 63 ವೀಕ್ಷಕರು ಈ ಮಹಾಧಿವೇಶನದಲ್ಲಿ ಭಾಗವಹಿಸಬೇಕಾಗಿತ್ತು. ಇಬ್ಬರು ಕೇಂದ್ರ ಸಮಿತಿ ಸದಸ್ಯರಾದ ದಶರಥ್‌ದೇಬ್ ಮತ್ತು ವಿಮಲಾ ರಣದಿವೆ ಅನಾರೋಗ್ಯದಿಂದಾಗಿ ಭಾಗವಹಿಸಲಿಲ್ಲ.(ಕಾಂ. ದಶರಥ್‌ದೇಬ್ ಅಕ್ಟೋಬರ್ 14 ರಂದು ನಿಧನರಾದರೆಂದು ಈಗ ಸುದ್ದಿ ಬಂದಿದೆ - ಪುಟ 3 ನೋಡಿ) ಅಲ್ಲದೆ ಕೇರಳದಿಂದ ಒಬ್ಬ ಪ್ರತಿನಿಧಿ ಹಾಗೂ ಮಣಿಪುರದ ಹಾಗೂ ಅಂಡಮಾನಿನ ತಲಾ ಒಬ್ಬ ವೀಕ್ಷಕರು ಹಾಜರಾಗಲಿಲ್ಲ.

ಹೀಗೆ 16ನೇ ಮಹಾಧಿವೇಶನದಲ್ಲಿ ಭಾಗವಹಿಸಿದ ಒಟ್ಟು ಪ್ರತಿನಿಧಿಗಳ ಸಂಖ್ಯೆ 680. ಇವರಲ್ಲಿ 634 ಪುರುಷರು, 46 ಮಹಿಳೆಯರು, ವೀಕ್ಷಕರ ಸಂಖ್ಯೆ 61. ಮಹಿಳೆಯರ ಸಂಖ್ಯೆ -9, ಕರ್ನಾಟಕದ 8 ಪ್ರತಿನಿಧಿಗಳು (ಇವರಲ್ಲಿ ಒಬ್ಬರು ಮಹಿಳೆ) ಹಾಗೂ 2 ವೀಕ್ಷಕರು ಭಾಗವಹಿಸಿದರು. ಅತೀ ಹೆಚ್ಚು ಪ್ರತಿನಿಧಿಗಳ ಸಂಖ್ಯೆ ಪಶ್ಚಿಮ ಬಂಗಾಳದ್ದು -163 ಪುರುಷರು ಮತ್ತು 12 ಮಹಿಳೆಯರು. ಕೇರಳದಿಂದ - 157 ಪುರುಷ ಹಾಗೂ 12 ಮಹಿಳಾ ಪ್ರತಿನಿಧಿಗಳು, ಅಂದರೆ ಒಟ್ಟು 169 ಪ್ರತಿನಿಧಿಗಳು ಬಂದಿದ್ದರು. ನಂತರದ ಸ್ಥಾನ ತಮಿಳುನಾಡಿನದ್ದು. ಇಲ್ಲಿಂದ 43 ಪುರುಷ ಪ್ರತಿನಿಧಿಗಳು ಹಾಗೂ 4 ಮಹಿಳಾ ಪ್ರತಿನಿಧಿಗಳು ಬಂದಿದ್ದರು. ನಾಲ್ಕನೇ ಸ್ಥಾನ ಆಂಧ್ರಪ್ರದೇಶದ್ದು. ಇಲ್ಲಿಯ ಪ್ರತಿನಿಧಿಗಳ ಸಂಖ್ಯೆ 35 - ಪುರುಷರು 32, ಮಹಿಳೆಯರು 3. ಐದನೇ ಸ್ಥಾನ ತ್ರಿಪುರಾದ್ದು - 25. ಇವರಲ್ಲಿ ಇಬ್ಬರು ಮಹಿಳಾ ಪ್ರತಿನಿಧಿಗಳು.

ಪ್ರತಿನಿಧಿಗಳ, ವೀಕ್ಷಕರ ವಯೋಮಾನ ವಿವರಣೆ ಹೀಗಿತ್ತು

	ಪ್ರತಿನಿಧಿಗಳು	ವೀಕ್ಷಕರು
30 ವರ್ಷಗಳ ವರೆಗೆ	2	1
31-40 ವರ್ಷ	57	15
41-50 ವರ್ಷ	219	17
51-60 ವರ್ಷ	190	12
61-70 ವರ್ಷ	140	15
71-80 ವರ್ಷ	59	1
80 ವರ್ಷಕ್ಕೆ ಮೇಲ್ಪಟ್ಟು	13	0

ಅತಿ ಹಿರಿಯ ಪ್ರತಿನಿಧಿ ಪಶ್ಚಿಮ ಬಂಗಾಳದ ಕಾಂ.ನಿರೇನ್ ಸೆನ್. ಅವರಿಗೆ 89 ವರ್ಷ. ಅತಿ ಕಿರಿಯ ಪ್ರತಿನಿಧಿ ತಮಿಳುನಾಡಿನ ಕಾಂ. ಎಸ್.ಕಣ್ಣನ್ - ವಯಸ್ಸು 28.

ಪ್ರತಿನಿಧಿಗಳ ಸರಾಸರಿ ವರ್ಷ 55, ವೀಕ್ಷಕರದ್ದು 50 ವರ್ಷ.

● ಪಕ್ಷಕ್ಕೆ ಸೇರಿದ ವರ್ಷ

	ಪ್ರತಿನಿಧಿಗಳು	ವೀಕ್ಷಕರು
1942 ರ ಮೊದಲು	28	0
1942-1946	33	1
1947-1963	167	8
1964-1969	133	10
1970-1976	181	12
1977-1982	102	13
1982 ರ ನಂತರ	34	17

ಒಟ್ಟು 741 ರಲ್ಲಿ 502 ಪ್ರತಿನಿಧಿಗಳು ಮತ್ತು ವೀಕ್ಷಕರು ಪಕ್ಷದ ವಿಭಜನೆಯ ನಂತರ ಸೇರಿದವರು. ಇವರಲ್ಲಿ 163 ಮಂದಿ ತುರ್ತು ಪರಿಸ್ಥಿತಿಯ ನಂತರ ಸೇರಿದವರು. ಸುರ್ಜಿತ್ ಹಾಗೂ ಎನ್.ಪ್ರಸಾದ್ ರಾವ್ 1934 ರಲ್ಲಿ ಪಕ್ಷಕ್ಕೆ ಸೇರಿದ್ದರೆ, ವೀಕ್ಷಕರಲ್ಲಿ ಆಂಧ್ರಪ್ರದೇಶದ ಶೇಷರೆಡ್ಡಿ 1946 ರಲ್ಲಿ ಪಕ್ಷ ಸೇರಿದವರು.

● ಜೈಲುವಾಸ

257 ಪ್ರತಿನಿಧಿ ಮತ್ತು ವೀಕ್ಷಕರು ಯಾವುದೇ ಜೈಲುವಾಸದ ಅನುಭವ ಹೊಂದದವರು. 1 ವರ್ಷಕ್ಕೂ ಹೆಚ್ಚಿನ ಜೈಲುವಾಸ ಅನುಭವಿಸಿದವರ ಸಂಖ್ಯೆ 185. ಗರಿಷ್ಟ ಜೈಲುವಾಸ ಅನುಭವಿಸಿದ ಪ್ರತಿನಿಧಿ ಆಂಧ್ರಪ್ರದೇಶದ ತೇಜೇಶ್ವರ ರಾವ್. ಇವರು 13 ವರ್ಷ 10 ತಿಂಗಳು 15 ದಿನಗಳ ಜೈಲುವಾಸ ಅನುಭವಿಸಿರುವರು. ವೀಕ್ಷಕರಲ್ಲಿ ಒರಿಸ್ಸಾದ ಭಿಷ್ಣು ಮೊಹಂತಿ 3 ವರ್ಷ 10 ತಿಂಗಳು ಜೈಲುವಾಸ ಅನುಭವಿಸಿದವರು.

● ಭೂಗತ ಜೀವನ

1 ವರ್ಷಕ್ಕಿಂತ ಹೆಚ್ಚು ಭೂಗತ ಜೀವನ ನಡೆಸಿದವರ ಸಂಖ್ಯೆ 187. ಯಾವುದೇ ಭೂಗತ ಜೀವನದ ಅನುಭವವಿಲ್ಲದವರ ಸಂಖ್ಯೆ 424. ಇತರ 130 ಮಂದಿ ಒಂದು ತಿಂಗಳಿಂದ ಒಂದು ವರ್ಷದ ವರೆಗಿನ ಭೂಗತ ಜೀವನ ನಡೆಸಿದವರು. ಕೇರಳದ ಪ್ರತಿನಿಧಿ ಪಿ.ಕೆ.ಚಂದ್ರನಂದನ್ ಅತಿಹೆಚ್ಚು ಅಂದರೆ 12 ವರ್ಷ 6 ತಿಂಗಳು ಭೂಗತ ಜೀವನ ನಡೆಸಿದವರು. ಮಣಿಪುರದ ವೀಕ್ಷಕ ಮೈತ್ರಾಯ್ ಶಾಮು 7 ವರ್ಷ ಭೂಗತರಾಗಿದ್ದವರು.

ಪ್ರತಿನಿಧಿ 593 ಹಾಗೂ ವೀಕ್ಷಕರಲ್ಲಿ 38 ಮಂದಿ ಪಕ್ಷದ ಪೂರ್ಣಾವಧಿ ಕಾರ್ಯಕರ್ತರು.

● ಮಹಾಧಿವೇಶನದಲ್ಲಿ ಭಾಗವಹಿಸುವಿಕೆ.

	ಪ್ರತಿನಿಧಿಗಳು	ವೀಕ್ಷಕರು
ಒಂದು ಬಾರಿ	113	33
ಎರಡು ಬಾರಿ	101	11
3 ಬಾರಿ	94	8
4 ಬಾರಿ	78	3
5 ಬಾರಿ	88	3
6 ಬಾರಿ	56	1
7 ಬಾರಿ	43	0
8 ಬಾರಿ	32	1
9 ಬಾರಿ	22	1
10 ಬಾರಿ	13	0
11 ಬಾರಿ	4	0
12 ಬಾರಿ	7	0
13 ಬಾರಿ	8	
14 ಬಾರಿ	6	0
15 ಬಾರಿ	7	0
16 ಬಾರಿ	1	0

ಪೊಲಿಟ್‌ಬ್ಯೂರೋ ಸದಸ್ಯ ಎಲ್.ಬಿ.ಗಂಗಾಧರ ರಾವ್ ಎಲ್ಲಾ 16 ಮಹಾಧಿವೇಶನಗಳಲ್ಲಿ ಭಾಗವಹಿಸಿದವರು.

● ವರ್ಗಮೂಲ

	ಪ್ರತಿನಿಧಿಗಳು	ವೀಕ್ಷಕರು
ಕಾರ್ಮಿಕ ವರ್ಗ	86	8
ಕೃಷಿಕೂಲಿಕಾರರು	30	2
ಬಡರೈತರು	89	6
ಮಧ್ಯಮವರ್ಗದ ರೈತರು	146	15
ಶ್ರೀಮಂತ ರೈತರು	29	1
ಜಮೀನ್ದಾರರು	28	2
ಬಂಡವಾಳಶಾಹಿ	2	0
ಮಧ್ಯಮವರ್ಗ	260	26
ಸಣ್ಣ ಬಂಡವಾಳಿಗರು(ವೃತ್ತಿಪರರು ಮತ್ತು ಸಂಬಳದಾರರನ್ನು ಬಿಟ್ಟು)	8	0

● ಪಕ್ಷಕ್ಕೆ ಪ್ರವೇಶ

	ಪ್ರತಿನಿಧಿಗಳು	ವೀಕ್ಷಕರು
ಕಾರ್ಮಿಕ ರಂಗ	118	15
ರೈತ ರಂಗ	95	5
ಕೃಷಿ ಕೂಲಿಕಾರ ರಂಗ	20	0
ಯುವರಂಗ	72	7
ವಿದ್ಯಾರ್ಥಿ ರಂಗ	294	22
ಮಹಿಳಾ ರಂಗ	16	5
ಸಾಂಸ್ಕೃತಿಕ ರಂಗ	11	1
ಇತರೆ	51	6

● ಈಗ ದುಡಿಯುತ್ತಿರುವ ರಂಗ

ಪಕ್ಷದ ಸಂಘಟನೆ	256	16
ಕಾರ್ಮಿಕ ಸಂಘಟನೆ	136	11
ರೈತ ಸಂಘಟನೆ	125	5
ಕೃಷಿಕೂಲಿಕಾರರ ಸಂಘಟನೆ	41	0
ಮಧ್ಯಮ ವರ್ಗದ ನೌಕರರು	14	4
ವಿದ್ಯಾರ್ಥಿ ಸಂಘಟನೆ	10	5
ಯುವಜನ ಸಂಘಟನೆ	24	3
ಮಹಿಳಾ ಸಂಘಟನೆ	33	7
ಸಾಂಸ್ಕೃತಿಕ ರಂಗ	8	1
ಇತರೆ	25	8

● ಸಾಮೂಹಿಕ ಸಂಘಗಳಲ್ಲಿ ಸ್ಥಾನಮಾನ

ಅಖಿಲ ಭಾರತ ಪದಾಧಿಕಾರಿಗಳು	105	13
ಅಖಿಲ ಭಾರತ ಸದಸ್ಯರು	173	16
ರಾಜ್ಯ ಮಟ್ಟದ ಸಮಿತಿ ಪದಾಧಿಕಾರಿಗಳು	99	11
ರಾಜ್ಯ ಮಟ್ಟದ ಸಮಿತಿ ಸದಸ್ಯರು	96	6
ಜಿಲ್ಲಾ ಮಟ್ಟದ ಸಮಿತಿ ಪದಾಧಿಕಾರಿಗಳು	67	0
ಜಿಲ್ಲಾ ಮಟ್ಟದ ಸಮಿತಿ ಸದಸ್ಯರು	34	1
ಇತರೆ	29	9

● ಶಿಕ್ಷಣ

ಶಾಲೆಗೆ ಹೋಗದವರು	3	1
ಪ್ರಾಥಮಿಕ ಶಿಕ್ಷಣ	20	1
ಮಾಧ್ಯಮಿಕ ಶಿಕ್ಷಣ	42	1
ಪ್ರೌಢಶಿಕ್ಷಣ	117	9
ಪದವಿಪೂರ್ವ/ಐಟಿಐ/ಡಿಪ್ಲೊಮಾ	109	8
ಪದವಿ	233	20
ಸ್ನಾತಕೋತ್ತರ	155	21

● ಚುನಾಯಿತ ಸ್ಥಾನಮಾನ

ಸಂಸದರು	32	1
ಶಾಸಕರು	47	0
ಮಂತ್ರಿಗಳು	30	0
ನಗರಪಾಲಿಕೆ/ಸಭೆ ಸದಸ್ಯರು	10	0
ಜಿಲ್ಲಾ ಪರಿಷತ್‌ಸದಸ್ಯರು	22	0
ಪಂಚಾಯತ್ ಸದಸ್ಯರು	8	0
ಇತರೆ	20	1



ಸುರ್ಜಿತ್ ಸಾಬ್ .... ಇ[illegible]ಸ್ತ್ತೆ ಏನು ನಡೆಯಿತು?

16ನೇ ಮಹಾಧಿವೇಶನ ನಡೆಯುತ್ತಿದ್ದ ಸಭಾಂಗಣದ ಪಕ್ಕದಲ್ಲೇ ಮೀಡಿಯಾ ಸೆಂಟರ್(ಮಾಧ್ಯಮ ಕೇಂದ್ರ). ಅಲ್ಲಿ ಮಧ್ಯಾಹ್ನ ಎರಡು ಎರಡುವರೆ ಆಗುತ್ತಿದ್ದಂತೆ ಗಿಜಿಗಿಜಿ ಜನ. ದೊಡ್ಡ, ದೊಡ್ಡ, ಉದ್ದದ ಲೆನ್ಸ್‌ಗಳ ಭಾರಿ ಕ್ಯಾಮರಾ ಫ್ಲಾಷ್ ಹೊತ್ತು ಭಾರದಿಂದ ಜಗ್ಗುತ್ತಿದ್ದರೂ ಓಡಾಡುವ ಫೋಟೋಗ್ರಾಫರುಗಳು. ಭಾರ ಹೊರಲಾರದೆ ಆಯಕಟ್ಟಿನ ಜಾಗದಲ್ಲಿ ಸ್ಟಾಂಡ್ ಮೇಲೆ ಕ್ಯಾಮೆರಾ ಇಟ್ಟು ಉಸಿರು ಬಿಡುತ್ತಿರುವ ವಿಡಿಯೋಗ್ರಾಫರ್‌ಗಳು. ಅಲ್ಲಲ್ಲಿ ಗುಂಪು ಗುಂಪಾಗಿ ನಿಂತು ಬೀಡಿ ಸಿಗರೇಟು ಸೇದುತ್ತಾ ಅಕ್ಟೋಬರನಲ್ಲೂ ಕಲ್ಕತ್ತಾದ ಬಿಸಿ ತಾಳಲಾರದೆ ಏನೂ ಕೆಲಸ ಮಾಡದೆ ಬೆವರು ಸುರಿಸುತ್ತಿರುವ ವರದಿಗಾರ ವರದಿಗಾರ್ತಿಯರು. ಎಲ್ಲರೂ ಏನನ್ನೋ ನಿರೀಕ್ಷಿಸುತ್ತಿದ್ದಾರೆ.

ಮೂರು ಗಂಟೆ, ಅದೋ ಬಂದರು! 80ರ ಹರೆಯದ ಸರ್ದಾರ್‌ಜಿಯೊಬ್ಬರು ದಾಪುಗಾಲು ಹಾಕಿಕೊಂಡು ಬರುತ್ತಿದ್ದಾರೆ. ಅವರು ಸಭಾಂಗಣದ ವೇದಿಕೆಯ ಮೇಲೆ ಹೋಗುತ್ತಿದ್ದಂತೆ ಫೋಟೋಗ್ರಾಫರುಗಳು, ವಿಡಿಯೋಗ್ರಾಫರುಗಳ ನೂಕು ನುಗ್ಗಲು- ಆಯಕಟ್ಟಿನ ಜಾಗ ಹಿಡಿಯಲು. ಆಯಕಟ್ಟಿನ ಜಾಗಕ್ಕೆ ಕೈ ಕೈ ಮಿಲಾಯಿಸುವುದೂ ಇದೆ. ಕ್ಯಾಮರಾದ ಉದ್ದನೆಯ 'ಝೂಮ್ ಲೆನ್ಸ್'ಗಳಿಂದ ಮುಂದಿನವನ ತಲೆ ಸರಿಸುವ ಹೊಂಚು. ವರದಿಗಾರ-ಗಾರ್ತಿಯರು ಮುಂದಿನ ಸಾಲಿನ ಕುರ್ಚಿಗಳನ್ನು ಹಿಡಿಯಲು ನುಗ್ಗಿದರು. ಇದು ಸಿಪಿಐ(ಎಂ) ಮಹಾಧಿವೇಶನ ನಡೆಯು ತ್ತಿದ್ದ ಎಲ್ಲಾ ದಿನಗಳಲ್ಲೂ ಮೀಡಿಯಾ ಸೆಂಟರಿನ ಪತ್ರಿಕಾ ಸಮ್ಮೇಳನ ನಡೆಯುವ ಸಭಾಂಗಣದಲ್ಲಿನ ದೃಶ್ಯ. ಕೆಲವು ದಿನ ರಾತ್ರಿ 8 ಗಂಟೆಗೆ ವಿಶೇಷ ಪತ್ರಿಕಾ ಸಮ್ಮೇಳನ.

ಸುರ್ಜಿತ್ ಬರುತ್ತಿದ್ದಂತೆ ಮಹಾಧಿವೇಶನದಲ್ಲಿ ಹಿಂದಿನ ದಿನದ ಊಟದ ನಂತರದ ಅಧಿವೇಶನ ಹಾಗೂ ಅಂದಿನ ಬೆಳಗ್ಗಿನ ಅಧಿವೇಶನದ ಆಗುಹೋಗುಗಳ ಬಗ್ಗೆ ಪತ್ರಿಕಾ ಹೇಳಿಕೆಯ ಹಂಚುವಿಕೆ. ಪತ್ರಿಕಾ ಹೇಳಿಕೆಯನ್ನು ವಿಸ್ತರಿಸಿ ಸುರ್ಜಿತ್ ವಿವರಣೆ-ಮಹಾಧಿವೇಶನದ ಆಗುಹೋಗುಗಳ ಬಗ್ಗೆ.

ಸುರ್ಜಿತ್ ವಿವರಣೆ ಮುಗಿಸುತ್ತಿದ್ದಂತೆ-ತಗೋ! ಪ್ರಶ್ನೆಗಳ ಸುರಿಮಳೆ. ತನ್ನ ಪ್ರಶ್ನೆ ಮೊದಲು ಕೇಳಲು ವರದಿಗಾರ-ಗಾರ್ತಿಯರು ನಡುವೆ ದೊಡ್ಡ ಧ್ವನಿಯ ಮೇಲಾಟ. ಫ್ಲಾಶ್‌ಗಳ ಬೆಳಕು, ಗೋಣು ಆಡಿಸಲು ಆರಂಭಿಸುವ ವಿಡಿಯೋ ಕ್ಯಾಮರಾಗಳು. ಎಲ್ಲಾ ದಿನಗಳೂ ಪತ್ರಿಕಾ ಸಮ್ಮೇಳನದ ಸಭಾಂಗಣ ಕಿಕ್ಕಿರಿದು ತುಂಬಿರುತ್ತಿತ್ತು. ದೇಶದ ಎಲ್ಲಾ ಪ್ರಮುಖ ಇಂಗ್ಲಿಷ್ ಪತ್ರಿಕೆಗಳ, ಟಿವಿ ಚಾನೆಲುಗಳ, ಭಾರತೀಯ ಭಾಷಾ ಪತ್ರಿಕೆಗಳ ವರದಿಗಾರರು ಇದ್ದರು. ಬಿಬಿಸಿ, ಈನಾಡು, ದೂರದರ್ಶನ ಎನ್.ಡಿ.ಟಿವಿ.ಯ ಟಿವಿ ಪತ್ರಕರ್ತರೂ ಹಿಂದೆ ಬೀಳಲಿಲ್ಲ.

ಸಿಪಿಐ(ಎಂ)ನ 16 ನೇ ಮಹಾಧಿವೇಶನ ಬಿಜೆಪಿ ಸರ್ಕಾರ 'ಅದೋ ಬಿತ್ತು' 'ಇದೋಬಿತ್ತು' ಎಂಬ ಸನ್ನಿವೇಶದಲ್ಲಿ ಭಾರಿ ನಿರೀಕ್ಷೆ, ಕುತೂಹಲ ಕೆರಳಿಸಿತ್ತು. ಮಹಾಧಿವೇಶನ ನಡೆಯುತ್ತಿದ್ದ ಎಲ್ಲಾ ದಿನವೂ ಹೆಚ್ಚಿನ ಪತ್ರಿಕೆಗಳಲ್ಲಿ ಪ್ರಮುಖ ಸುದ್ದಿಯಾಗುತ್ತಿತ್ತು. ಇದಕ್ಕೆಲ್ಲ ಮೂಲ ಸುರ್ಜಿತ್‌ರ ಪತ್ರಿಕಾ ಸಮ್ಮೇಳನ. ಇದು **ಸಿಪಿಐ(ಎಂ) ರಾಷ್ಟ್ರೀಯ ರಾಜಕಾರಣದಲ್ಲಿ ಮಧ್ಯಪ್ರವೇಶ, ನೀತಿಬದ್ಧ ನಿಲುವಿನಿಂದ ವಿಸ್ತರಿಸುತ್ತಿರುವ ಜನಬೆಂಬಲದಿಂದ ಗಳಿಸಿರುವ ಅಗಾಧ ಪ್ರತಿಷ್ಠೆಯ ಪ್ರತೀಕ** ವಾಗಿತ್ತು. ಬಿಜೆಪಿಯ ಕೋಮುವಾದಿ ಫ್ಯಾಸಿಸ್ಟ್ ಬೆದರಿಕೆಯ ಹಿನ್ನೆಲೆಯಲ್ಲಿ ಸಿಪಿಐ(ಎಂ)ನ ಮುಂದಿನ ರಾಜಕೀಯ ನಿಲುವೇನು? ಕಾಂಗ್ರೆಸ್ ಬಗ್ಗೆ ಅದರ ನಿಲುವೇನು? ಎಂದೆಲ್ಲಾ ಪ್ರಶ್ನೆ ಇಡೀ ದೇಶದ ಆಸಕ್ತಿ ಕೆರಳಿಸಿದ್ದು ಪ್ರಶ್ನೆಗಳಲ್ಲಿ ವ್ಯಕ್ತವಾಗುತ್ತಿತ್ತು. ಮಾತ್ರವಲ್ಲ ಈಗಾಗಲೇ ಅಲುಗಾಡುತ್ತಿರುವ ಬಿಜೆಪಿ ಸರ್ಕಾರದ ಅಸ್ಥಿರತೆಯಿಂದ ಹೆದರಿದ ಗುತ್ತೇದಾರಿ ಬಂಡವಾಳಶಾಹಿಯ ಪತ್ರಿಕಾ ಮಾಲಿಕರ ಆತಂಕವೂ ಇತ್ತು. ಸಂಯುಕ್ತ ರಂಗ ಸರ್ಕಾರದಲ್ಲಿ ಮೇ 96 ರಲ್ಲಿ ಸಿಪಿಐ(ಎಂ) ಕೇಂದ್ರ ಸಮಿತಿಯ ಭಾಗವಹಿಸದಿರುವ ಬಗೆಗಿನ ನಿರ್ಣಯ ವರದಿಗಾರರ ಕುತೂಹಲ ಕೆರಳಿಸಿದ ಇನ್ನೊಂದು ವಿಷಯವಾಗಿತ್ತು. ಆ ಬಗ್ಗೆ ಮಹಾಧಿವೇಶನ ಚರ್ಚೆ ನಡೆಸಿದ ದಿನ ಹಾಗೂ ಅದಕ್ಕೆ ಮೊದಲು ರಾಜಕೀಯ ನಿರ್ಣಯವನ್ನು ಅಂಗೀಕರಿಸಲಿದ್ದ ದಿನ ವರದಿಗಾರರ ಕುತೂಹಲ ತಾರಕಕ್ಕೇರಿತ್ತು. ಈ ಬಗೆಗಿನ ಪ್ರಶ್ನೆಯಲ್ಲೂ ಸಿಪಿಐ(ಎಂ) ನಿಲುವಿನ ಬಗ್ಗೆ ದೇಶದ ಜನತೆಯ ಆಸಕ್ತಿ, ಮುಂದಿನ ಸರ್ಕಾರಗಳಲ್ಲಿ ಸಿಪಿಐ(ಎಂ)ನ ಪಾತ್ರದ ಪರಿಣಾಮಗಳ ಬಗ್ಗೆ ಗುತ್ತೇದಾರಿ ಬಂಡವಾಳಶಾಹಿ ಆತಂಕ ಎರಡೂ ಕಾಣುತ್ತಿತ್ತು. ಇದರ ನಂತರ ವರದಿಗಾರ ಪ್ರಶ್ನೆಗೆ ಗ್ರಾಸವಾದದ್ದು ಕೇರಳ, ಪಶ್ಚಿಮ ಬಂಗಾಳಗಳಲ್ಲಿನ ಸಿಪಿಐ(ಎಂ)ನ ಸಂಘಟನಾ ಸಮಸ್ಯೆಗಳು. ಇವೆಲ್ಲದರಲ್ಲೂ ಸಿಪಿಐ(ಎಂ)ನ ನಿಲುವು, ಆಂತರಿಕ ಭಿನ್ನಾಭಿಪ್ರಾಯಗಳ ಬಗ್ಗೆ ಸುರ್ಜಿತ್ ಬಿಚ್ಚುಮನಸ್ಸಿನಿಂದ ಸ್ಪಷ್ಟವಾಗಿ ವಿವರಿಸುತ್ತಿದ್ದರು. ಹಲವು ಪತ್ರಿಕೆಗಳು ತಿರುಚು ವಿಕೆ, ಉತ್ಪ್ರೇಕ್ಷೆ ಸಾರಾಸಗಟು ಸುಳ್ಳನ್ನು ತಮ್ಮ ಪತ್ರಿಕೆಗಳ ತುಂಬಾ ಹರಿಯಬಿಡುತ್ತಿದ್ದುದನ್ನೂ ಗೇಲಿ ಮಾಡುತ್ತಲೇ ಸುರ್ಜಿತ್ ಅವರೆಲ್ಲರ ಬಾಯಿ ಮುಚ್ಚಿಸುತ್ತಿದ್ದರು.

ತಮ್ಮ ಮಾಲೀಕರ ಆತಂಕಗಳನ್ನು, ಕಮ್ಯುನಿಸ್ಟ್ ವಿರೋಧಿ ನಿಲುವನ್ನು ಬಿಂಬಿಸುವ ವರದಿಗಾರರ ಕಿಡಿಗೇಡಿತನದ ಪ್ರಶ್ನೆಗಳನ್ನು ಸುರ್ಜಿತ್ ಲೀಲಾಜಾಲವಾಗಿ ಎದುರಿಸುತ್ತಿದ್ದರು. ಉತ್ತಮ ಪ್ರಶ್ನೆಗಳಿಗೆ ಬಿಚ್ಚುಮನಸ್ಸಿನ ಸ್ಪಷ್ಟ ಉತ್ತರ ಕೊಡುತ್ತಿದ್ದರು. ಹಿಂದೀ ರಾಜ್ಯಗಳಲ್ಲಿ ಪಾರ್ಟಿಯ ದೌರ್ಬಲ್ಯಗಳು, ಪಾರ್ಟಿಯೊಳಗೆ ನುಗ್ಗುತ್ತಿರುವ ಬೂರ್ಜ್ವಾ ವಿಕೃತಿಗಳು, ಅವುಗಳನ್ನು ಸರಿಪಡಿಸುವ ಆಂತರಿಕ ಚಳುವಳಿ, ಸಾಮೂಹಿಕ ಸಂಘಟನೆಗಳ ಸಂಖ್ಯಾ ಬಲದಲ್ಲಿ ಏರುಪೇರು, ಪಾರ್ಟಿ ಕಾಯಕ್ರಮವನ್ನು ಸಮಯ ಬದ್ಧಗೊಳಿಸುವ ಬಗ್ಗೆ ಕೇಳಿದ ಪ್ರಶ್ನೆಗಳಿಗೆ ಅವರ ಉತ್ತರ ನೇರವಾಗಿರುತ್ತಿದ್ದವು.



ಫಸ್ಟ್ ಪೇಜ್‌ನಲ್ಲಿ ಏನು ಹಾಕೋಣ.... ಕಾಮ್ರೇಡ್?

ಮೀಡಿಯಾ ಸೆಂಟರ್ ಪತ್ರಿಕಾ ಸಮ್ಮೇಳನದ ತಾಣ ಮಾತ್ರವಲ್ಲ. ಸಿಪಿಐ(ಎಂ)ನ 16 ನೇ ಮಹಾಧಿವೇಶನ ತಮ್ಮ ಪತ್ರಿಕೆಗಳಿಗೆ 'ಕವರ್' ಮಾಡಲು ಬಂದಿದ್ದ ವರದಿಗಾರರಿಗೆ ತಮ್ಮ ವರದಿಗಳನ್ನು ಕಳಿಸಲು ಅಗತ್ಯವಾದ ಸಂಪರ್ಕ ವ್ಯವಸ್ಥೆಯ ಕೇಂದ್ರವೂ ಆಗಿತ್ತು. ಮೀಡಿಯಾ ಸೆಂಟರಿನಲ್ಲಿ ಫೋನು, ಫ್ಯಾಕ್ಸ್, ಅಲ್ಲದೆ ಈ ಬಾರಿ ಇ-ಮೈಲ್, ಇಂಟರ್‌ನೆಟ್ ಸಂಪರ್ಕವನ್ನೂ ಕಲ್ಪಿಸಲಾಗಿತ್ತು. ಇದಲ್ಲದೆ ಕಂಪ್ಯೂಟರ್‌ಗಳು, ಟೈಪರೈಟರುಗಳು, ಟೆಲಿಪ್ರಿಂಟರ್‌ಗಳ ವ್ಯವಸ್ಥೆ ಮಾಡಲಾಗಿತ್ತು. ಪತ್ರಿಕೆಗಳು ತಮ್ಮ ಉಪಕರಣಗಳನ್ನು ತಂದು ಅಲ್ಲಿ ಉಪಯೋಗಿಸಲೂ ಸುಸಜ್ಜಿತ ವ್ಯವಸ್ಥೆ ಇತ್ತು.


ಪಾರ್ಟಿ ಪತ್ರಿಕೆಗಳಂತೂ ತಮ್ಮ ಪ್ರತಿನಿಧಿಗಳನ್ನು ಕಳಿಸಿ ಅಲ್ಲಿ ಟೆಂಟ್ ಹಾಕಿದವು. ಇಡೀ ಮಿಡಿಯಾ ಸೆಂಟರಿನ ವ್ಯವಸ್ಥೆಯನ್ನು 'ಗಣಶಕ್ತಿ' (ಸಿಪಿಐ(ಎಂ) ಬಂಗಾಳಿ ದೈನಿಕ)ಯ ಉತ್ಸಾಹಿ ಯುವ ಪತ್ರಕರ್ತರ ಸ್ವಯಂಸೇವಕರ ತಂಡ ನೋಡಿಕೊಳ್ಳುತ್ತಿತ್ತು.

ಪಾರ್ಟಿಯ ದೈನಿಕಗಳಂತೂ ಮೀಡಿಯಾ ಸೆಂಟರನ್ನು ತಮ್ಮ 'ಸೆಂಟರ್' ಮಾಡಿಕೊಂಡಿದ್ದವು. ದೇಶಾಭಿಮಾನಿ (ಪಾರ್ಟಿಯ ಮಲಯಾಳಂ ದೈನಿಕ) ಮತ್ತು ಪ್ರಜಾಶಕ್ತಿ (ಪಾರ್ಟಿಯ ತೆಲುಗು ದೈನಿಕ) ಸಂಗಾತಿಗಳಂತೂ ತಮ್ಮ ಕಂಪೂಟರ್ ಸ್ಕ್ಯಾನರ್‌ಗಳನ್ನೆಲ್ಲಾ ಹೊತ್ತು ತಂದಿದ್ದರು. ಈ ದಿನಗಳಲ್ಲಿ ಮುಖಪುಟದ ಹಲವು ಕಾಲಂಗಳು, ಮತ್ತು ಒಂದು ಮಹಾಧಿವೇಶನಕ್ಕೆ ಮೀಸಲಿಟ್ಟ ಒಂದು ಒಳಪುಟವನ್ನು ಅಲ್ಲೇ 'ಕಂಪೋಜ್' ಮಾಡಿ 'ಇ-ಮೈಲ್' ಮೂಲಕ ತಮ್ಮ ಮುಖ್ಯ ಕಛೇರಿಗೆ ಕಳಿಸುತ್ತಿದ್ದರು. ಈ ದೈನಿಕಗಳ ಪತ್ರಕರ್ತ ಸಂಗಾತಿಗಳಲ್ಲದೆ, ಸಂಪಾದಕೀಯ ಸಭೆ ಪ್ರತಿದಿನ ಊಟದ ವಿರಾಮದ ವೇಳೆಗೆ ನಡೆಯುತ್ತಿತ್ತು. ಇದರಲ್ಲಿ ಪತ್ರಿಕೆಯಲ್ಲಿ ಪ್ರಮುಖ ಜವಾಬ್ದಾರಿ ಹೊತ್ತ ಮಹಾಧಿವೇಶನದ ಪ್ರತಿನಿಧಿ, ವೀಕ್ಷಕ ಸಂಗಾತಿಗಳೂ ಭಾಗವಹಿಸುತ್ತಿದ್ದರು. ಮರುದಿನ ಮಹಾಧಿವೇಶನದ ಯಾವ ವಿಷಯ ಬರಬೇಕು, ಎಲ್ಲಿ ಬರಬೇಕು, ಯಾವುದು ಮುಖಪುಟದಲ್ಲಿ, ಯಾವುದು ಒಳಪುಟಗಳಲ್ಲಿ ಎಂದೆಲ್ಲಾ ವಿವರವಾಗಿ ಚರ್ಚಿಸುತ್ತಿದ್ದರು. ಫೋಟೋಗಳನ್ನು ಆಯ್ಕೆ ಮಾಡುತ್ತಿದ್ದರು.

'ತೀಕದೀರ್' (ತಮಿಳು), ದೇಶೇರ್ ಕಥಾ (ತ್ರಿಪುರಾ) ಹಾಗೂ ಪಂಜಾಬ್ ದೈನಿಕ, 'ಐಕ್ಯರಂಗ' ವರದಿಗಾರರು ಫೊಟೋಗ್ರಾಫರುಗಳೂ ಬಂದಿದ್ದು, ಸೆಂಟರಿನ ವ್ಯವಸ್ಥೆಯನ್ನು ಬಳಸುತ್ತಿದ್ದರು. ಅಲ್ಲದೆ ಪಾರ್ಟಿಯ ವಿವಿಧ ಪತ್ರಿಕೆಗಳ ನಡುವೆ ವರದಿ ಫೋಟೊಗಳ ವಿನಿಮಯ ಸಹಕಾರ ನಡೆದು ಪಾರ್ಟಿಯ ಒಟ್ಟಾರೆ ಪ್ರಚಾರ ಪ್ರಕ್ರೋಬೆಗೆ ಲಾಭಕಾರಿಯಾಗಿತ್ತು. ಅಲ್ಲದೆ ಅಲ್ಲಿಗೆ ಬಂದಿದ್ದ ಪಾರ್ಟಿ ಸಂಗಾತಿಗಳು ಉತ್ತಮ ಗೆಳೆಯರು ಆದರೂ.

ಒಟ್ಟಾರೆಯಾಗಿ ಆಧುನಿಕ ಪತ್ರಿಕಾ, ಸಂಪರ್ಕ ತಂತ್ರಜ್ಞಾನವನ್ನು ದುಡಿಯುವ ಜನರ ನಿಲುವುಗಳ ಪ್ರಚಾರ-ಪ್ರಕ್ರೋಬೆಗೆ ಅಸ್ತ್ರವಾಗಿ ಮಾಡುವುದರಲ್ಲಿ ಸಾಧಿಸಿದ ಪ್ರಗತಿ ಗಮನಾರ್ಹವಾಗಿತ್ತು. ಸ್ಫೂರ್ತಿ ದಾಯಕವಾಗಿತ್ತು. ಪಾರ್ಟಿ ಕೇಂದ್ರದ ವೆಬ್‌ಸೈಟ್ ಅಲ್ಲದೆ, 'ದೇಶಾಭಿಮಾನಿ' ವೆಬ್‌ಸೈಟ್ ಸ್ಥಾಪಿಸಿದ್ದು 'ಗಣಶಕ್ತಿ' ತಿಂಗಳೊಳಗೆ 'ವೆಬ್‌ಸೈಟ್' ಸ್ಥಾಪಿಸಲು ಸಿದ್ಧತೆನಡೆಸಿದೆ. ಇದರಿಂದ ಪಕ್ಷದ ಕೇಂದ್ರ ಮತ್ತು ಎಲ್ಲಾ ಪತ್ರಿಕೆಗಳು ರಾಜ್ಯ ಕೇಂದ್ರಗಳ ನಡುವೆ ವೇಗದ ಸಂಪರ್ಕ ಸಾಧ್ಯವಾಗಲಿದೆ.

ಮೀಡಿಯಾ ಸೆಂಟರ್‌ನಲ್ಲಿ ಇ.ಕೆ.ನಾಯನಾರ್




ಮೆರವಣಿಗೆಗಳ ನಗರ-ಸಂಸ್ಕೃತಿ, ವಿಚಾರಸಂಕಿರಣಗಳ ನಗರ

ಕಲ್ಕತ್ತಾ ಮೆರವಣಿಗೆಗಳ ನಗರ ಎಂದು ಹೇಳಲಾಗುತ್ತದೆ. ಅದು ನಿಜವೇ. ಆದರೆ ಹದಿನಾರನೇ ಸಿ.ಪಿ.ಐ.(ಎಂ) ಮಹಾಧಿವೇಶನ ನಡೆದ ಒಂದು ವಾರವಿಡೀ ಅದು ವಿಚಾರ ಸಂಕಿರಣಗಳ, ಸಾಂಸ್ಕೃತಿಕ ಕಾರ್ಯಕ್ರಮಗಳ ನಗರವೂ ಆಯಿತು.

ಮಣಿಪುರಿ ನೃತ್ಯ ಭಾರತದ ನೃತ್ಯ ಪ್ರಕಾರಗಳಲ್ಲಿ ಒಂದೆಂದು ನಮಗೆ ತಿಳಿದಿದೆ. ಆದರೆ ಈ ನೃತ್ಯ ಒಬ್ಬ ಕ್ರಾಂತಿಕಾರಿಯ ಜೀವನವನ್ನು ಬಿಂಬಿಸಬಲ್ಲದು ಎಂದು ನೀವು ಊಹಿಸಬಲ್ಲಿರಾ? ಸಿಲ್ಚಾರ್‌ನ 'ಇಪ್ಟಾ' ತಂಡ ಮಣಿಪುರದ ಮಹಾನ್ ಕ್ರಾಂತಿಕಾರಿ ಇರಾಬತ್ ಸಿಂಗ್‌ರ ಜೀವನವನ್ನು ಮಣಿಪುರಿ ನೃತ್ಯಶೈಲಿಯಲ್ಲಿ ಪ್ರಸ್ತುತಪಡಿಸಿತು. ಮಣಿಪುರ ಜಾನಪದ ನೃತ್ಯವನ್ನೂ, ಅಲ್ಲಿಯ ಸಾಮರಿಕ ಕಲೆ ಧಮ್ಮೈಲನ್ನೂ ಬಳಸಿಕೊಳ್ಳಲಾಯಿತು. ಅದೇ ರೀತಿ ಬುಟ್ಟಿ, ಮಣ್ಣಿನ ಮಡಿಕೆಗಳನ್ನು ಹೊತ್ತು ಎಲೆ, ಹೂವುಗಳು ಹಾಗೂ ನವಿಲುಗರಿಗಳಿಂದ ಸಜ್ಜಿತ ಸಂಥಾಲ್ ನೃತ್ಯಗಾರರು ಮಹಾಧಿವೇಶನವನ್ನು ಅಭಿನಂದಿಸಿದರು.

ರಿನ್ ನಾವಿಕರ ಬಂಡಾಯದ ಕುರಿತಾದ 'ಕಲ್ಲೋಲ್' ನಾಟಕದ ದೃಶ್ಯ



ಬಂಗಾಳೀ ಸಾಂಸ್ಕೃತಿಕ ಕಾರ್ಯಕ್ರಮಗಳಂತೂ ಹತ್ತು ಹಲವು. ಇವುಗಳಲ್ಲಿ ಅತ್ಯಂತ ಗಮನ ಸೆಳೆದದ್ದು 'ಕಲ್ಲೋಲ್' ಎಂಬು ನಾಟಕ. ಮೊದಲಿಗೆ ಇದನ್ನು ಬರೆದು, ನಿರ್ದೇಶಿಸಿ ಪ್ರಸ್ತುತ ಪಡಿಸಿದ್ದವರು ದಿವಂಗತ ಉತ್ಪಲ್ ದತ್. 60ರ ದಶಕದಲ್ಲಿ ಇದು ಮೊದಲ ಬಾರಿಗೆ ಪ್ರದರ್ಶನಗೊಂಡಾಗ ಅವರು ಸರಕಾರದಿಂದ ಮತ್ತು ಅಮೃತ್ ಬಜಾರ್ ಪತ್ರಿಕೆಯಂತಹ ಬೂರ್ಜ್ವಾ ಪತ್ರಿಕೆಗಳಿಂದ ಭಾರೀ ದಮನವನ್ನು ಎದುರಿಸಬೇಕಾಗಿ ಬಂದಿತ್ತು. ಜೈಲಿಗೂ ಹೋಗಬೇಕಾಗಿತ್ತು. ಮುಂಬೈಯ ರಿನ್ ನಾವಿಕ ಮುಷ್ಕರವನ್ನು ಆಧರಿಸಿದ ಈ ನಾಟಕ ನಮ್ಮ ರಾಷ್ಟ್ರೀಯ ಮುಖಂಡರು ಸಾಮ್ರಾಜ್ಯಶಾಹಿ ಯೊಂದಿಗೆ ರಾಜಿ ಮಾಡಿಕೊಂಡಿದ್ದು, ತದ್ವಿರುದ್ಧವಾಗಿ ಸಾಮಾನ್ಯ ನಾವಿಕರು ಸಾಮ್ರಾಜ್ಯಶಾಹಿಯ ವಿರುದ್ಧ ಯಾವ ರಾಜಿಗೂ ಎಡೆಯಿಲ್ಲದ ಸಾಮ್ರಾಜ್ಯಶಾಹಿ- ವಿರೋಧಿ ಭಾವನೆಗಳನ್ನು ವ್ಯಕ್ತಪಡಿಸಿದ್ದನ್ನು ಈ ಬಿಂಬಿಸುತ್ತದೆ. ಯುದ್ಧ ಹಡಗನ್ನಾಗಲೀ, ಮುಂಬೈಯ ಕೊಳೆಗೇರಿಯನ್ನಾಗಲೀ ಅತ್ಯಂತ ನೈಜ ರೀತಿಯಲ್ಲಿ ತೋರಿಸುವ ವಿವರವಾದ ಸೆಟ್‌ಗಳಿದ್ದ ಈ ನಾಟಕದಲ್ಲಿ ನಾವಿಕರು ಹಡಗಿನ ಧ್ವಜಸ್ತಂಭದಲ್ಲಿ ಕೆಂಬಾವುಟ ಏರಿಸಿದಾಗ ಸಭಾಂಗಣ ಪ್ರೇಕ್ಷಕರ ಚಪ್ಪಾಳೆಯಿಂದ ತುಂಬಿ ಹೋಯಿತು.



ಸುನೀಲ್ ಮೈತ್ರ ನಗರದ ಮಂಟಪದಲ್ಲಿ ನಡೆಯುತ್ತಿದ್ದ ವಿಚಾರ ಸಂಕಿರಣಗಳಲ್ಲಿ ಇದು ಪ್ರತಿದಿನದ ದೃಶ್ಯವಾಗಿತ್ತು.

ವಿಚಾರ ಸಂಕಿರಣಗಳು

ಸಾಂಸ್ಕೃತಿಕ ಕಾರ್ಯಕ್ರಮಗಳಂತೆ ವಿಚಾರ ಸಂಕಿರಣಗಳೂ ಅಪಾರ ಸಂಖ್ಯೆಯಲ್ಲಿ ಜನಗಳನ್ನು ಆಕರ್ಷಿಸಿದ್ದವು. ಸುಮಾರು ಒಂದು ಸಾವಿರಕ್ಕೂ ಹೆಚ್ಚು ಪ್ರೇಕ್ಷಕರಿಗೆ ಸ್ಥಳಾ ವಕಾಶವಿದ್ದು ಸಭೆ ಸದಾ ಕಿಕ್ಕಿರಿದು ತುಂಬಿ ರುತ್ತಿತ್ತು. ಸರಾಸರಿ 2000 ಜನಗಳು ಪ್ರತಿದಿನ ಇದರಲ್ಲಿ ಭಾಗವಹಿಸಿದ್ದರೆಂದು ಅಂದಾಜು.

ಪ್ರಖ್ಯಾತ ಭಾಷಾ ತಜ್ಞ ಡಾ|| ಸುಕುಮಾರಿ ಭಟ್ಟಾಚಾರ್ಯ 'ಹಿಂದೂ' ಎಂದರೆ ಏನೆಂದು ನಿರ್ವಚಿಸುವಾಗ

ಪುಟ 10 ಕ್ಕೆ

ವಿದೇಶಿ ಸೌಹಾರ್ದ ಪ್ರತಿನಿಧಿಗಳು 16ನೇ ಮಹಾಧಿವೇಶನದಲ್ಲಿ

'ಜಾಗತೀಕರಣವನ್ನು ನವ ಉದಾರೀಕರಣವನ್ನು ವಿರೋಧಿಸೋಣ! ಜಗತ್ತಿನ ಕಾರ್ಮಿಕರೇ ಒಂದಾಗಿ!



ಚೆ ಗುವಾರ ಅವರ ಭಾವಚಿತ್ರ ಹಾಗೂ ತಮ್ಮ ದೇಶದ ಹೆಮ್ಮೆಯ ಬಾವುಟವನ್ನು ನೆನಪಿನ ಕಾಣಿಕೆಯಾಗಿ ಸುರ್ಜಿತ್‌ರವರಿಗೆ ಸಲ್ಲಿಸುತ್ತಿರುವ ಕ್ಯೂಬಾ ಪಕ್ಷದ ಪ್ರತಿನಿಧಿಗಳು

ಸಿಪಿಐ(ಎಂ)ನ 16ನೇ ಮಹಾಧಿವೇಶನಕ್ಕೆ ಹಿಂದಿನ ಮಹಾಧಿವೇಶನಗಳಿಗೆ ಹೋಲಿಸಿದರೆ ಅತ್ಯಂತ ಹೆಚ್ಚು ದೇಶಗಳ ಕಮ್ಯುನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳಿಂದ ಸೌಹಾರ್ದ ಪ್ರತಿನಿಧಿಗಳು ಬಂದಿದ್ದರು. 25 ಪಕ್ಷಗಳನ್ನು ಮಹಾಧಿವೇಶನಕ್ಕೆ ಆಹ್ವಾನಿಸಲಾಗಿತ್ತು. ಇದರಲ್ಲಿ ಹೆಚ್ಚಿನ ಪಕ್ಷಗಳ ಪ್ರತಿನಿಧಿಗಳು ಮಹಾಧಿವೇಶನದಲ್ಲಿ ಭಾಗವಹಿಸಿದ್ದರು. ಎರಡು ದೇಶಗಳ ಪಕ್ಷಗಳು, ಆದೇಶಗಳ ರಾಜಕೀಯ ಪರಿಸ್ಥಿತಿಯಿಂದಾಗಿ ಮಹಾಧಿವೇಶನಕ್ಕೆ ಬರಲಾಗಲಿಲ್ಲ. ರಶ್ಯನ್ ಪ್ರತಿನಿಧಿ ಅಕ್ಟೋಬರ್ 7 ರ ನಾಲ್ಕು ಕೋಟಿ ರಶ್ಯನರು ಭಾಗವಹಿಸಿದ ರಾಷ್ಟ್ರವ್ಯಾಪಿ ಹರತಾಳದ ನಂತರ ಆ ಯಶಸ್ಸಿನ ಸುದ್ದಿ ಹೊತ್ತು ಮಹಾಧಿವೇಶನಕ್ಕೆ ಬಂದರು. ಇಟಲಿಯ ಪ್ರತಿನಿಧಿ, ಆ ಪಕ್ಷ ಭಾಗವಹಿಸುತ್ತಿರುವ ಸರ್ಕಾರದಲ್ಲಿ ಬಿಕ್ಕಟ್ಟಿನಿಂದಾಗಿ ಬೇಗನೇ ಹೋಗಬೇಕಾಯಿತು. ಹೆಚ್ಚಿನ ಸೌಹಾರ್ದ ಪ್ರತಿನಿಧಿಗಳು ಪಕ್ಷದ ಕೇಂದ್ರಿಯ ಸೆಕ್ರೆಟಾರಿಯಟ್ ಅಥವಾ ಪೊಲಿಟ್ ಬ್ಯೂರೋ, ಅಥವಾ ಕೇಂದ್ರ ಸಮಿತಿ, ಅಥವಾ ಅಂತ ರ್‍ರಾಷ್ಟ್ರೀಯ ವಿಭಾಗದ ಮುಖ್ಯಸ್ಥರಾಗಿದ್ದು ಪಕ್ಷದ ಹಿರಿಯ ನಾಯಕರಾಗಿದ್ದರು. ಐದು ಪ್ರತಿನಿಧಿಗಳು ಆದೇಶಗಳನ್ನು ಆಳುತ್ತಿರುವ ಪಕ್ಷಕ್ಕೆ ಸೇರಿದವರು - ಚೀನಾ ಕ್ಯೂಬಾ ವಿಯೆಟ್ನಾಂ,ಉತ್ತರ ಕೊರಿಯಾ ಮತ್ತು ಲಾವೋಸ್. ನಾಲ್ಕು ಪ್ರತಿನಿಧಿಗಳು ಆಯಾ ದೇಶಗಳನ್ನು ಆಳುವ ಪಕ್ಷಗಳ ಕೂಟಗಳಲ್ಲಿ ಸೇರಿರುವಂತವು-ಇಟಲಿ ಫ್ರಾನ್ಸ್, ದಕ್ಷಿಣ ಆಫ್ರಿಕಾ, ನೇಪಾಳ. ನೆರೆಯ ನೇಪಾಳ, ಬಾಂಗ್ಲಾದೇಶ, ಪಾಕಿಸ್ತಾನ ಶ್ರೀಲಂಕಾದಿಂದ ಪ್ರತಿನಿಧಿಗಳು ಬಂದಿದ್ದು ಗಮನಾರ್ಹವಾಗಿತ್ತು. ಪ್ರತಿನಿಧಿಗಳನ್ನು ಕಳಿಸಿರುವ ಆಸ್ಟ್ರೇಲಿಯಾ, ಜಪಾನ್, ರಶ್ಯಾ, ಜರ್ಮನ್, ಪೋರ್ಚುಗಲ್, ಸ್ಪೈನ್, ಗ್ರೀಸ್‌ನ ಪಕ್ಷಗಳು ತಮ್ಮ ದೇಶಗಳಲ್ಲಿ ಪ್ರಮುಖ ವಿರೋಧಿ ರಾಜಕೀಯ ಪಾತ್ರವಹಿಸುತ್ತಿರುವಂತವು ಮತ್ತು ಅಂತರ್‍ರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವವು. ಮಧ್ಯ ಏಶ್ಯಾದಿಂದ ಸೈಪ್ರಸ್, ಸಿರಿಯಾ ಪಕ್ಷಗಳ ಪ್ರತಿನಿಧಿಗಳು ಬಂದಿದ್ದರು.

ಜರ್ಮನಿನ ಪಿ.ಡಿ.ಎಸ್.(ಹಿಂದಿನ ಪೂರ್ವ ಜರ್ಮನಿಯ ಆಳುವ ಕಮ್ಯುನಿಸ್ಟ್ ಪಕ್ಷ) ಹಾಗೂ ರಶ್ಯನ್ ಒಕ್ಕೂಟ ಕಮ್ಯುನಿಸ್ಟ್ ಪಕ್ಷ ಸಿಪಿಐ(ಎಂ)ನ ಮಹಾಧಿವೇಶನದಲ್ಲಿ ಮೊದಲ ಬಾರಿಗೆ ಭಾಗವಹಿಸುತ್ತಿದ್ದವು.

ಮಹಾಧಿವೇಶನದಲ್ಲಿ ಭಾಗವಹಿಸುತ್ತಿರುವ ಈ ಸೌಹಾರ್ದ ಪ್ರತಿನಿಧಿಗಳು ಅಧಿವೇಶನದಲ್ಲಿ ಪ್ರತಿನಿಧಿಗಳನ್ನು ಉದ್ದೇಶಿಸಿ ತಮ್ಮ ಪಕ್ಷದ ಶುಭಾಶಯ ಸಂದೇಶಗಳನ್ನು ತಿಳಿಸಿ ಮಾತನಾಡಿದರು. ಹೆಚ್ಚಿನ ಪ್ರತಿನಿಧಿಗಳು ಮಹಾಧಿವೇಶನದ ಹೆಚ್ಚಿನ ಕಾರ್ಯಕಲಾಪ ವನ್ನು ವೇದಿಕೆಯಿಂದ ವೀಕ್ಷಿಸಿದರು.



ಕಮ್ಯುನಿಸ್ಟ್ ಮ್ಯಾನಿಫೆಸ್ಟೋದ 150ನೇ ವಾರ್ಷಿಕೋತ್ಸವ ಸಂಸ್ಮರಣಾ ಅಧಿವೇಶನವನ್ನು ನಿರ್ವಹಿಸುತ್ತಿರುವ ಪೊಲಿಟ್‌ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿ

ಅಕ್ಟೋಬರ್ 8ರ ಮಧ್ಯಾಹ್ನ ಅಧಿವೇಶನ ತೆರೆದ ಅಧಿವೇಶನವಾಗಿದ್ದು, ಕಮ್ಯುನಿಸ್ಟ್ ಮ್ಯಾನಿಫೆಸ್ಟೋದ 150ನೇ ವಾರ್ಷಿಕೋತ್ಸವಕ್ಕೆ ಮೀಸಲಾಗಿತ್ತು. ಬಂದಿದ್ದ ಎಲ್ಲಾ ಪಕ್ಷಗಳ ಸೌಹಾರ್ದ ಪ್ರತಿನಿಧಿಗಳು ಸಭೆಯನ್ನುದ್ದೇಶಿಸಿ ಕಮ್ಯುನಿಸ್ಟ್ ಮ್ಯಾನಿಫೆಸ್ಟೋದ ಪ್ರಸ್ತುತತೆ, ತಮ್ಮ ದೇಶದ ಈಗಿನ ಚಳುವಳಿಯ ಪರಿಸ್ಥಿತಿ, ಅಂತರ್‍ರಾಷ್ಟ್ರೀಯ ಸನ್ನಿವೇಶದ ಬಗ್ಗೆ ಮಾತನಾಡಿ ದರು. ಇದಲ್ಲದೆ ಹಲವಾರು ಪ್ರಮುಖ ಪತ್ರಿಕೆ ಗಳಲ್ಲಿ (ಪಕ್ಷದ ದೈನಿಕಗಳೂ ಸೇರಿ) ಈ ಪ್ರತಿ ನಿಧಿಗಳ ಇಂಟರ್‌ವ್ಯೂಗಳು ಪ್ರಕಟವಾದವು.

ಉದ್ಘಾಟನಾ ಸಮಾರಂಭದಲ್ಲಿ ಓದಿದ ಶುಭಾಶಯ ಸಂದೇಶಗಳಲ್ಲಿ ಹೆಚ್ಚಿನ ಸೌಹಾರ್ದ ಪ್ರತಿನಿಧಿಗಳು ಆಯಾ ದೇಶಗಳಲ್ಲಿ ಆಯಾ ಪಕ್ಷಗಳ ಪಾತ್ರ ಆ ಪಕ್ಷ ಹಾಗೂ ಸಿಪಿಐ(ಎಂ) ನಡುವಣ ಸಂಬಂಧ ಭಾರತದಲ್ಲಿ ಸಿಪಿಐ(ಎಂ)ನ ಪಾತ್ರದ ಬಗ್ಗೆ ಮಾತ ನಾಡಿದರು. ಈಗ ಜಗತ್ತಿನ ಎಲ್ಲಾ ದುಡಿಯುವ ಜನತೆ ಎದುರಿಸುತ್ತಿರುವ ಸಾಮ್ರಾಜ್ಯಶಾಹಿ ಹರಿಯಬಿಟ್ಟಿರುವ ಜಾಗತೀಕರಣ ಮುಖ್ಯ ಅಪಾಯ ಎಂದು ಗುರುತಿಸಿದರು. ಇದರ ವಿರುದ್ಧ ಹೋರಾಡಲು ಮುಂಬರುವ ದಿನಗಳಲ್ಲಿ ದುಡಿಯುವ ಜನರ ಪಕ್ಷಗಳ ನಡುವೆ ಹೆಚ್ಚಿನ ಸಹಕಾರ, ಸೌಹಾರ್ದತೆ ಬಗ್ಗೆ ಒತ್ತಿ ಹೇಳಿದರು. ಕೇರಳ, ಪಶ್ಚಿಮ ಬಂಗಾಳಗಳಲ್ಲಿ ದುಡಿಯುವ ಜನರ ಪರವಾದ ಪ್ರಜಾಸತ್ತಾತ್ಮಕ ಸರಕಾರಗಳನ್ನು ನಡೆಸುತ್ತಿರುವ ಸಿಪಿಐ(ಎಂ)ನ ಅನುಭವದ ಬಗೆ ಹೆಚ್ಚಿನ ಪಕ್ಷಗಳು ಆಸಕ್ತಿ ವಹಿಸಿದವು. ವಿದೇಶಿ ಸೌಹಾರ್ದ ಪ್ರತಿನಿದಿಗಳಿಂದ ಕಲ್ಕತ್ತಾದ ಹತ್ತಿರದ ಒಂದು ಪಂಚಾಯತಿಗೆ ಭೇಟಿ ಏರ್ಪಡಿಸಲಾಗಿತ್ತು. ಅಲ್ಲಿ ಸೌಹಾರ್ದ ಪ್ರತಿನಿಧಿಗಳು, ಪಂಚಾಯತ್ ಸದಸ್ಯರ ಜತೆ ಮಾತನಾಡಿ, ಅಲ್ಲಿನ ಕೆಲಸದ ಶೈಲಿ ಬಗ್ಗೆ ಮಾಹಿತಿ ಪಡೆದರು.

ಕೆಲವು ಸೌಹಾರ್ದ ಪ್ರತಿನಿಧಿಗಳ ಶುಭಾಶಯ ಸಂದೇಶದಿಂದ ಆಯ್ದ ಕೆಲವು ಭಾಗಗಳನ್ನು ಇಲ್ಲಿ ಕೊಡಲಾಗಿದೆ.

→

"ಅಮೇರಿಕ ಕ್ಯೂಬಾದ ವಿರುದ್ಧ ಆರ್ಥಿಕ ಸಮರ ತೀವ್ರಗೊಳಿಸುತ್ತಿದ್ದಂತೆ (ದಿಗ್ಬಂಧನ ನಮಗೆ 60 ಶತಕೋಟಿ ಡಾಲರುಗಳ ಹಾನಿ ತಂದರೂ) ಜಗತ್ತಿನೊಂದಿಗೆ ನಮ್ಮ ಸಂಬಂಧ ಮತ್ತು ನಮ್ಮ ಜನತೆಯೊಂದಿಗಿನ ಜಗತ್ತಿನ ಜನತೆಯ ಸೌಹಾರ್ದ ಸಂಬಂಧ ಘನಿಷ್ಟವಾಗುತ್ತಿದೆ. ಈಗ 164 ದೇಶಗಳೊಂದಿಗೆ ನಮ್ಮ ರಾಜತಾಂತ್ರಿಕ ಸಂಬಂಧ ಹಾಗೂ 130 ದೇಶಗಳೊಂದಿಗೆ ವಾಣಿಜ್ಯ ಸಂಬಂಧ ಇದೆ.............ನಮ್ಮ ಹೋರಾಟ ನವ-ಉದಾರವಾದಿ ಜಾಗತೀಕರಣದ ವಿರುದ್ಧ............ನಮ್ಮ ಹೋರಾಟ ಮಾನವೀಯ, ನ್ಯಾಯಯುತ ಮತ್ತು ಸೌಹಾರ್ದತೆ ಇರುವ ಜಾಗತೀಕರಣ ಕ್ಕಾಗಿ, ಮನುಕುಲವನ್ನು ಕಾಪಾಡಬಲ್ಲ, ಮಾನವ ಜೀವಿಯನ್ನು ರಕ್ಷಿಸಬಲ್ಲ ಜಾಗತೀಕರಣಕ್ಕಾಗಿ ನಮ್ಮ ಹೋರಾಟ. ಸಮಾಜವಾದಿ ಜಾಗತೀಕರಣಕ್ಕೆ ನಮ್ಮ ಹೋರಾಟ ನಡೆಯುತ್ತಿದೆ. ಮುಂದೆಯೂ ನಡೆಯುತ್ತದೆ....

ಅಲಿಪ್ತ ಚಳುವಳಿಯನ್ನು ಬಲಪಡಿಸಲು ಹೋರಾಟ ಮಹತ್ವದ್ದು. ಅಲಿಪ್ತ ಚಳುವಳಿಯ ನಾವು ಮಾತ್ರ ವಿಶ್ವಸಂಸ್ಥೆಯನ್ನು ಪ್ರಜಾಪ್ರಭುತ್ವೀಕರಿಸಬಲ್ಲೆವು....

- ಕ್ಯೂಬಾ ಕಮ್ಯುನಿಸ್ಟ್ ಪಕ್ಷದ ಪ್ರತಿನಿಧಿ.

☭ ☭ ☭

ಭಾರತ ಮತ್ತು ಪಾಕಿಸ್ತಾನದ ಸರ್ಕಾರಗಳು ಅಣ್ವಸ್ತ್ರ ಪರೀಕ್ಷೆ ನಡೆಸಿದ್ದನ್ನು ನಮ್ಮ ಪಕ್ಷ ಖಂಡಿಸಿದೆ. ವಿಶ್ವ ಶಾಂತಿಗೆ ಮಾರಕ ಎಂದು..........ಆದರೆ ಆದೇ ಸಮಯದಲ್ಲಿ ನಮ್ಮ ಪಕ್ಷ ಐದು ಅಣ್ವಸ್ತ್ರ ಸಜ್ಜಿತ ದೇಶಗಳಿಗೆ ಪತ್ರವೊಂದನ್ನು ಕಳಿಸಿ ಎನ್.ಪಿ.ಟಿ ಅಣ್ವಸ್ತ್ರದ ಏಕಸ್ವಾಮ್ಯವನ್ನು ಹೊರಿಸುವ ಒಪ್ಪಂದ. ಇತರ ದೇಶಗಳಿಗೆ ಅಣ್ವಸ್ತ್ರವನ್ನು ನಿಷೇಧಿಸುತ್ತಲೇ ಎನ್.ಪಿ.ಟಿ.ಯ ತಾರತಮ್ಯದ ನೀತಿ ಭಾರತ ಮತ್ತು ಪಾಕಿಸ್ತಾನದ ಅಣ್ವಸ್ತ್ರ ಪರೀಕ್ಷೆಗೆ ಕುಮ್ಮಕ್ಕು ಕೊಟ್ಟಿದೆ.............ಈ ಐದು ದೇಶಗಳಿಗೆ ನಮ್ಮ ಪಕ್ಷ ಅಣ್ವಸ್ತ್ರ ಗಳನ್ನು ನಾಶಮಾಡುವತ್ತ ಗಂಭೀರ ಹೆಜ್ಜೆ ಇಡಬೇಕು ಎಂದು ಒತ್ತಾಯಿಸಿದೆ............. ಜಪಾನಿ ಕಮ್ಯುನಿಸ್ಟ್ ಪಕ್ಷ ಶೇಕಡಾ 15 ಮತಗಳಿಸಿದ್ದು, ದೇಶದ ರಾಜಕೀಯದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. 21 ನೇ ಶತಮಾನದ ಆದಿ ಬಾಗದಲ್ಲಿ ಪ್ರಜಾಸತ್ತಾತ್ಮಕ ಸಂಯುಕ್ತ ಸರ್ಕಾರಕ್ಕಾಗಿ ನಮ್ಮ ಪಕ್ಷ ಪ್ರಯತ್ನಿಸುತ್ತಿದೆ.

- ಜಪಾನಿ ಕಮ್ಯುನಿಸ್ಟ್ ಪಕ್ಷದ ಪ್ರತಿನಿಧಿ.

☭ ☭ ☭

"ಸರ್ಕಾರ ನಡೆಸುವಲ್ಲಿ ನಿಮ್ಮ ಪಾತ್ರ ದಿಂದ ನಾವು ಕಲಿಯಬಯಸುತ್ತೇವೆ. ಪ್ರಜಾಸತ್ತಾತ್ಮಕ ಪ್ರಕ್ರಿಯೆಯಲ್ಲಿ ಭಾಗವಹಿಸುವಿಕೆ, ಸರ್ಕಾರದಲ್ಲಿ ಜನರ ಭಾಗವಹಿಸುವಿಕೆಗೆ ಪ್ರೋತ್ಸಾಹ ಇತ್ಯಾದಿ ನಾವು ಕಲಿಯ ಬೇಕಾದ ಪಾಠಗಳು. ಜನರ ಭಾಗ ವಹಿಸುವಿಕೆ ಪ್ರಜಾಪ್ರಭುತ್ವದ ಸಾರ. ಪಂಚಾಯತ್ ಚಳುವಳಿಗೆ ನಿಮ್ಮ ಪ್ರೋತ್ಸಾಹ, ಜನತಾ ಯೋಜನೆ ಚಳುವಳಿ ಪ್ರಜಾಪ್ರಭುತ್ವಕ್ಕೆ ನಿಜ ವಾದ ಅರ್ಥದಲ್ಲಿ ಜೀವ ತುಂಬುವ ಕೆಲಸ....

- ಆಸ್ಟ್ರೇಲಿಯಾ ಕಮ್ಯುನಿಸ್ಟ್ ಪಕ್ಷದ ಪ್ರತಿನಿಧಿ.

☭ ☭ ☭

"ಇಂದು ಪಿ.ಡಿ.ಎಸ್. ಕಮ್ಯುನಿಸ್ಟ್ ಪಾರ್ಟಿಯೂ ಅಲ್ಲ ಯುರೋಪಿನ ಮಾದರಿಯ ಸೋಶಿಯಲ್ ಡೆಮೊಕ್ರಾಟಿಕ್ ಪಕ್ಷವೂ ಅಲ್ಲ. ಅದು ಒಂದು ಲಕ್ಷ ಸದಸ್ಯರನ್ನು ಹೊಂದಿರುವ ಸಮಾಜವಾದದ ಅನಿವಾರ್ಯ ಗುರಿ ಎಂದು ಸಾರುವ ಸಮಾಜವಾದಿ ಪಕ್ಷ............ಇತ್ತೀಚಿನ ಚುನಾವಣೆಗಳಲ್ಲಿ ಶೇಕಡಾ 5ಕ್ಕಿಂತ ಹೆಚ್ಚಿನ ಮತಗಳಿಸಿ, ನಮ್ಮ ವಿರೋಧಿಗಳ ಪಿತೂರಿ, ಅಪಪ್ರಚಾರ ಇದ್ದಾಗ್ಯೂ ಕೇಂದ್ರೀಯ ಪಾರ್ಲಿಮೆಂಟು ಪ್ರವೇಶಿಸಲು ಸಾಧ್ಯವಾಗಿದೆ. ಎರಡನೇ ಮಹಾಯುದ್ಧದ ನಂತರ ಮೊದಲ ಬಾರಿಗೆ ಎಡ ಮತ್ತು ಸಮಾಜವಾದಿ ಪಕ್ಷವೊಂದು ಜರ್ಮನಿ(ಪೂರ್ವ ಮತ್ತು ಪಶ್ಚಿಮ)ಯ ದುಡಿಯುವ ತುಳಿತಕ್ಕೊಳಗಾದ ಜನತೆಯ ಒಳಿತಿಗಾಗಿ ಕೆಲಸಮಾಡಲು ಸಾಧ್ಯವಾಗುವುದು..........ಪಿ.ಡಿ.ಎಸ್ ಇತ್ತೀಚೆಗೆ ಅಧಿಕಾರಕ್ಕೆ ಬಂದಿರುವ ಎಸ್.ಪಿ.ಡಿ. ನೇತೃತ್ವದ್ದ ಒಕ್ಕೂಟದ ಸರ್ಕಾರದ ಸಾಮಾಜಿಕ ನ್ಯಾಯ ಒದಗಿಸುವ ಪ್ರಯತ್ನಗಳಿಗೆ ಪೂರ್ಣ ಸಹಕಾರ ನೀಡುವುದು. ನಮ್ಮ ದೇಶದಲ್ಲಿ ಮತ್ತು ಜಗತ್ತಿನಲ್ಲಿ ಶಾಂತಿಗೆ ಜರ್ಮನ್ (ಅಧಿಪತ್ಯದ) ಯುರೋಪ್ ಬದಲು ಯುರೋಪಿಯನ್ ಜರ್ಮನಿಗೆ ಪಿಡಿಎಸ್ ಪ್ರಯತ್ನಿಸುವುದು .... ಎಸ್.ಪಿ.ಡಿ. ಸರ್ಕಾರಕ್ಕೆ ಈ ಉದ್ದೇಶಗಳಿಗೆ ಬೆಂಬಲ ನೀಡುತ್ತದೆ, ಎಡ ರಾಜಕೀಯದ ಒತ್ತಡ ಈ ಸರ್ಕಾರದ ಮೊರೆ ಹಾಕುವುದು ಅಗತ್ಯವಿದೆ ಎಂದು ಪಿ.ಡಿ.ಎಸ್ ಭಾವಿಸುತ್ತದೆ....................ಪಶ್ಚಿಮ ಬಂಗಾಳದ ನಿಮ್ಮ ಪಕ್ಷ 21 ವರ್ಷಗಳ ಕಾಲ ಅವಿರತವಾಗಿ ಬಂಡವಾಳಶಾಹಿ ಚೌಕಟ್ಟಿನೊಳಗೆ ನಡೆಸುತ್ತಿರುವ ಪ್ರಜಾಸತ್ತಾತ್ಮಕ ಸರ್ಕಾರದ ಪ್ರಯೋಗ ನಮಗೆ ಹಲವು ಪಾಠ ಕಲಿಸಬಲ್ಲದು. ಜರ್ಮನಿಯಲ್ಲಿ ಆರೂವರೆ ದಶಕಗಳಿಂದ ಕಮ್ಯುನಿಸ್ಟ್ ವಿರೋಧಿ ಹಿಸ್ಟೀರಿಯಾದಲ್ಲಿ ಸಾಧ್ಯವಾಗದಿರುದನ್ನು ಸಾಧ್ಯ ಮಾಡಲು ನಮ್ಮ ಪಕ್ಷ ಈ ಪಾಠಗಳನ್ನು ಬಳಸುವುದು.

- ಜರ್ಮನ್ ಡೆಮಾಕ್ರಾಟಿಕ್ ಸೋಶಲಿಸ್ಟ್ ಪಾರ್ಟಿ ಪ್ರತಿನಿಧಿ.

ಕಲ್ಕತ್ತಾ ಸಮೀಪದ ಗ್ರಾಮಪಂಚಾಯತಿ ಸದಸ್ಯರ ಅನುಭವಗಳನ್ನು ಆಲಿಸುತ್ತಿರುವ ವಿದೇಶಿ ಪ್ರತಿನಿಧಿಗಳು



ಇಂಟರ್‌ನ್ಯಾಷನಲ್(ಅಂತರ್‍ರಾಷ್ಟ್ರೀಯ)ನ ಸಾಮೂಹಿಕ ಗಾಯನಕ್ಕೆ ನೇತೃತ್ವ ನೀಡುತ್ತಿರುವ 'ಇಪ್ಟಾ' ತಂಡ



ವಿಚಾರ ಸಂಕಿರಣಗಳು.....

ಪುಟ 9 ರಿಂದ

ವೇದಗಳ ಬಗ್ಗೆ ಹೇಳಿದರು- 'ವೇದಗಳು ಬ್ರಹ್ಮ ಎಲ್ಲೆಲ್ಲೂ, ಎಲ್ಲಾ ಜೀವಿಗಳಲ್ಲೂ ಇದೆ ಎಂದರೆ ಹಿಂದೂ ಧರ್ಮ ಬ್ರಹ್ಮ ಬ್ರಾಹ್ಮಣನಲ್ಲಿ, ನಾಯಿ, ಬೆಕ್ಕು, ಇಲಿ ಇತ್ಯಾದಿಗಳಲ್ಲಿದೆ, ಆದರೆ ಚಂಡಾಲನಲ್ಲಿ, ಇತರ ಕೆಳಜಾತಿಯ ಜನಗಳಲ್ಲಿ, ಇತರ ಧರ್ಮದ ಜನಗಳಲ್ಲಿ ಇರುವುದಿಲ್ಲ ಎಂದು ಬಗೆಯುತ್ತದೆ ಎಂದರು. ಇನ್ನೊಬ್ಬ ಪ್ರಖ್ಯಾತ ಸಮಾಜಶಾಸ್ತ್ರಜ್ಞರು ಜಾತ್ಯಾತೀತ ನಂಬಿಕೆಗಳನ್ನು ಮೂಡಿಸುವಲ್ಲಿ ಸೂಫೀ ಸಂತರ ಪಾತ್ರವನ್ನು, ಸ್ವಾತಂತ್ರ್ಯ ಹೋರಾಟದ ಪಾತ್ರವನ್ನು ವಿಶ್ಲೇಷಿಸಿದರು.

ಸಮೂಹ ಮಾಧ್ಯಮ ಮತ್ತು ಸಂಸ್ಕೃತಿ ಕುರಿತಂತೆ ವಿಚಾರ ಸಂಕಿರಣಗಳು ನಡೆದವು. ಹೆಚ್ಚಿನ ಪತ್ರಕರ್ತರು 'ಸ್ಕೂಪ್'ಗಳನ್ನು ಸಂಗ್ರಹಿಸುವುದರಲ್ಲೊ, ಜಾಗತೀಕರಣ, ಹಿಂದುತ್ವ ಇತ್ಯಾದಿಗಳ ಪರವಾಗಿ ಮಾತ ನಾಡುವುದರಲ್ಲೋ ಕಾಲಕಳೆಯುತ್ತಾರೆ. ಆದರೆ ಸತ್ಯಕ್ಕೆ ಬದ್ಧತೆಯೆಂಬುದಿದ್ದರೆ ಪತ್ರಕರ್ತರು ಪಾಶ್ಚಿಮಾತ್ಯ ಆರ್ಥಿಕಗಳಲ್ಲಿ ಅಥವಾ 'ಅದ್ಭುತ ಆರ್ಥಿಕ'ಗಳಲ್ಲಿ ಜನಸಾಮಾನ್ಯರ ಜೀವನದ ಬಗ್ಗೆ ಬರೆಯಬೇಕು ಎಂದರು ಪ್ರಖ್ಯಾತ ಪತ್ರಕರ್ತ ಎನ್. ರಾಮ್. ಈ ದೇಶಗಳಲ್ಲಿ ಸಮೂಹ ಮಾಧ್ಯಮದ ಮೇಲಿನ ಗುತ್ತೇದಾರಿ ಹತೋಟಿ ಸುದ್ದಿಯ ಪ್ರಚಾರದ ಮೇಲೂ ಹತೋಟಿ ಹೊಂದಿದೆ ಎಂದರು. ಉದಾಃ ರೂಪರ್ಟ್ ಮಡೋರ್ಕ್ ಅಮೇರಿಕ, ಇಂಗ್ಲೆಂಡಿನಲ್ಲಿ 50%, ಆಸ್ಟ್ರೇಲಿಯಾ 70% ಹತೋಟಿ ಹೊಂದಿದ್ದಾನೆ, ಇವನ್ನೆಲ್ಲಾ ಬಯಲಿ ಗೆಳೆಯಬೇಕು ಎಂದರು.

ಇನ್ನು ಕೆಲವು ವಿಚಾರ ಸಂಕಿರಣಗಳು ಉದಾರೀಕರಣ, ಎಡ ಸಹಕಾರ ಇತ್ಯಾದಿ ಪ್ರಶ್ನೆಗಳ ಮೇಲೆ ನಡೆದವು. ಮಹಾಧಿವೇಶನ ಮುಗಿದ ಮೂರು ದಿನಗಳಲ್ಲೇ ಪ್ರೊ|| ಅಮರ್ತ್ಯ ಸೇನ್‌ರವರಿಗೆ ಅರ್ಥಶಾಸ್ತ್ರದ ನೊಬೆಲ್ ಪ್ರಶಸ್ತಿ ನೀಡುವ ಸುದ್ದಿ ಬಂತು. "ಉದಾರೀಕರಣದ ವಿಜಯ"ದ ಈ ಯುಗದಲ್ಲಿ ಈ ಪ್ರತಿಷ್ಠಿತ ಪ್ರಶಸ್ತಿ ಅದನ್ನು ಬಲವಾಗಿ ವಿರೋಧಿಸುವ ಒಬ್ಬರಿಗೆ ಹೋಗಿರುವುದು ತಮಾಷೆನಿಸಬಹುದು. ಪ್ರಭುತ್ವ ಅಥವಾ ಸರಕಾರ ಶಿಕ್ಷಣ, ಆರೋಗ್ಯ ಮತ್ತು ಭೂಸುಧಾರಣೆಗಳಂತಹ ಮೂಲಭೂತ ಮಾನವ ಸಂಪನ್ಮೂಲಗಳ ಬೆಳವಣಿಗೆಯ ಕರ್ತವ್ಯಗಳಿಂದ ಹಿಂದೆ ಸರಿಯಲು ಸಾಧ್ಯವೇ? ಇದು ಉದಾರೀಕರಣದ ಬಗ್ಗೆ ಪ್ರೊ|| ಅಮರ್ತ್ಯ ಸೇನ್‌ರ ಪ್ರಮುಖ ಟೀಕೆ. ನಿಜ, ಪ್ರೊ. ಸೇನ್‌ರವರು ಮಹಾಧಿವೇಶನದ ವೇಳೆ ಕಲ್ಕತ್ತೆಯಲ್ಲಿರಲಿಲ್ಲ. ಆದರೆ ವಿಚಾರ ಸಂಕಿರಣಗಳಲ್ಲಿ ಮಾತನಾಡಿದ ಅಶೋಕ್ ಮಿತ್ರ, ಅಮಿಯಾ ಬಾಗ್ಚಿ, ಪ್ರಭಾತ್ ಪಟ್ನಾಯಕ್ ಮುಂತಾದ ಅರ್ಥಶಾಸ್ತ್ರಜ್ಞರು ಇವೇ ಪ್ರಶ್ನೆಗಳನ್ನು ಎತ್ತಿದರು.

ದಿನಚರಿಯಿಂದ............

ಪುಟ 2 ರಿಂದ

ಗಾಯನದೊಂದಿಗೆ 16ನೇ ಮಹಾಧಿವೇಶನ ಮುಕ್ತಾಯವಾಯಿತು.

☭ ಅದಾಗಲೇ ಕಲ್ಕತ್ತಾ ಬೀದಿ-ಬೀದಿಗಳಲ್ಲಿ ಮೆರವಣಿಗೆಗಳು ಆರಂಭವಾಗಿದ್ದವು. ನಗರದ ವಿವಿಧ ಭಾಗಗಳಿಂದ ಹಲವು ಜನ ಪ್ರವಾಹಗಳು 'ಚಲೋ ಚಲೋ ಬ್ರಿಗೇಡ್ ಪರೇಡ್ ಚಲೋ' ಎನ್ನುತ್ತಾ ಸಾಗಿದ್ದವು. ಮಧ್ಯಾಹ್ನ 2 ಗಂಟೆಯ ವೇಳೆಗಾಗಲೇ ಕಲ್ಕತ್ತದ ವಿಶಾಲ ಬ್ರಿಗೇಡ್ ಪರೇಡ್ ಮೈದಾನ ಕಿಕ್ಕಿರಿದು ತುಂಬಿತ್ತು. ಎತ್ತರದ ವೇದಿಕೆಯ ಮೇಲಿಂದ ವಿದೇಶಿ ಪ್ರತಿನಿಧಿಗಳ ಪರಿಚಯ, ಪಶ್ಚಿಮ ಬಂಗಾಳ ಸಿಪಿಐ(ಎಂ) ಕಾರ್ಯದರ್ಶಿ ಶೈಲೆನ್ ದಾಸ್‌ಗುಪ್ತಾರ ಆರಂಭಿಕ ಭಾಷಣ. ಕೇರಳದ ಮುಖ್ಯಮಂತ್ರಿ ಹಾಗೂ ಪೊಲಿಟ್‌ಬ್ಯೂರೋ ಸದಸ್ಯ ಇ.ಕೆ.ನಾಯನಾರ್‌ರವರಿಂದ ಬಂಗಾಳದ ಜನತೆಗೆ ಕೇರಳದ ಜನತೆಯ ಅಭಿನಂದನೆಗಳು. ಪ್ರಧಾನ ಕಾರ್ಯದರ್ಶಿಯವರು ಮಹಾಧಿವೇಶನದ ಚರ್ಚೆಗಳ ಹಿನ್ನೆಲೆಯಲ್ಲಿ ಪಕ್ಷ ತನ್ನ ಮುಂದಿಟ್ಟುಕೊಂಡ ತಕ್ಷಣದ ಗುರಿಗಳ ಬಗ್ಗೆ ಮಾತನಾಡಿದರು. ನಂತರ ರಾಜ್ಯದ ಜನಪ್ರಿಯ ಮುಖ್ಯಮಂತ್ರಿ ಜ್ಯೋತಿಬಸುರವರೂ ಮಾತನಾಡಿದರು. 'ಇಂಟರ್‌ನ್ಯಾಷನಲ್' ಗಾಯನದೊಂದಿಗೆ ಬಹಿರಂಗ ರ್‍ಯಾಲಿ ಸಂಜೆ 4.30 ಕ್ಕೆ ಮುಗಿಯಿತು.

ಬಿಜೆಪಿಗೆ ಅಡಗಿಸಿಟ್ಟುಕೊಳ್ಳಲಾಗದ ನಡುಕ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ 16 ನೇ ಮಹಾಧಿವೇಶನ ವಿಶ್ವದ ಗಮನವನ್ನೇ ಸೆಳೆದು ಯಶಸ್ವಿಯಾಗಿ ಮುನ್ನಡೆ ಯುತ್ತಿದ್ದಂತೆ ಅಧಿಕಾರಾರೂಢ ಬಿಜೆಪಿ ವಲಯದಲ್ಲಿ ಅಡಗಿಸಿಟ್ಟುಕೊಳ್ಳಲಾಗದ ನಡುಕ ಉಂಟಾಗಿದೆ. ಜಾಗತೀಕರಣಪರ ಶಕ್ತಿಗಳ ವಿರುದ್ಧ ಮತ್ತು ಫ್ಯಾಸಿಸ್ಟ್ ಮುಂತಾದ ಶಕ್ತಿಗಳ ವಿರುದ್ಧ ಹೋರಾಟವನ್ನು ಮುನ್ನಡೆಸುವ ಸಿಪಿಐ(ಎಂ)ನ ದೃಢವಾದ ನಿರ್ಧಾರ ಬಿ.ಜೆ.ಪಿ.ಗೆ ಆಘಾತವನ್ನು ಉಂಟುಮಾಡಿದೆ. ಪರ್ಯಾಯ ಸರ್ಕಾರ ರಚಿಸಲು ಕಾಂಗ್ರೆಸ್ ಮುಂದಾದರೆ ವಿಷಯ ಆಧಾರಿತ ಬೆಂಬಲ ನೀಡುವ ಸಿಪಿಐ(ಎಂ)ನ ತೀರ್ಮಾನ ಆಶ್ಚರ್ಯ ಪಡುವ ವಿಷಯವಲ್ಲ ಎಂದು ಪ್ರತಿ ಕ್ರಿಯಿಸುವ ಮೂಲಕ ಬಿಜೆಪಿ ತನ್ನ ಆತಂಕವನ್ನು ಮರೆಮಾಚಲು ಪ್ರಯತ್ನ ಪಟ್ಟಿದೆ. ಆದರೆ ಮಿತ್ರ ಪಕ್ಷಗಳ ಸಮಯಸಾಧಕ ಒತ್ತಡಗಳ ಭಾರದಿಂದಾಗಿ ದಿನದಿಂದ ದಿನಕ್ಕೆ ಹೆಚ್ಚೆಚ್ಚು ಕುಸಿಯುತ್ತಿರುವ ಬಿಜೆಪಿಗೆ ಜಾತ್ಯಾತೀತ ಶಕ್ತಿಗಳನ್ನು ಒಗ್ಗೂಡಿಸುವ ಸಿಪಿಐ(ಎಂ)ನ ನಿರ್ಧಾರ ಮರಣಾಂತಿಕವೆನಿಸಿದೆ.

ಬಿಜೆಪಿಗೆ ಮತ ನೀಡಿದವರು ಭ್ರಮನಿರಸನಗೊಳ್ಳುತ್ತಿರುವುದು ಆ ಪಕ್ಷಕ್ಕೆ ನುಂಗಲಾರದ ತುತ್ತಾಗಿದೆ. ಪಕ್ಷದ ಸಾಧನೆಯನ್ನು ಅಳೆಯಲು 6 ತಿಂಗಳ ಅವಧಿ ಸಾಲದು ಎಂದು ಕಾರ್ಯಕರ್ತರನ್ನು ಸಮಾಧಾನ ಪಡಿಸಲು ಪ್ರಯತ್ನಪಡ ಲಾಗುತ್ತಿದೆ. ಮತ್ತೇನು ಮಾಡಲಾಗ ದಿದ್ದರೂ ಅಗತ್ಯ ವಸ್ತುಗಳ ಬೆಲೆಗಳನ್ನಾದರೂ ಹತೋಟಿಯಲ್ಲಿಡಲು ಸಾಧ್ಯವಾಗಬೇಕಾಗಿತ್ತು ಎಂಬ ಅತೃಪ್ತಿಗೆ ಬಿಜೆಪಿ ಬಳಿಯಲ್ಲಿ ಉತ್ತರವಿಲ್ಲ. ಜನತೆಯ ಗಮನವನ್ನು ಬೇರೆ ಕಡೆಗೆ ಸೆಳೆಯಲು ಅದು ಒಂದರ ನಂತರ ಒಂದರಂತೆ ನಾಟಕಗಳನ್ನಾಡತೊಡಗಿದೆ. ಪೋಕ್ರಾನ್‌ನಲ್ಲಿ ಬಾಂಬ್‌ಸ್ಫೋಟ ಮಾಡುವ ಮೂಲಕ ಮುಗ್ಧ ಜನತೆಯ ಮೆಚ್ಚುಗೆಯನ್ನು ಗಳಿಸಬಹುದೆಂಬ ಅದರ ನಿರೀಕ್ಷೆ ಹುಸಿಯಾಗಿದೆ. ಬಿಹಾರದ ರಾಜ್ಯ ಸರ್ಕಾರವು ತನ್ನ ಬಹುಮತವನ್ನು ವಿಧಾನ ಸಭೆಯಲ್ಲಿ ಸಾಬೀತು ಮಾಡಿದ ನಂತರವೂ, ಆರ್.ಎಸ್.ಎಸ್.ಗೆ ನಿಷ್ಠೆ ಹೊಂದಿರುವ ರಾಜ್ಯಪಾಲರ ಮೂಲಕ ಆ ಸರ್ಕಾರವನ್ನು ಕಿತ್ತುಹಾಕಲು ಕೈಹಾಕಿ ಕೈಸುಟ್ಟುಕೊಂಡಿದೆ. ನನ್ನನ್ನು ಬಂಧಿಸಿದರೆ ಮುಂಬೈನಗರ ಭಸ್ಮವಾಗಲಿದೆ ಎಂಬ ಬಾಳಾ ಠಾಕರೆ ಘರ್ಜನೆ ಕೇಂದ್ರ ಗೃಹ ಮಂತ್ರಿ ಎಲ್.ಕೆ. ಅಡ್ವಾನಿಗ ಕೇಳಿಸಲಿಲ್ಲ. ಮಧ್ಯಪ್ರದೇಶದ ಕ್ರೈಸ್ತ ಸನ್ಯಾಸಿನಿಯರ ಮೇಲೆ ನಡೆದ ಬಲಾತ್ಕಾರ ಪ್ರಕರಣವನ್ನು ವಿಶ್ವ ಹಿಂದು ಪರಿಷತ್ ಸಮರ್ಥಿಸಿದ್ದು ಆಕ್ಷೇಪಾರ್ಹವಾಗಲಿಲ್ಲ. ಯಾವುದೇ ಬಿಜೆಪಿ ವಿರೋಧಿ ರಂಗಕ್ಕೆ ಸಿಪಿಐ(ಎಂ) ಬೆಂಬಲ ನೀಡುತ್ತದೆ ಎಂಬ ತೀರ್ಮಾನ ಮಾತ್ರ ಬಿಜೆಪಿಗೆ ಅಪಥ್ಯವಾಗಿದೆ.

ಬಿಜೆಪಿ ವಕ್ತಾರ ವೆಂಕಯ್ಯನಾಯ್ಡು ಕಾಂಗ್ರೆಸಿನ ನೀತಿಗಳು ರಾಷ್ಟ್ರ ವಿರೋಧಿ ಪ್ರಜಾಪ್ರಭುತ್ವ ವಿರೋಧಿಯಾಗಿದ್ದು ಅದರ ಆರ್ಥಿಕ ಧೋರಣೆಗಳು ವಿನಾಶ ಕಾರಿಯಾಗಿವೆ ಎಂದು ಸಿಪಿಐ(ಎಂ) ಅದರ ನೀತಿಗಳನ್ನು ಹೇಗೆ ಬೆಂಬಲಿಸಲು ಸಾಧ್ಯ ಎಂದು ಪ್ರಶ್ನಿಸಿದ್ದಾರೆ. ಬಿಜೆಪಿಯ ಆರ್ಥಿಕ ಧೋರಣೆಗಳು ಕಾಂಗ್ರೆಸಿನ ಆರ್ಥಿಕ ಧೋರಣೆಗಳಿಗಿಂತ ಹೇಗೆ ಭಿನ್ನವಾಗಿವೆ ಎಂಬುದನ್ನು ವೆಂಕಯ್ಯ ನಾಯ್ಡು ವಿವರಿಸಬಲ್ಲರೆ? ಕಳೆದ 6 ತಿಂಗಳುಗಳ ಅನುಭವ ಸಾಲದೆ? ಜನತೆಯ ಮೇಲೆ ಬೆಲೆ ಏರಿಕೆಯ ಹೊರೆ ಹೇರುವ, ಖಾಸಗೀಕರಣದ ಮೂಲಕ ಕಾರ್ಮಿಕರನ್ನು ಬೀದಿಪಾಲು ಮಾಡುವ ಸಬ್ಸಿಡಿಗಳನ್ನು ಕಿತ್ತುಹಾಕಿ ರೈತರನ್ನು ದಿವಾಳಿ ಎಬ್ಬಿಸುವ ನೀತಿಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಎಲ್ಲಿದೆ ವ್ಯತ್ಯಾಸ? ರಸಗೊಬ್ಬರಗಳಿಗೆ ನೀಡುವ ಸಬ್ಸಿಡಿಯನ್ನು ಕಡಿಮೆಮಾಡಿ, ಪಡಿತರ ಸಕ್ಕರೆ ಮತ್ತು ಗೋಧಿಯ ಬೆಲೆಯನ್ನು ಏರಿಸಿ ಬಜೆಟ್ ಖೋತಾವನ್ನು ಸರಿದೂಗಿಸಲು ನಿರ್ಧರಿಸಲಾಗಿದೆ. ರಾಜಾಸ್ತಾನ ಮಿಜೋರಾಂ, ಮಧ್ಯಪ್ರದೇಶ ಮತ್ತು ದೆಹಲಿಯಲ್ಲಿ ನಡೆಯಲಿರುವ ವಿಧಾನ ಸಭಾ ಚುನಾವಣೆಗಳಲ್ಲಿ ಪಕ್ಷಕ್ಕೆ ಧಕ್ಕೆಯಾಗಬಹುದೆಂಬ ಭೀತಿಯಿಂದಾಗಿ ಉದ್ದೇಶಿತ ಈ ಕ್ರಮಗಳನ್ನು ಜಾರಿಗೆ ತರಲು ವಾಜಪೇಯಿ ಸರ್ಕಾರ ಹಿಂದೇಟು ಹಾಕುತ್ತಿದೆ. ಬಿಜೆಪಿ ಸರ್ಕಾರದ ಸಹಜ ಬೆಂಬಲಿಗರಾದ ವ್ಯಾಪಾರಸ್ಥರು ದೆಹಲಿಯಲ್ಲಿ ಅಡಿಗೆ ಎಣ್ಣೆಯ ಪೂರೈಕೆ ಯನ್ನೇ ನಿಲ್ಲಿಸುವುದಾಗಿ ಬೆದರಿಕೆ ಯೊಡ್ಡಿದ್ದಾರೆ. ಸಾಸಿವೆ ಎಣ್ಣೆಯನ್ನು ಮೊದಲಿನಂತೆ(ಕಲಬೆರಕೆಮಾಡಿ?) ಮಾರಲು ಅನುಮತಿ ನೀಡಬೇಕೆಂಬ ಅವರ ಒತ್ತಾಯ ಬಿಜೆಪಿ ಸರ್ಕಾರಕ್ಕೆ ದಿಕ್ಕುತೋಚದಾಗಿದೆ. ಕ್ಷುಲ್ಲಕ ವ್ಯಾಪಾರಸ್ಥರ ಲಾಭಿಯೊಂದು ಕೇಂದ್ರ ಸರ್ಕಾರವನ್ನು ಒತ್ತೆಯಾಳಾಗಿಸಿರುವುದು ಇದೇ ಮೊದಲು.

ಆರ್ಥಿಕ ಧೋರಣೆಗಳ ವಿಷಯದಲ್ಲಿ ಕಾಂಗ್ರೆಸ್ ಪಕ್ಷಕ್ಕೂ ಬಿಜೆಪಿಗೂ ಏನೂ ವ್ಯತ್ಯಾಸ ಇಲ್ಲ ಎಂಬುದು ಸಿಪಿಐ(ಎಂ) ಗೆ ಹೊಸ ವಿಚಾರವೇನಲ್ಲ. ಕಾಂಗ್ರೆಸ್‌ನ ಜನವಿರೋಧಿ ಆರ್ಥಿಕ ಧೋರಣೆಗಳನ್ನೇ ಬಿಜೆಪಿ ಸರ್ಕಾರ ಇನ್ನು ಹೆಚ್ಚಿನ ರಭಸದಿಂದ ಮುನ್ನಡೆಸುತ್ತಾ ಹೊರಟಿದೆ ಎಂಬುದು ಇಂದು ಜನಸಾಮಾನ್ಯರ ಅನುಭವಕ್ಕೆ ಬರಲಾರಂಭಿಸಿದೆ. ಇದೇ ಆರ್ಥಿಕ ನೀತಿಗಾಗಿಯೇ ಜನತೆ ಕಾಂಗ್ರೆಸನ್ನು ತಿರಸ್ಕರಿಸಿತ್ತು. ಅದೇ ನೀತಿಗಳನ್ನು ಪುನಃ ಜನತೆಯ ಮೇಲೆ ಹೇರುತ್ತಿರುವ ಬಿಜೆಪಿಗೆ ಅದೇ ಶಿಕ್ಷೆ ಕಾದಿದೆ. ಆದರೆ ಕಾಂಗ್ರೆಸ್ ಪಕ್ಷಕ್ಕೆ ಪಾಠ ಕಲಿಸಲು ತೆಗೆದುಕೊಂಡಷ್ಟು ಸಮಯವನ್ನು ಬಿಜೆಪಿಗೆ ನೀಡುವುದೆಂದರೆ ಅನರ್ಥವಾಗಲಿದೆ ಎಂದು ಸಿಪಿಐ(ಎಂ) ಭಾವಿಸುತ್ತದೆ. ಕಾಂಗ್ರೆಸ್ ಮತ್ತು ಬಿಜೆಪಿ ನಡುವಿನ ಮೂಲಭೂತ ವ್ಯತ್ಯಾಸವೇ ಸಿಪಿಐ(ಎಂ)ನ ಈ ನಿಲುವಿಗೆ ಆಧಾರವಾಗಿದೆ.

ಕಾಂಗ್ರೆಸಿನಂತೆ ಬಿಜೆಪಿಯು ಒಂದು ಬಂಡವಾಳಶಾಹಿ ಪಾಳೇಗಾರಿ ವರ್ಗಗಳ ರಾಜಕೀಯ ಪಕ್ಷವಾಗಿದೆ. ಕಳೆದ ಚುನಾವಣೆಯಿಂದ ನಮ್ಮ ದೇಶದ ಗುತ್ತೆದಾರಿ ಬಂಡವಾಳಿಗರ ಒಂದು ಗುಂಪು ಕಾಂಗ್ರೆಸನ್ನು ಬಿಟ್ಟು ಬಿಜೆಪಿಯತ್ತ ಸರಿದಿದೆ. ಆರ್.ಎಸ್.ಎಸ್. ಎಂಬ ಫ್ಯಾಸಿಸ್ಟ್ ಮಾದರಿಯ ಸಂಘಟನೆಯ ನಿಯಂತ್ರಣದಲ್ಲಿರುವ ಬಿಜೆಪಿಯನ್ನು ನಮ್ಮ ದೇಶದ ಗುತ್ತೆದಾರಿ ಬಂಡವಾಳಿಗರು ಇಲ್ಲಿಯ ವರೆಗೆ ಬೆಂಬಲಿಸುವ ಗೋಜಿಗೆ ಹೋಗಿರಲಿಲ್ಲ. ಕಾಂಗ್ರೆಸ್ ಜನತೆಯ ವಿಶ್ವಾಸಕಳೆದು ಕೊಳ್ಳುತ್ತಿದ್ದಂತೆ ಮೊದಲಿನಂತೆ ಅದನ್ನು ಬೆಂಬಲಿಸುತ್ತಾ ಹೋಗುವುದರಲ್ಲಿ ಪ್ರಯೋಜನವಿಲ್ಲ ಎಂದು ಕೊಂಡು ಬಿಜೆಪಿ ಕಡೆ ವಾಲತೊಡಗಿದ್ದಾರೆ. ಬಂಡವಾಳಶಾಹಿ ಆಳುವ ವರ್ಗಗಳಿಗೆ ಮೊದಲಿನಂತೆ ಆಳುವುದು ಸಾಧ್ಯವಿಲ್ಲ ಎಂದಾಗ ಜನತೆಯು ಮೊದಲಿನಂತೆಯೇ ಆಳಲ್ಪಡಲು ಒಪ್ಪದಿರುವಾಗ ಬಂಡ ವಾಳಶಾಹಿ ಆಳುವ ವರ್ಗಗಳಿಗೆ ತಮ್ಮ ಪ್ರಜಾಪ್ರಭುತ್ವ ಮುಖವಾಡವನ್ನು ಕಳಚಿಹಾಕಿ ಫ್ಯಾಸಿಸ್ಟ್ ಮಾದರಿಯಲ್ಲಿ ಆಳ್ವಿಕೆ ನಡೆಸಲು ಬಿಜೆಪಿ ಅಂತಹ ಒಂದು ರಾಜಕೀಯ ಪಕ್ಷ ಅದಕ್ಕಾಗಿಯೇ ಹೇಳಿಮಾಡಿಸಿದ ಪಕ್ಷವಾಗಿ ದೊರೆತಂತಾಗಿದೆ. ಇದೇ ಕಾಂಗ್ರೆಸ್ಸಿಗೂ ಬಿಜೆಪಿಗೂ ನಡುವೆ ಇರುವ ವ್ಯತ್ಯಾಸ. ಕಾಂಗ್ರೆಸ್ ಕೂಡಾ ಒಂದು ಬಂಡ ವಾಳಶಾಹಿ ಪಕ್ಷವಾಗಿದ್ದರೂ ಅದು ಬಿಜೆಪಿಯಂತೆ ಒಂದು ಕೋಮುವಾದಿ ಪಕ್ಷವಲ್ಲ. ಕೆಲವೊಮ್ಮೆ ಕಾಂಗ್ರೆಸ್ ಪಕ್ಷದಲ್ಲಿ ಕೂಡಾ ಫ್ಯಾಸಿಸ್ಟ್ ಪ್ರವೃತ್ತಿ ಕಂಡು ಬಂದಿದ್ದರೂ ಕೋಮುವಾದಿ ಶಕ್ತಿಗಳಿಗೆ ಕುಮ್ಮಕ್ಕು ನೀಡಿದ ಸಂದರ್ಭಗಳಿದ್ದರೂ ಮೂಲಭೂತವಾಗಿ ಅದೊಂದು ಕೋಮುವಾದಿ ಫ್ಯಾಸಿಸ್ಟ್ ಪಕ್ಷವಾಗಿರು ವುದಿಲ್ಲ. ಆದ್ದರಿಂದ ದೇಶಕ್ಕೆ ದೇಶದ ಐಕ್ಯತೆಗೆ ಬಿಜೆಪಿ ಯಂತಹ ಪಕ್ಷ ಅಧಿಕಾರಕ್ಕೆ ಬಂದಿರುವುದರಿಂದ ಒದಗಿರುವ ಆಪತ್ತಿನಿಂದ ದೇಶವನ್ನು ಪಾರುಮಾಡಲು ಎಲ್ಲಾ ಜಾತ್ಯಾತೀತ ಶಕ್ತಿಗಳು ಒಂದೆಡೆ ನಿಲ್ಲುವುದು ಅನಿವಾರ್ಯವಾಗಿದೆ. ಬಿಜೆಪಿ ಎಷ್ಟು ಹೆಚ್ಚು ದಿನ ಅಧಿಕಾರದಲ್ಲಿ ಮುಂದುವರೆಯುತ್ತದೋ ಅಷ್ಟು ಹೆಚ್ಚು ಅಪಾಯವಿದೆ. ಕಾಂಗ್ರೆಸಿಗೆ ಅದು ಅರ್ಥವಾಗುತ್ತಿಲ್ಲ. ಆದಾಗ್ಯೂ ಬಿಜೆಪಿ ಮತ್ತು ಮಿತ್ರಪಕ್ಷಗಳ ಸಮ್ಮಿಶ್ರ ಸರ್ಕಾರಕ್ಕೆ ಪರ್ಯಾಯವಾಗಿ ಸರ್ಕಾರ ರಚಿಸಲು ಕಾಂಗ್ರೆಸ್ ಮುಂದೆ ಬರಬೇಕಾಗಿರುವುದು ಸಹ ಅನಿವಾರ್ಯವಿದೆ. ಆದ್ದರಿಂದಲೇ ಕಾಂಗ್ರೆಸ್ ಈ ದಿಸೆಯಲ್ಲಿ ಮುಂದೆ ಬಂದರೆ, ಅದಕ್ಕೆ ವಿಷಯ ಆಧಾರಿತ ಬೆಂಬಲ ನೀಡಲು ಸಿಪಿಐ(ಎಂ) ಮುಂದೆ ಬಂದಿದೆ. ಇದರ ಅರ್ಥ ಬಹಳ ಸ್ಪಷ್ಟವಾಗಿದೆ. ಕಾಂಗ್ರೆಸ್ ತನ್ನ ಹಿಂದಿನ ಆರ್ಥಿಕ ನೀತಿಗಳನ್ನು ಬದಲಾಯಿಸಬೇಕು, ಬದಲಾಯಿಸಲು ಅದು ತೀರ್ಮಾನಿಸ ದಿದ್ದರೆ ಸಿಪಿಐ(ಎಂ) ತನ್ನ ರಾಜಿ ಇಲ್ಲದ ಹೋರಾಟವನ್ನು ಮುನ್ನಡೆಸಲು ಬದ್ಧವಾಗಿದೆ

- ನಿತ್ಯಾನಂದ ಸ್ವಾಮಿ

ಏನಾಗಿದೆ ಈ ರಾಜ್ಯ ಜನತಾ ದಳಕ್ಕೆ!

ರಾಜ್ಯದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡು ಸಾಯುತ್ತಿದ್ದರೂ, ಸಿಕ್ಕಾಪಟ್ಟೆ ಮಳೆಬಿದ್ದು ಜನ ಮನೆಮಠ ಕಳೆದು ಕೊಳ್ಳುತ್ತಿದ್ದರೂ ಆತಂಕ ಕಿತ್ತಾಟದಲ್ಲಿಯೇ ಮುಳುಗಿರುವ ರಾಜ್ಯ ಜನತಾ ದಳಕ್ಕೆ ಇದ್ಯಾವುದೂ ಗಮನಕ್ಕೆ ಬರದಿರುವುದು ದೊಡ್ಡ ದುರಂತವಾಗಿದೆ. ಇವರ ನಡುವಿನ ಗುಂಪುಗಾರಿಕೆ ತೇಪೆಹಚ್ಚಲಾಗದಷ್ಟು ತೀವ್ರಗೊಂಡಿದ್ದು ಇಡೀ ಆಡಳಿತ ವ್ಯವಸ್ಥೆ ಕುಸಿದು ಹೋಗಿದೆ. ಮಂತ್ರಿಮಂಡಲ ವಿಸ್ತರಣೆ ನಿಗಮಗಳಿಗೆ ಅಧ್ಯಕ್ಷರ ನೇಮಕಾತಿ ಮೊದಲಾದ ಕ್ರಮಗಳಿಂದ ಜನತಾ ದಳದ ಯಾದವಿ ಕಲಹ ಕೊನೆಗೊಳ್ಳುವ ಸೂಚನೆಗಳಿಲ್ಲ. ನಾಯಕತ್ವದ ಬದಲಾವಣೆಯನ್ನೇ ಒತ್ತಾಯಿಸುತ್ತಿರುವ ಪ್ರಸಕ್ತ ಬಂಡಾಯ ಯಾವ ತಿರುವು ಪಡೆಯಲಿದೆ ಎಂಬುದನ್ನು ಕಾದು ನೋಡಬೇಕು.

ರಾಜ್ಯದ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳ ಪಕ್ಷಪಾತಿಯಾಗಿ ಕಾರ್ಯನಿರ್ವಹಿಸ ಬೇಕಾಗಿದ್ದ ಜನತಾದಳ ಇಂದು ರಾಜ್ಯದಲ್ಲಿ ಪ್ರಜಾಸತ್ತಾತ್ಮಕ ವಾತಾವರಣವನ್ನೇ ನಾಶಮಾಡುತ್ತಿರುವುದು ವಿಪರ್ಯಾಸವಾಗಿದೆ. ಅನಿಷ್ಟ ಜಾತಿ ರಾಜಕೀಯವನ್ನು ಬಿತ್ತಿ ಬೆಳೆಯುತ್ತಿರುವ ಜನತಾ ದಳ ರಾಜ್ಯ ಜನತೆಯ ಐಕ್ಯತೆ, ಐಕ್ಯಮತ್ಯವನ್ನು ಬಲಿತೆಗೆದುಕೊಂಡಿದೆ. ಅಧಿಕಾರಕ್ಕಾಗಿ ಒಕ್ಕಲಿಗರು ಮತ್ತು ಲಿಂಗವಂತರು ಎಂಬ ಎರಡು ಪ್ರಮುಖ ಜಾತಿಗಳ ನಡುವಿನ ಪೈಪೋಟಿಯಿಂದಾಗಿ ರಾಜ್ಯದ ಹಿತಕ್ಕೆ ಸರಿಪಡಿಸಲಾಗದಷ್ಟು ಹಾನಿಯಾಗುತ್ತಿದೆ.

ಕೃಷ್ಣಾ ಕಾವೇರಿಯಂತಿರುವ ಈ ಎರಡು ಪ್ರಮುಖ ಪ್ರವಾಹಗಳು ರಾಜ್ಯದ ಹಿತಸಾಧನೆಗೆ ತಮ್ಮ ಕೊಡುಗೆಗಳನ್ನು ನೀಡುವಂತಾಗುವ ಬದಲು ಸಂಕುಚಿತ ಲಾಭಕ್ಕಾಗಿ ಹೊಡೆದಾಡಿ ವ್ಯರ್ಥವಾಗುತ್ತಿವೆ ರೈತ ಕಾರ್ಮಿಕರ ದೀನದಲಿತರ ಧ್ವನಿಗೆ ಸರ್ಕಾರ ಕಿವುಡಾಗುವಂತಾಗಿದೆ.

ಸತತ ಬರಗಾಲದಿಂದ ತತ್ತರಿಸುತ್ತಿದ್ದ ರಾಜ್ಯದ ಕೆಲವು ಪ್ರದೇಶಗಳು ಈ ಸಲದ ನೈರುತ್ಯ ಮಳೆಯಿಂದ ಭಾರೀ ಅನಾಹುತಕ್ಕೆ ಗುರಿಯಾಗಿವೆ. ಇಲ್ಲಿಯ ವರೆಗೆ 137 ಜನ ಸಾವಿಗೀಡಾಗಿದ್ದಾರೆ. ನೂರಾರು ಮನೆಗಳು ಕುಸಿದು ಬಿದ್ದಿವೆ. ಮುಂಗಾರು ಫಸಲು ನೀರುಪಾಲಾಗಿದೆ. ರಸ್ತೆಗಳು ಸೇತುವೆಗಳು ಕೊಚ್ಚಿಹೋಗಿವೆ. ದನಕರುಗಳು ಸತ್ತುಹೋಗಿವೆ. ಹಿಂಗಾರಿ ಬಿತ್ತನೆ ವಿಳಂಬ ವಾಗಿದೆ. ಸರ್ಕಾರದ ಅಂಕಿ ಅಂಶಗಳ ಪ್ರಕಾರ ಅತಿವೃಷ್ಟಿಯಿಂದ ಖಾಸಗಿ ಹಾಗೂ ಸಾರ್ವಜನಿಕ ಆಸ್ತಿಗೆ ಸುಮಾರು 200 ಕೋಟಿ ರೂ.ಗಳಷ್ಟು ಹಾನಿಯಾಗಿದೆ.

ಈ ಅನಿರೀಕ್ಷಿತ ಪ್ರಕೃತಿ ವಿಕೋಪದಿಂದ ನೊಂದವರ ನೆರವಿಗೆ ಧಾವಿಸುವ ಬದಲು ರಾಜ್ಯ ಜನತಾದಳ ಸರ್ಕಾರವು ಅಧಿಕಾರದ ಕಿತ್ತಾಟದಲ್ಲಿ ಮುಳುಗಿದೆ. ಅತಿವೃಷ್ಟಿ ಪೀಡಿತ ಪ್ರದೇಶಗಳಿಗೆ ಭೇಟಿಯಿತ್ತು ಜನತೆಯ ಸಂಕಷ್ಟಗಳಿಗೆ ಕಿವಿಗೊಡಲು ರಾಜ್ಯದ ಮಂತ್ರಿಗಳಿಗೆ ಸಮಯವಿಲ್ಲ. ಕಳೆದ ವರ್ಷ ಬೆಳೆಹಾನಿಗೆ ತುತ್ತಾದ ರೈತರಿಗೆ ಇಲ್ಲಿಯ ವರೆಗೂ ಪರಿಹಾರ ದೊರೆಯಲಿಲ್ಲ. ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಲ್ಲಿ ಕೆಲವ ಕುಟುಂಬಗಳಿಗೆ ಮಾತ್ರ ತಲಾ ಒಂದು ಲಕ್ಷ ರೂ. ಪರಿಹಾರ ನೀಡಿದ್ದು ಉಳಿದ ಕುಟುಂಬಗಳಿಗೆ ಪರಿಹಾರ ಮಂಜೂರು ಮಾಡಲೇ ಇಲ್ಲ. ಈಗ ಮತ್ತೆ ಇಷ್ಟೆಲ್ಲಾ ಲುಕ್ಸಾನ್ ಆಗಿದ್ದರೂ ಸರ್ಕಾರದಿಂದ ಪರಿಹಾರ ಹರಿದು ಬರುತ್ತಿಲ್ಲ. ಭಾರತೀಯ ಜನತಾ ಪಕ್ಷದ ನೇತೃತ್ವದ ಕೇಂದ್ರ ಸರ್ಕಾರಕ್ಕೂ ನೈಸರ್ಗಿಕ ಪ್ರಕೋಪಕ್ಕೆ ಒಳಗಾದ ರಾಜ್ಯಗಳತ್ತ ಗಮನ ಹರಿಸಲು ಪುರುಸೊತ್ತು ಇಲ್ಲ. ಸಮಯಸಾಧಕ ಮಿತ್ರ ಪಕ್ಷಗಳನ್ನು ಸಂತೈಸುತ್ತಾ ಉತ್ತರದ ನಾಲ್ಕು ರಾಜ್ಯಗಳಲ್ಲಿ ಬರಲಿರುವ ವಿಧಾನ ಸಭಾ ಚುನಾವಣೆಗಳನ್ನು ಎದುರಿಸುವುದೇ ಅದರ ಪ್ರಮುಖ ಸಮಸ್ಯೆಯಾಗಿದೆ. ರಾಜ್ಯಗಳಿಗೆ ನೆರವು ನೀಡುವಾಗಲೂ ರಾಜಕೀಯ ಪಕ್ಷಪಾತ ಮಾಡಲು ಹಿಂಜರಿಯುವುದಿಲ್ಲ.

ಆದರೆ ರಾಜ್ಯದ ದಳ ಸರ್ಕಾರವು ಕೇಂದ್ರದಿಂದ ನೆರವು ಬರಲಿಲ್ಲ ಎಂದು ಕೊಂಡು ತನ್ನ ವೈಫಲ್ಯವನ್ನು ಮರೆಮಾಚುವಂತಿಲ್ಲ. ಜನತೆಗೆ ಪರಿಹಾರ ಒದಗಿಸುವ ವಿಷಯದಲ್ಲಿ ಅದರ ಕಾಳಜಿ ಅತ್ಯಂತ ಕನಿಷ್ಠ . ಅಗತ್ಯ ವಸ್ತುಗಳ ಬೆಲೆಏರಿಕೆಯಿಂದ ಜನತೆ ಈಗಾಗಲೇ ತತ್ತರಿಸುತ್ತಿರುವಾಗ ವಿದ್ಯುತ್ ದರಗಳನ್ನು ಏರಿಸಿರುವುದು, ರಸಗೊಬ್ಬರಗಳ ಮೇಲೆ ವಹಿವಾಟು ತೆರಿಗೆ ಹೇರಲು ಹೊರಟಿರುವುದು ಎಳ್ಳಷ್ಟು ಸಮರ್ಥನೀಯವಲ್ಲ. ಸರ್ಕಾರಿ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸುವ ಮತ್ತು ಹೊಸ ಆಸ್ಪತ್ರೆಗಳನ್ನು ಆರಂಭಿಸುವ ಹೆಸರಿನಲ್ಲಿ ರೋಗಿಗಳಿಂದ ಶುಲ್ಕ ವಸೂಲು ಮಾಡಲು ಸರ್ಕಾರ ಆಲೋಚಿಸುತ್ತಿರುವುದು ಮತ್ತೊಂದು ಜನವಿರೋಧಿ ಕ್ರಮವಾಗಿದೆ. ಈಗಾಗಲೇ ಸರ್ಕಾರಿ ಆಸ್ಪತ್ರೆಗಳಲ್ಲಿ ಭ್ರಷ್ಟಾಚಾರ, ಲಂಚಗುಳಿತನ ತಾಂಡವ ವಾಡುತ್ತಿದೆ. ಸೇವೆಗೆ ಶುಲ್ಕ ವಿದಿಸುವುದರಿಂದ ಪರಿಸ್ಥಿತಿ ಇನ್ನಷ್ಟು ಹದಗೆಡುವುದು ಖಚಿತ. ಬಡರೋಗಿಗಳಿಗೆ ವೈದ್ಯಕೀಯ ಚಿಕಿತ್ಸೆ ಕೈಗೆಟುಕದಂತೆ ಮಾಡುವ ಮೂಲಕ ದುಡ್ಡಿದ್ದವರಿಗೆ ಮಾತ್ರ ಆರೋಗ್ಯದ ಹಕ್ಕನ್ನು ನೀಡಿದಂತಾಗುತ್ತದೆ.

ಜನಸಾಮಾನ್ಯರ ಮೇಲೆ ಹೊರೆ ಹೇರುವ ಈ ಕ್ರಮಗಳ ಕುರಿತು ಸರ್ಕಾರ ಪುನರ್ವಿಮರ್ಶಿಲನೆ ಮಾಡಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

ರಾಜ್ಯದಲ್ಲಿ ಹೆಚ್ಚುತ್ತಿರುವ ದರೋಡೆಗಳು, ಕೊಲೆಗಳು ಜನತೆಯಲ್ಲಿ ಆಘಾತಕಾರಿ ಅಭದ್ರತೆಯನ್ನು ಉಂಟುಮಾಡಿವೆ. ಬೆಂಗಳೂರು ನಗರ ರೌಡಿಗಳ ನಗರವಾಗಿ ಮಾರ್ಪಾಡಾಗುತ್ತಿದೆ. ಇಲ್ಲಿ ನಡೆಯುವ ಅತ್ಯಾಚಾರ, ಡಕಾಯಿತಿ, ಕೊಲೆ, ರೌಡಿಗಳ ದಾಂಧಲೆ ಇವುಗಳ ಸುಳಿವು ಪೋಲೀಸರಿಗೆ ಮಾತ್ರ ಸಿಗುವುದೇ ಇಲ್ಲ. ಆಳುವ ಸರ್ಕಾರಕ್ಕೆ ಜನಪರ ಕಾಳಜಿ ಇಲ್ಲದೆ ಹೋದಾಗ ಅದರ ಪೋಲಿಸ್ ಇಲಾಖೆ ಮಾತ್ರ ಜನರ ಪರ ಕೆಲಸಮಾಡಲು ಹೇಗೆ ಸಾಧ್ಯ? ಜನತೆಯ ಪ್ರಜಾಸತ್ತಾತ್ಮಕ ಆಂದೋಲನಗಳನ್ನು ಮುರಿಯಲು ಕಾರ್ಮಿಕರ ವಿವಾದಗಳಲ್ಲಿ ಮಾಲೀಕರ ಪರವಾಗಿ ಹಸ್ತಕ್ಷೇಪ ಮಾಡುವ ವಿಷಯದಲ್ಲಿ ಮಾತ್ರ ಹಿಂದೆ ಬೀಳುವುದಿಲ್ಲ. ಇವರು ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಕಳೆದ ಆಗಸ್ಟ್ ತಿಂಗಳಿಂದ ನಿಷೇದಾಜ್ಞೆಯನ್ನು ಜಾರಿಗೊಳಿಸಲಾಗಿದೆ. ಕಾನೂನು ಬದ್ಧವಾಗಿ ಸಂಘವನ್ನು ರಚಿಸಿಕೊಳ್ಳಲು ಹೊರಟ ಕಾರ್ಮಿಕರ ಮೇಲೆ ಕಾರ್ಖಾನೆಗಳ ಆಡಳಿತ ವರ್ಗ ಕಾನೂನುಬಾಹಿರ ದೌರ್ಜನ್ಯ ನಡೆಸಿದರೆ ಪೋಲೀಸರು ಕಾನೂನು ಉಲ್ಲಂಘಿಸುವ ಮಾಲೀಕರ ವಿರುದ್ಧ ಕ್ರಮ ಜರಗಿಸುವ ಬದಲು ಕಾರ್ಮಿಕರ ಹಕ್ಕುಗಳ ಮೇಲೆ ದಾಳಿ ಮಾಡುತ್ತಾರೆ. ಮಾಲೀಕರ ಕಾನೂನುಬಾಹಿರ ವರ್ತನೆಯ ವಿರುದ್ಧ ಪ್ರತಿಭಟಿಸಲು ಕಾರ್ಮಿಕರಿಗೆ ಅವಕಾಶಮಾಡುವ ಬದಲು ಮಾಲೀಕರ ಎಂಜಲಿಗೆ ಕೈಯೊಡ್ಡಿ ಕಾರ್ಮಿಕರ ಮೇಲೆ ಧಾಳಿಮಾಡುತ್ತಾರೆ. ಬಾಗೂರು ನವಿಲೆ ಪ್ರದೇಶದ ರೈತರ ಚಳುವಳಿಯನ್ನು ಹತ್ತಿಕ್ಕಲು ಪೋಲೀಸ್ ಪಡೆಯನ್ನು ಬಳಸಿದ್ದು ಇದೇ ಸರ್ಕಾರ!

ದಲಿತರ ಮೇಲಿನ ಸವರ್ಣೀಯರ ದೌರ್ಜನ್ಯದ ಪ್ರಕರಣಗಳು ಸಹ ಈ ಅವಧಿಯಲ್ಲಿ ಹೆಚ್ಚಾಗಿವೆ. ಜನತಾ ದಳ ಪಕ್ಷವು ರಾಜ್ಯದಲ್ಲಿ ಮೇಲ್ಜಾತಿ ಭೂಮಾಲೀಕರ ಪಕ್ಷ ಎಂಬುದು ಜನರ ಮನಸ್ಸಿನಲ್ಲಿ ಗಟ್ಟಿಯಾಗುತ್ತಾ ಹೋಗುತ್ತಿದೆ. ಇದರ ಅಪಾಯ ರಾಜ್ಯದ ಜನತಾ ದಳ ಪಕ್ಷಕ್ಕೆ ಅರ್ಥವಾಗದಿರುವುದು ಕಳವಳಕಾರಿ ವಿಷಯವಾಗಿದೆ. ರಾಜ್ಯದಲ್ಲಿ ಹೆಚ್ಚುತ್ತಿರುವ ರೈತರ, ಕಾರ್ಮಿಕರ, ಜನಸಾಮಾನ್ಯರ ಅತೃಪ್ತಿಯ ಲಾಭವನ್ನು ಗಿಟ್ಟಿಸಿಕೊಂಡು ಅಧಿಕಾರಕ್ಕೆ ಬರಲು ಕಾಂಗ್ರೆಸ್ (ಐ) ಮತ್ತು ಬಿಜೆಪಿ ಪಕ್ಷಗಳು ತೀವ್ರ ಪೈಪೋಟಿ ನಡೆಸುತ್ತಿರುವುದು ಜನತಾದಳಕ್ಕೆ ಕಾಣದಷ್ಟು ಅದು ಕುರುಡಾಗಿದೆ. ಕೇಂದ್ರದಲ್ಲಿ ಪ್ರಧಾನ ಮಂತ್ರಿಯಾಗಿ ಒಂದು ಜಾತ್ಯಾತೀತ ಸರ್ಕಾರದ ನೇತೃತ್ವವಹಿಸಿದ್ದ ದೇವೇಗೌಡರಿಗೂ ಈ ಅಪಾಯದ ಅರಿವು ಮೂಡದಿರುವುದು ಶೋಚನೀಯವಾಗಿದೆ. ರಾಜ್ಯದಲ್ಲಿ, ಜನತೆಯಿಂದ ತಿರಸತ ಕಾಂಗ್ರೆಸ್(ಐ) ಆಗಲಿ ಕೋಮುವಾದಿ ಬಿಜೆಪಿಯಾಗಲಿ ಅಧಿಕಾರಕ್ಕೆ ಬರುವುದನ್ನು ತಡೆಯಲು ರಾಜ್ಯದ ಜನತಾದಳ ತನ್ನ ಒಳಜಗಳಗಳನ್ನು ನಿಲ್ಲಿಸಿ ಜನತೆಯ ಕಡೆ ಮುಖಮಾಡುವುದು ಅವಶ್ಯವಿದೆ. ಶಾಸಕರು, ಮಂತ್ರಿಗಳು ಆಗಿರುವ ತಮ್ಮ ಮಕ್ಕಳಿಗೆ ಬುದ್ದಿಹೇಳಿ ಅವರನ್ನು ನಿಯಂತ್ರಿಸುವುದು ದೇವೇಗೌಡರಿಗೆ ಸಾಧ್ಯವಾಗಬೇಕು.

ರಾಜ್ಯದಲ್ಲಿ ಮೇಲಿಂದ ಮೇಲೆ ಸರ್ಕಾರವನ್ನು ಅಭದ್ರಗೊಳಿಸುವ ಅಧಿಕಾರದಾಹದ ಶಾಸಕರನ್ನು ಪ್ರಚೋದಿಸುವುದು ನಿಲ್ಲಬೇಕು. ನೈಸರ್ಗಿಕ ವಿಕೋಪ, ಬೆಲೆಏರಿಕೆ, ಗಲಭೆಗಳು ಇತ್ಯಾದಿಗಳಿಂದ ಜರ್ಜರಿತವಾದ ಜನತೆಗೆ ಅವಶ್ಯಕವಾದ ಪರಿಹಾರವನ್ನು ನೀಡುವ ಮೂಲಕ ಅವರ ವಿಶ್ವಾಸವನ್ನು ಪುನರ್ಗಳಿಸಲು ರಾಜ್ಯ ಜನತಾ ದಳ ಆದ್ಯತೆ ನೀಡಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ.




ಕರ್ನಾಟಕದ ಪ್ರತಿನಿಧಿಗಳು ಮತ್ತು ವೀಕ್ಷಕರು






ಮಹಾಧಿವೇಶನದಲ್ಲಿ ಮಹಿಳಾ ಮುಖಂಡರು



ಅಧಿವೇಶನದ ಸಭಾಂಗಣದ ಪ್ರವೇಶ ದ್ವಾರ







ಬಹಿರಂಗ ರ್‍ಯಾಲಿಯ ವೇದಿಕೆ ಮೇಲೆ ವಿದೇಶಿ ಪ್ರತಿನಿಧಿಗಳು

ಬುದ್ಧ! ಅಳಬೇಡ... ಪುನಃ ಹಿಂಗಾಗಲ್ಲ ನನ್ನಾಣೆ! ಪುನಃ ಹಿಂಗಾಗಲ್ಲ... ಪೋಖ್ರಾನ್ ಹಿರೋಷಿಮಾ ಆಗಲ್ಲ

.... ಇದು ಕಲಾಪ್ರದರ್ಶನದಲ್ಲಿದ್ದ 'ಅಳುವ ಬುದ್ಧನ' ತೈಲಚಿತ್ರ ವೊಂದರ ಜತೆಗಿದ್ದ ತಲೆಬರಹ. ಬಿಜೆಪಿಯ 'ಘನ' ಕೇಂದ್ರ ಸರ್ಕಾರ ತನ್ನ ಅಣು ಕಿಡಿಗೇಡಿತನಕ್ಕೆ 'ನಗುವ ಬುದ್ಧ' ಎಂದು ನಾಮಕರಣ ಮಾಡಿದ್ದಕ್ಕೆ ಲೇವಡಿ ಮಾಡುತ್ತದೆ ಈ ಚಿತ್ರ. ಇದು 'ಹಿರೋಷಿಮಾ ದಿಂದ ಪೋಖ್ರಾನ್‌ವರೆಗೆ' ಎಂಬ ಚಿತ್ರ ಪ್ರದರ್ಶನದ ಒಂದು ಚಿತ್ರ. ಇಂತಹ 20-25 ಚಿತ್ರಗಳು ಪ್ರದರ್ಶನ ದಲ್ಲಿದ್ದವು. ಅಣುಯುದ್ಧವನ್ನು ಖಂಡಿಸಿ, ಶಾಂತಿಯ ಸಂದೇಶ ಕೊಡುವ ಚಿತ್ರಗಳು. ಚಡ್ಡಿ-ಪರಿವಾರ ಪೋಖ್ರಾನ್-II ಕ್ಕೆ ಕೊಡುವ ಸಮಜಾಯಿಷಿಯನ್ನು ಬಯಲಿಗೆಳೆಯುವ ಚಿತ್ರಗಳು.

ಸಿಪಿಐ(ಎಂ)ನ 16ನೇ ಮಹಾಧಿವೇಶನ ನಡೆಯುತ್ತಿದ್ದ ಇ.ಎಂ.ಎಸ್. ನಗರ (ನಜರುಲ್ ಮಂಚ್)ದ ಎದುರಿಗೆ ಹಾಯ್ದು ಹೋಗುವ ಮೇಘನಾದ್ ಸಾಹಾ ಸರಣಿ(ಅಂದರೆ ರಸ್ತೆ - ಬಂಗಾಲಿ ಭಾಷೆಯಲ್ಲಿ) ದಾಟಿದರೆ ಸುನಿಲ್ ಮೈತ್ರಾ ನಗರ (ಬೇರೆ ಸಮಯದಲ್ಲಿ ವಿವೇಕಾನಂದ ಪಾರ್ಕ್). ಮಹಾಧಿವೇಶನ ಆರಂಭವಾಗುವ ಹಿಂದಿನ (ಅಕ್ಟೋಬರ್)ದಿನದಿಂದ ಕೊನೆಯಾಗುವ ಹಿಂದಿನ ದಿನ (ಅಕ್ಟೋಬರ್ 10)ದ ವರೆಗೆ ಪ್ರತಿದಿನ ಇಲ್ಲಿ ಸಂಜೆ ಹಬ್ಬದ ವಾತಾವರಣ. ಸಂಜೆ ಐದರಿಂದ ಆರುವರೆ ವರೆಗೆ ವಿಚಾರಸಂಕಿರಣ, ಆರುವರೆಯಿಂದ ಎಂಟು ಎಂಟುವರೆವರೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು. ಎರಡು ಸಾವಿರ ಜನ ಪಾಲ್ಗೊಳ್ಳುವ ಕಾರ್ಯಕ್ರಮ. ಅದರ ಪಕ್ಕದಲ್ಲೇ ಈ ಚಿತ್ರಪ್ರದರ್ಶನ. ಇಡೀ ದಿನ ಈ ಪ್ರದರ್ಶನಕ್ಕೆ ಭೇಟಿಯ ಅವಕಾಶ. ಸಂಜೆಯಾಗುತ್ತಿದ್ದಂತೆ ಅಲ್ಲಿಗೆ ಸಾಲು ಗಟ್ಟಿಕೊಂಡು ಬರುತ್ತಿದ್ದ ಜನಪ್ರವಾಹ.

ಚಿತ್ರಪ್ರದರ್ಶನ 'ಹಿರೋಷಿಮಾದಿಂದ ಪೋಖ್ರಾನ್'ವರೆಗೆ ಮಾತ್ರವಲ್ಲ ಅದೇ ಸ್ಥಳದಲ್ಲಿ 20 ರಿಂದ 25 ತೈಲ ಚಿತ್ರಗಳನೊಳಗೊಂಡ ಇತರ ಇನ್ನೂ ಮೂರು ಚಿತ್ರ ಪ್ರದರ್ಶನಗಳು - ಕಮ್ಯುನಿಸ್ಟ್ ಮ್ಯಾನಿಫೆಸ್ಟೋದ 150 ವರ್ಷಗಳು, 50 ವರ್ಷಗಳ ಸ್ವಾತಂತ್ರ್ಯ ಮತ್ತು ಎಡರಂಗದ 20 ವರ್ಷಗಳು.




ನಾಲ್ಕು ಪ್ರದರ್ಶನಗಳಲ್ಲಿ 'ಕಮ್ಯುನಿಸ್ಟ್ ಮ್ಯಾನಿಫೆಸ್ಟೋದ 150 ವರ್ಷಗಳು'



ವಿಶಿಷ್ಟವಾಗಿತ್ತು. ಕಮ್ಯುನಿಸ್ಟ್ ಮ್ಯಾನಿಫೆಸ್ಟೋ ದಿಂದ ಆರಂಭಿಸಿ ವಿಕಾಸಗೊಂಡ ದುಡಿಯುವ ವರ್ಗದ ಕಣ್ನೋಟ, ನಿಲುವು ಅದನ್ನು ನಮ್ಮ ದೇಶದಲ್ಲಿ ಮುಂದೊಯ್ಯುತ್ತಿರುವ ಸಿಪಿಐ(ಎಂ)ನ ನಿಲುವುಗಳು ಈ ನಾಲ್ಕು ಪ್ರದರ್ಶನಗಳಲ್ಲಿ ಹಾಸು ಹೊಕ್ಕಾಗಿದ್ದವು. ನೋಡುವವರಲ್ಲಿ ಅವನ್ನು ಬಿತ್ತುತ್ತಿದ್ದವು. ಕಮ್ಯುನಿಸ್ಟ್ ಮ್ಯಾನಿಫೆಸ್ಟೋದ ಹಲವು ಸತ್ವಶಾಲಿ, ಪ್ರಸಿದ್ಧ ವಾಕ್ಯಗಳೇ ಆ ಚಿತ್ರಗಳಿಗೆ ತಲೆಬರಹಗಳಾಗಿದ್ದವು. ತಲೆಬರಹಗಳು ಬಂಗಾಳಿ ಮತ್ತು ಇಂಗ್ಲೀಷಿನಲ್ಲಿದ್ದವು.



'50ವರ್ಷಗಳ ಸ್ವಾತಂತ್ರ್ಯ...' ಪ್ರದರ್ಶನ ದೇಶದ ಬೆಳವಣಿಗೆಯಲ್ಲಿನ ಏಳು ಬೀಳುಗಳು, ನ್ಯೂನ್ಯತೆ, ದಾರಿ ತಪ್ಪುವಿಕೆಯನ್ನು ದುಡಿಯುವ ವರ್ಗದ ದೃಷ್ಟಿಕೋಣದಿಂದ ಬಿಂಬಿಸಿತ್ತು. ಈ ಪ್ರದರ್ಶನದಲ್ಲಿ ದೇಶದ ದುರ್ಗತಿಯನ್ನು ಬಿಂಬಿಸುವ ಹಲವು ಪ್ರಬಲ ದೃಶ್ಯಗಳಿದ್ದವು. ಮಹಿಳೆಯನ್ನು ಭೋಗದ ವಸ್ತುವಾಗಿಸುವ ಜಾಗತೀಕರಣ ಹಬ್ಬಿಸುವ ಬಳಕೆದಾರ ಸಂಸ್ಕೃತಿಯನ್ನು ಬಿಂಬಿಸುವ ಚಿತ್ರವೊಂದರಲ್ಲಿ ಟಿವಿ ಆಂಟೆನಾವೊಂದು ಮಹಿಳೆಯ ದೇಹವನ್ನು ಸೀಳಿಗೊಂಡು ಹೋಗಿತ್ತು.



ಎಡರಂಗದ 20 ವರ್ಷಗಳ ಸಾಧನೆ, ದುಡಿಯುವ ಜನರ ಹೋರಾಟದಲ್ಲಿ ಅದರ ಮಹತ್ವ ಎಲ್ಲಾ ಜನರನ್ನು ವಿಮೋಚನೆ ಮಾಡುವ ಜನತಾ ಪ್ರಜಾಪ್ರಭುತ್ವ ಕ್ರಾಂತಿಯಲ್ಲಿ ಅದರ ಪಾತ್ರದ ಬಗ್ಗೆ ಚಿತ್ರಗಳಿದ್ದವು.

ಪ್ರದರ್ಶನವನ್ನು ವೀಕ್ಷಿಸುತ್ತಿರುವ ಸುರ್ಜಿತ್



Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ.2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor: G.N. NAGARAJ